ಐಕ್ಯರಂಗ

ಸಂಪುಟ 21 ಸಂಚಿಕೆ 52

ಡಿಸೆಂಬರ್ 21-27, 1998

2.00

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಕೊಲ್ಲಿಯಲ್ಲಿ ಮತ್ತೆ ಯುದ್ಧದ ಕಾರ್ಮೋಡ

ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಾಗಿ ಕಾಂ. ಸೂರಿ ಆಯ್ಕೆ

ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಹಾಗೂ ರಾಜ್ಯದ ಹಿರಿಯ ಕಾರ್ಮಿಕ ಮುಖಂಡ ಎಸ್.ಸೂರ್ಯನಾರಾಯಣ ರಾವ್ ಅವರು ಸಿಪಿಐ(ಎಂ)ನ ಕೇಂದ್ರ ಸಮಿತಿಗೆ ಆಯ್ಕೆಗೊಂಡಿದ್ದಾರೆ.

ಡಿಸೆಂಬರ್ 15 ಮತ್ತು 16 ರಂದು ನವದೆಹಲಿಯಲ್ಲಿ ಸಭೆ ಸೇರಿದ ಕೇಂದ್ರ ಸಮಿತಿ ಪಕ್ಷದ ಹೊಸ ಪೊಲಿಟ್‌ಬ್ಯೂರೋವನ್ನೂ ಆರಿಸಿತು. ಹೊಸ ಪೊಲಿಟ್‌ಬ್ಯೂರೋ ಸದಸ್ಯರ ಹೆಸರುಗಳು ಹೀಗಿವೆ.

1. ಹರ್ಕಿಶನ್ ಸಿಂಗ್ ಸುರ್ಜಿತ್
2. ಜ್ಯೋತಿಬಸು
3. ಇ.ಬಾಲಾನಂದನ್
4. ಇ.ಕೆ.ನಾಯನಾರ್
5. ವಿ.ಎಸ್.ಅಚ್ಯುತಾನಂದನ್
6. ಶೈಲೇನ್ ದಾಸ್‌ಗುಪ್ತಾ
7. ಪ್ರಕಾಶ್ ಕಾರಟ್
8. ಎಸ್.ರಾಮಚಂದ್ರನ್ ಪಿಳ್ಳೈ
9. ಸೀತಾರಾಂ ಯೆಚೂರಿ
10. ಪಿ.ರಾಮಚಂದ್ರನ್
11. ಆರ್.ಉಮಾನಾಥ್
12. ಎಂ.ಹನುಮಂತರಾವ್*
13. ಎಂ.ಕೆ.ಪಂಧೆ*
14. ಬಿಮನ್ ಬಸು*
15. ಅನಿಲ್ ಬಿಸ್ವಾಸ್*
16. ಮಾಣಿಕ್ ಸರ್ಕಾರ್*
17. ಪಿನರಾಯಿ ವಿಜಯನ್*

* ಈ ಪಟ್ಟಿಯಲ್ಲಿ ಕೊನೆಯ ಆರು ಮುಖಂಡರು ಪೊಲಿಟ್‌ಬ್ಯೂರೋಗೆ ಮೊದಲ ಬಾರಿಗೆ ಚುನಾಯಿತರಾಗಿದ್ದಾರೆ.

ಕಲ್ಕತ್ತೆಯಲ್ಲಿ ನಡೆದ ಸಿಪಿಐ(ಎಂ)ನ ಹದಿನಾರನೇ ಮಹಾಧಿವೇಶನ ಹೊಸ ಕೇಂದ್ರ ಸಮಿತಿಯ ಸಂಖ್ಯೆ 75 ಇರಬೇಕೆಂದು ನಿರ್ಧರಿಸಿ 66 ಮುಖಂಡರನ್ನು ಆರಿಸಿತ್ತು. ಹೊಸ ಪೊಲಿಟ್‌ಬ್ಯೂರೋವನ್ನು ನವೆಂಬರ್ ವಿಧಾನಸಭಾ ಚುನಾವಣೆಗಳ ನಂತರ ನಡೆಯುವ ಹೊಸ ಕೇಂದ್ರ ಸಮಿತಿಯ ಸಭೆಯಲ್ಲಿ ಆರಿಸಲು ನಿರ್ಧರಿಸಲಾಗಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಕೇಂದ್ರ ಸಮಿತಿಯ ತೆರವಾಗಿರುವ ಸ್ಥಾನಗಳಲ್ಲಿ ಆರಕ್ಕೆ ಕೇಂದ್ರಸಮಿತಿಯ ಈ ಸಭೆ ಕರ್ನಾಟಕದ ಎಸ್.ಸೂರ್ಯನಾರಾಯಣ ರಾವ್ ರವರ ಜತೆಗೆ ಟಿ.ಕೆ.ರಂಗರಾಜನ್, ಟಿ.ವೀರಭದ್ರಂ, ಮಿಥಾಲಿ ಕುಮಾರ್, ಶ್ರೀಮತಿ ಹಾಗೂ ಕನ್ಯೆ ಬ್ಯಾನರ್ಜಿಯವರನ್ನು ಆರಿಸಿತು.

ಅಮೆರಿಕಾ - ಬ್ರಿಟನ್ ಯುದ್ಧಕೋರತನವನ್ನು ಪ್ರತಿಭಟಿಸಲು ಸಿಪಿಐ(ಎಂ) ಕರೆ

ಡಿಸೆಂಬರ್ 17 ರ ಬೆಳಗಿನ ಜಾವ ಅಮೆರಿಕ ಮತ್ತು ಬ್ರಿಟನ್. ಇರಾಕಿನ ಮೇಲೆ ಕ್ಷಿಪಣಿ ಹಾಗೂ ಬಾಂಬ್ ಧಾಳಿ ಆರಂಭಿಸಿರುವ ಸುದ್ದಿ ಇಡೀ ಜಗತ್ತನ್ನು ಕಂಗೆಡಿಸಿದೆ. ವಾಸ್ತವವಾಗಿ ಇದು ಅಪ್ರಚೋದಿತ ಧಾಳಿ, ಇರಾಕ್ ವಿಶ್ವಸಂಸ್ಥೆಯ ಶಸ್ತ್ರಾಸ್ತ್ರ ಪರೀಕ್ಷಣಾ ತಂಡದೊಂದಿಗೆ ಸಹಕರಿಸಲಿಲ್ಲ ಎಂಬ ಆಪಾದನೆ ಕೇವಲ ನೆವ ಎಂದು ಎಡಪಕ್ಷಗಳು ಖಂಡಿಸಿವೆ. ನಿಜ ಸಂಗತಿ ಎಂದರೆ ಈ ಪರೀಕ್ಷಣೆಗಳನ್ನು ಇರಾಕಿನ ಸಾರ್ವಭೌಮತೆಯನ್ನು ಉಲ್ಲಂಘಿಸಲು, ಇರಾಕಿನ ವಿರುದ್ಧ ನಿರ್ಬಂಧಗಳನ್ನು ಅನಗತ್ಯವಾಗಿ ಮುದುವರೆಸಲು ದುರುಪಯೋಗ ಪಡಿಸಲಾಗುತ್ತಿದೆ. ಇದರಿಂದ ಸಾವಿರಾರು ಇರಾಕಿ ಜನತೆ, ಮಕ್ಕಳು ಹಸಿವಿನಿಂದ ಸಾಯುವಂತಾಗಿದೆ ಎಂದು ನಾಲ್ಕು ಎಡಪಕ್ಷಗಳಾದ ಸಿಪಿಐ(ಎಂ), ಸಿಪಿಐ, ಆರ್.ಎಸ್.ಪಿ. ಹಾಗೂ ಫಾರ್ವರ್ಡ್‌ಬ್ಲಾಕ್ ಆಪಾದಿಸಿದೆ.

ಅಮೆರಿಕಾ ಮತ್ತು ಬ್ರಿಟನ್ ವಿಶ್ವಸಂಸ್ಥೆಯನ್ನು ಸಂಪೂರ್ಣವಾಗಿ ಬದಿಗೊತ್ತಿ, ಎಲ್ಲಾ ಅಂತರ್‍ರಾಷ್ಟ್ರೀಯ ಕಾನೂನುಗಳನ್ನು ಏಕಪಕ್ಷೀಯವಾಗಿ ಉಲ್ಲಂಘಿಸಿ ಈ ದುಷ್ಕೃತ್ಯ ನಡೆಸಿವೆ ಎಂದು ಎಡಪಕ್ಷಗಳು ಬಲವಾಗಿ ಖಂಡಿಸಿವೆ, ತನ್ನ ವಿರುದ್ಧ ಅನಿವಾರ್ಯವೆನಿಸಿರುವ ವಾಗ್ದಂಡನೆಯ ಗಮನವನ್ನು ಬೇರೆಡೆಗೆ ಸೆಳೆಯಲು ಮಾತ್ರವೇ ಅಧ್ಯಕ್ಷ ಕ್ಲಿಂಟನ್ ಇಂತಹ ಕಾನೂನುಬಾಹಿರ ಕಾರ್ಯಾಚರಣೆ ಗಿಳಿದಿರುವುದು ಅತ್ಯಂತ ಅಘಾತಕಾರಿ ಎಂದು ಎಡಪಕ್ಷಗಳು ಉಗ್ರವಾಗಿ ಖಂಡಿಸಿವೆ.

ಹಿಂದೆ ಅಮೆರಿಕಾ ಅಫಘಾನಿಸ್ತಾನ ಮತ್ತು ಬೂತಾನ್ ಮೇಲೆ ಬಾಂಬ್ ಧಾಳಿ ಮಾಡಿದಾಗ ಹಿಂಜರಿದಂತೆ ಈ ಬಾರಿಯೂ ಮಾಡದೆ ಈ ದುಷ್ಕೃತ್ಯವನ್ನು ನೇರ ಮಾತುಗಳಲ್ಲಿ ಖಂಡಿಸಬೇಕೆಂದು ಭಾರತ ಸರ್ಕಾರಕ್ಕೆ ಕರೆ ನೀಡಿರುವ ಎಡಪಕ್ಷಗಳು ಅಮೆರಿಕನ್ ಆಕ್ರಮಣದ ವಿರುದ್ಧ ಬಲಿಷ್ಟ ಪ್ರತಿಭಟನಾ ಮತಪ್ರದರ್ಶನಗಳನ್ನು ನಡೆಸಬೇಕು ಎಂದು ದೇಶದಲ್ಲಿನ ಎಲ್ಲಾ ಪಕ್ಷಗಳಿಗೆ ಹಾಗೂ ಜನವಿಭಾಗಗಳಿಗೆ ಮನವಿ ಮಾಡಿದೆ.

ಸಿಪಿಐ(ಎಂ) ರಾಜ್ಯ ಸಮಿತಿ ಕರೆ

ಯಾವ ಕಾರಣಕ್ಕೂ ಸಮರ್ಥಿಸಲಾಗದಂತಹ ಈ ಬಾಂಬ್ ಧಾಳಿಯ ವಿರುದ್ಧ ರಾಜ್ಯಾದ್ಯಂತ ಡಿಸೆಂಬರ್ 21 ರಂದು ಅಥವಾ ತುರ್ತಾಗಿ ಪ್ರತಿಭಟನೆ ನಡೆಸಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕರೆ ನೀಡಿದೆ. ಬೆಂಗಳೂರಿನಲ್ಲಿ ಡಿಸೆಂಬರ್ 18 ರ ಸಂಜೆಯೇ ಸಿಪಿಐ(ಎಂ), ಸಿಪಿಐ ಮತ್ತಿತರ ಪಕ್ಷಗಳು, ಸಂಸ್ಥೆಗಳು ಪ್ರತಿಭಟನಾ ಪ್ರದರ್ಶನ ನಡೆಸಿವೆ.

ಡಿಸೆಂಬರ್ 17 ರಂದು ಬೆಂಗಳೂರಿನಲ್ಲಿ ಸಭೆ ಸೇರಿದ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯು ಅಮೆರಿಕವು ಇರಾಕ್ ಮೇಲೆ ನಡೆಸಿದ ಬಾಂಬ್ ಧಾಳಿಯನ್ನು ಖಂಡಿಸಿದ್ದು ಈ ಕೆಳಗಿನ ಗೊತ್ತುವಳಿಯನ್ನು ಅಂಗೀಕರಿಸಿದೆ.

ಇಂದು ಬೆಳಗಿನ ಜಾವ 3.30ಕ್ಕೆ ಅಮೆರಿಕವು ಇರಾಕಿನ ಮೇಲೆ ನಡೆಸಿರುವ ಅಪ್ರಚೋದಿತ ಬಾಂಬ್ ಧಾಳಿಯನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯು ಅತ್ಯುಗ್ರವಾಗಿ ಖಂಡಿಸಿದೆ. ಶಸ್ತ್ರಾಸ್ತ್ರ ಪರಿಶೀಲನೆಗೆ ಇರಾಕ್ ಅಸಹಕಾರ ತೋರುತ್ತಿದೆ ಎಂಬ ನೆಪವೊಡ್ಡಿ ಅಮೆರಿಕ ನಡೆಸಿರುವ ವೈಮಾನಿಕ ದಾಳಿಯಿಂದ 45 ಅಮಾಯಕರು ಸಾವಿಗೀಡಾಗಿದ್ದಾರೆ ಎಂದೂ, 2000 ಕ್ಕೂ ಹೆಚ್ಚು ಜನ ಗಾಯ ಗೊಂಡಿದ್ದಾರೆ ಎಂದು ವರದಿಯಾಗಿದೆ. ಸುಮಾರು 200 ಯುದ್ಧ ವಿಮಾನಗಳು ಹಾಗೂ 20 ಯುದ್ಧ ಹಡಗಗಳು ಕಾರ್ಯಾಚರಣೆಯಲ್ಲಿ ತೊಡಗಿವೆ ಎಂದು ವರದಿಯಾಗಿದ್ದು ಬಾಗ್ದಾದ್ ಮೇಲೆ ಮತ್ತೊಮ್ಮೆ ಯುದ್ಧದ ಕಾರ್ಮೋಟ ಮುಸುಕಿದಂತಾಗಿದೆ.

ವಿಶ್ವಸಂಸ್ಥೆ ತಪಾಸಕರಿಗೆ ಶಸ್ತ್ರಾಸ್ತ್ರ ಪರಿಶೀಲಿಸಲು ಬಾಗ್ದಾದ್ ಸಹಕರಿಸುವುದಿಲ್ಲ ಎಂಬ ಆರೋಪವನ್ನು ಸದ್ದಾಂ ಹುಸೇನ್ ಅಲ್ಲಗಳೆದಿದ್ದಾರಲ್ಲದೆ ಇದು ಅಮೇರಿಕದ ಆಕ್ರಮಣಕಾರಿ ಉದ್ದೇಶವೇ ಆಗಿದೆ ಎಂದು ಹೇಳಿದ್ದಾರೆ. ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಕೋಫಿಅನ್ನಾನ್ ಸ್ವತಃ ಈ ದಾಳಿಯ ಬಗ್ಗೆ ಖೇದ ವ್ಯಕ್ತಪಡಿಸುತ್ತಾ ಇದು ವಿಶ್ವಸಂಸ್ಥೆಗೆ ಮತ್ತು ಜಗತ್ತಿಗೇ ಒಂದು ದುಃಖದ ದಿನ ಎಂದಿದ್ದಾರೆ. ವಿಶ್ವಸಂಸ್ಥೆಯ ಅಧಿವೇಶನ ನಡೆಯುತ್ತಿರುವಾಗಲೇ ಈ ದಾಳಿ ನಡೆದಿರುವುದರ ಬಗ್ಗೆ ಜಗತ್ತಿನ ಅನೇಕ ರಾಷ್ಟ್ರಗಳು ವಿಸ್ಮಯ ವ್ಯಕ್ತಪಡಿಸಿವೆ. ರಶಿಯಾ ಚೀನ ಹಾಗೂ ಭಾರತ ಸಹ ಈ ಬಾಂಬೆ ದಾಳಿಯನ್ನು ಖಂಡಿಸಿವೆ.

ಅಮೆರಿಕ ಅಧ್ಯಕ್ಷ ಬಿಲ್ ಕ್ಲಿಂಟನ್ ತಮ್ಮ ವಿರುದ್ಧದ ವಾಗ್ದಂಡನೆಯನ್ನು ತಪ್ಪಿಸಲು ಹಾಗೂ ಜಗತ್ತಿನ ಗಮನ ಬೇರೆ ಕಡೆ ಸೆಳೆಯಲು ಈ ದಾಳಿಯನ್ನು ನಡೆಸಲಾಗಿದೆ. ಇದು ಸಾಮ್ರಾಜ್ಯಶಾಹಿ ಅಮೆರಿಕದ ಇತ್ತೀಚಿನ ಅತ್ಯಂತ ಹೇಯ ಆಕ್ರಮಣಕಾರಿ ಕೃತ್ಯವಾಗಿದೆ. ವಿಶ್ವಸಂಸ್ಥೆ ಒಂದು ತೀರ್ಮಾನಕ್ಕೆ ಬರುವುದರೊಳಗಾಗಿ ಅಮೇರಿಕ ಮಾಡಿರುವ ಈ ದಾಳಿ ಅದರ ಯುದ್ಧಕೋರ ನೀತಿಗೆ ಸಾಕ್ಷಿಯಾಗಿದೆ. ಈ ಯುದ್ಧ ಜಗತ್ತಿನಾದ್ಯಂತ ಹಣದುಬ್ಬರ, ಬೆಲೆಯೇರಿಕೆಗೆ ಇತರ ಹಲವಾರು ರೀತಿಯ ತೊಂದರೆಗೆ ದುಡಿಯುವ ಜನರನ್ನು ಒಡ್ಡುತ್ತವೆ. ಯಾವ ಕಾರಣಕ್ಕೂ ಸಮರ್ಥಿಸಲಾಗದ ಅಮೇರಿಕದ ಈ ಬಾಂಬ್ ಧಾಳಿಯ ವಿರುದ್ಧ ರಾಜ್ಯಾದ್ಯಂತ ಇದೇ ಡಿಸೆಂಬರ್ 21 ರಂದು ಅಥವಾ ತುರ್ತಾಗಿ ಪ್ರತಿಭಟನೆ ನಡೆಸಬೇಕೆಂದು ಸಿಪಿಐ(ಎಂ) ರಾಜ್ಯ ಸಮಿತಿ ಮನವಿ ಮಾಡುತ್ತದೆ.



ಡಿಸೆಂಬರ್ 11 ರ ಸಾರ್ವತ್ರಿಕ ಮುಷ್ಕರದ ನಂತರ ಲೋಕಸಭೆಯಲ್ಲಿ ಐ.ಆರ್.ಎ. ಮಸೂದೆಯನ್ನು ಬಲವಾದ ವಿರೋಧಗಳ ನಡುವೆಯೂ ಮಂಡಿಸಿದ್ದನ್ನು ಪ್ರತಿಭಟಿಸಿ 2 ಲಕ್ಷ ವಿಮಾ ನೌಕರರು ದೇಶ್ಯಾದ್ಯಂತ ಪ್ರತಿಭಟನೆ ನಡೆಸಿದರು. ಬೆಂಗಳೂರಿನಲ್ಲಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳು ಮಾತನಾಡುತ್ತಿದ್ದಾರೆ.

ವಿಮಾ ನಿಯಂತ್ರಣ ಪ್ರಾಧಿಕಾರ ಮಸೂದೆಯ ಬಗ್ಗೆ ಪಿ. ಡಿ.ಸಂಪಾದಕೀಯ

ಇದು ಕೇವಲ ಆರಂಭವಷ್ಟೆ

ಬಿಜೆಪಿಯ ಆಡಳಿತ ಹೀನತೆ ದೈತ್ಯ ರೂಪ ತಳೆಯುತ್ತಿದೆ. ಅದರ ಸಂಪೂರ್ಣ ಅದಕ್ಷತೆ ಹಾಗೂ ಅಸಮರ್ಥತೆಗೆ ಸ್ವತಂತ್ರ ಭಾರತದ ಇತಿಹಾಸದಲ್ಲೇ ಸರಿಸಾಟಿಯಿಲ್ಲ. ಆರ್ಥಿಕ ವಿಷಯಗಳ ನಿರ್ವಹಣೆಯಲ್ಲಂತೂ ಇದು ಇನ್ನಷ್ಟು ನಿಜ.

'ಸ್ವದೇಶಿ' ಎಂಬುದು ಬಿಜೆಪಿಯ ಇನ್ನೊಂದು ಮುಖವಾಡ ಎಂಬ ಸಂದೇಹ ಈಗಾಗಲೇ ನಿಜವಾಗಿದೆ. ಆದರೆ ಈ ಕಾವಿಪಡೆಗಳ ಬೆಂಬಲಿಗರಿಗೂ ಆಶ್ಚರ್ಯ ವುಂಟುಮಾಡುವಂತಹ ಸಂಗತಿಯೆಂದರೆ ಈ 'ಸ್ವದೇಶಿ' ನಾಟಕವನ್ನು ಕೂಡಾ ಎಷ್ಟು ತ್ವರಿತವಾಗಿ ಅವು ಕೈ ಬಿಡುತ್ತಿವೆ ಎಂಬುದು. ಒಂದು ದಿಕ್ಕು ದಿಸೆಯೆಂಬುದೇ ಈ ಸರಕಾರಕ್ಕೆ ಇಲ್ಲ ಎಂಬುದರ ಇತ್ತೀಚಿನ ಉದಾಹರಣೆ ವಿಮಾ ನಿಯಂತ್ರಣ ಪ್ರಾಧಿಕಾರ ಮಸೂದೆ ಕುರಿತಂತೆ ಪ್ರತಿದಿನ ಗೋಜಲುಗೊಳ್ಳುತ್ತಿರುವ ಗೊಂದಲ.

ಅಮೆರಿಕನ್ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಹಾಗೂ ಬಹುರಾಷ್ಟ್ರೀಯ ಕಂಪನಿಗಳಿಗೆ ಸಾಷ್ಟಾಂಗ ಶರಣು ಎನ್ನುವ ತನ್ನ ಒಟ್ಟಾರೆ ಧೋರಣೆಗೆ ಅನುಗುಣವಾಗಿ ವಾಜಪೇಯಿ ಸರಕಾರ ತನ್ನ ಗುರುಗಳಿಗೆ ಸಂಸತ್ತಿನ ಪ್ರಸಕ್ತ ಅಧಿವೇಶನದಲ್ಲೇ ವಿಮಾ ವಲಯದ ಖಾಸಗೀಕರಣ ತರುವ ಭರವಸೆ ನೀಡಿತ್ತು. ತಕ್ಷಣ 'ಸ್ವದೇಶಿ ಜಾಗರಣ ಮಂಚ್' ದಂತಹ ಕೆಲವು ಕಾವಿ ಪಡೆಗಳ ವಿಭಾಗಗಳಿಂದ ಪ್ರತಿಭಟನೆ ಬಂತು. ಬಿಜೆಪಿ ಅಧ್ಯಕ್ಷರೂ ಕೂಡಾ ವಿದೇಶಿ ಪಾಲುದಾರಿಕೆಗೆ ವಿಮಾ ವಲಯವನ್ನು ತೆರೆಯುವುದನ್ನು ಪಕ್ಷ ವಿರೋಧಿಸುತ್ತದೆ ಎಂದರು. ಆದರೆ ಯಾವ ಮುಲಾಜೂ ಇಲ್ಲದೆ ಬಿಜೆಪಿ ಅಧ್ಯಕ್ಷರು ತನ್ನ ನಿಲುವನ್ನು ಬದಲಿಸುವಂತೆ ಒತ್ತಡ ಹಾಕಲಾಯಿತು. ಭಾರತೀಯ ಮಜ್ದೂರ್ ಸಂಘ ಮಾತ್ರ ತನ್ನ ಪ್ರತಿಭಟನೆಯ ನಿಲುವನ್ನು ಮುಂದುವರೆಸುತ್ತಿದೆ.

ಪುಟ 2 ನೋಡಿ

ಇತಿಹಾಸದ ಪುಟಗಳಿಂದ

"ನಾನು ಅದೃಷ್ಟವಂತನಾಗಿದ್ದೆ"

ಸೆಪ್ಟೆಂಬರ್ 11 1973. ಇಪ್ಪತ್ತೈದು ವರ್ಷಗಳ ಹಿಂದೆ ಚಿಲಿಯ ಅಧ್ಯಕ್ಷ ಅಲೆಂದೆಯವರ ಸಂವಿಧಾನಾತ್ಮಕವಾದ ಸರ್ಕಾರವನ್ನು ಅಮೆರಿಕದ ಸಿಐಎ ಕುಮ್ಮಕ್ಕಿನಿಂದ ನಡೆದ ಮಿಲಿಟರಿ ಕ್ಷಿಪ್ರಕ್ರಾಂತಿಯಲ್ಲಿ ಉರುಳಿಸಿದ್ದು ಮಾತ್ರವಲ್ಲ, ಅಧ್ಯಕ್ಷರು ಮತ್ತು ಅವರ ಸರ್ಕಾರದ ಹಲವು ಸದಸ್ಯರನ್ನು ಕೊಲ್ಲಲಾಯಿತು. ಚಿಲಿಯ ರಾಜಧಾನಿ ಮತ್ತು ದೇಶಾದ್ಯಂತ ರಕ್ತದ ಹೋಳಿ ನಡೆಯಿತು.

ಅಲೆಂದೆಯವರ ಸರ್ಕಾರಕ್ಕೆ ನ್ಯಾಯಯುತ ಸಮಾಜ ರಚನೆಯ ಕನಸಿಗೆ ಆಗ ಇದ್ದ ಅಪಾರ ಜನಬೆಂಬಲ ಸಿಐಎಯ ನಿದ್ದೆಗೆಡಿಸಿತ್ತು. ಚಿಲಿಯ ಈ ಶಾಂತಿಯುತವಾಗಿ ಸಮಾಜವಾದಿ ಸಮಾಜ ಕಟ್ಟುವ ರೋಗ ಸಾಂಕ್ರಾಮಿಕವಾಗಬಹುದು ಎಂದು ಅವರು ಬೆಚ್ಚಿದ್ದರು. ಇಪ್ಪತ್ತೈದು ವರ್ಷ ಹಿಂದಿನ ಅಲೆಂದೆ ಸರ್ಕಾರದ ಪತನ ದುಡಿಯುವ ಜನರ ಚಳುವಳಿಯಲ್ಲಿ ಒಂದು ಪ್ರಮುಖ ಮೈಲುಗಲ್ಲು. ಸಾಮ್ರಾಜ್ಯಶಾಹಿಯ ಸ್ವರೂಪ ಶಾಂತಿಯುತ ಸಾಮಾಜಿಕ ಬದಲಾವಣೆಗೆ ಇರುವ ಅಡೆತಡೆಗಳು ಇವೆಲ್ಲದರ ಬಗ್ಗೆ ಪಾಠ ಹೇಳಿದ ಘಟನಾವಳಿ. ಅಲೆಂದೆ ಕೊಲೆಯ ಇಪ್ಪತ್ತೈದನೇ ವಾರ್ಷಿಕದಂದು ಭಾರಿ ಪೋಲಿಸು ಬಂದೋಬಸ್ತು ಇದ್ದಾಗ್ಯೂ, 50 ಸಾವಿರ ಜನ ರ್‍ಯಾಲಿಯಲ್ಲಿ ಭಾಗವಹಿಸಿದ್ದರಂತೆ

ಫುಟ್‌ಬಾಲ್ ಸ್ಟೇಡಿಯಂಗೆ ವಿಶಿಷ್ಟ ಸ್ಥಾನವಿದೆ. ಅಲ್ಲಿ ಸಾವಿರಾರು ಜನರನ್ನು ಬಂಧಿಸಿದ್ದರು. ಚಿಲಿಯ ಕ್ಷಿಪ್ರಕ್ರಾಂತಿಯಲ್ಲಿ ಸಿಕ್ಕಿಬಿದ್ದ ಮೈಕ್ ಗೇಡ್ಸ್‌ಹೌಸ್ ಒಬ್ಬ ಬ್ರಿಟಿಷ್ ನಾಗರಿಕನ ನೆನಪುಗಳು. ಬಿಬಿಸಿಯಲ್ಲಿ ಪ್ರಕಟವಾದ ಅನುಭವ.

ನಾನು ನಗರ ಕೇಂದ್ರದ ಬಳಿ ಇರುವ ಒಂದು ಪ್ರದೇಶದ ಸಣ್ಣ ಫ್ಲಾಟ್‌ನಲ್ಲಿ ವಾಸಿಸುತ್ತಿದ್ದೆ. ಮಿಲಿಟರಿ ಕ್ಷಿಪ್ರಕ್ರಾಂತಿಯ ದಿನ ನಾನು ಆಫೀಸಿಗೆ ಹೋದವ ಸಿಕ್ಕಿಬಿದ್ದೆ. ಮಿಲಿಟರಿ ಕರ್ಫ್ಯೂ ವಿಧಿಸಿತ್ತು. ನಾನು ಕೆಲಸ ಮಾಡುತ್ತಿದ್ದ ಚಿಲಿಯನ್ ಅರಣ್ಯ ಸಂಸ್ಥೆಯ ಕ್ಲೀವರ್‌ಗಳು ನನ್ನನ್ನು ಅಡಗಿಸಿಟ್ಟಿದ್ದರು- ಹತ್ತಿರದ ಕೊಂಡೆಯೊಂದರಲ್ಲಿ ಇದ್ದ ಅವರ ಮನೆಗಳ ಮೇಲೆ ಮಿಲಿಟರಿ ಹೆಲಿಕಾಪ್ಟರ್‌ಗಳು ಯದ್ವಾತದ್ವಾ ಮಶೀನ್-ಗನ್‌ನಿಂದ ಗುಂಡಿನ ಸುರಿಮಳೆ ಗೈಯುತ್ತಿದ್ದವು.

ನನ್ನ ಸಂಸ್ಥೆಯ ಸಹೋದ್ಯೋಗಿಗಳನ್ನೆಲ್ಲಾ ಬಂದಿಸಲಾಗಿತ್ತು. ಸಂಸ್ಥೆಯ ಡೈರೆಕ್ಟರ್ ಸೇರಿದಂತೆ ಹೆಚ್ಚಿನ ಉದ್ಯೋಗಿಗಳನ್ನು ನ್ಯಾಶನಲ್ ಸ್ಟೇಡಿಯಂಗೆ ಒಯ್ಯಲಾಗಿತ್ತು. ಅಲ್ಲಿ ಕೆಲವರನ್ನು ದನ ಬಡಿದಂತೆ ಬಡಿಯಲಾಗಿತ್ತು. ಅವರಲ್ಲಿ ಎಷ್ಟು ಬದುಕುಳಿದರೂ ಗೊತ್ತಿಲ್ಲ. ಅವರಲ್ಲಿ ಕೆಲವರನ್ನು ನಾನು ಮುಂದೆ ಫಿನ್ಲೆಂಡ್‌ನಲ್ಲಿ ನೋಡಿದೆ. ನಿರಾಶ್ರಿತರಾಗಿ ಬಂದಿದ್ದರು.

ನನ್ನ ಜತೆ ಫ್ಲಾಟ್ನಲ್ಲಿದ್ದ ಇಬ್ಬರಿಗೆ ಏನಾಯಿತು ಎಂದು ಬಹಳ ದಿನದವರೆಗೆ ಗೊತ್ತಿರಲಿಲ್ಲ. ಅವರಿಬ್ಬರನ್ನು ಮತ್ತು ಸರ್ಕಾರಿ ತಾಂತ್ರಿಕ ವಿಶ್ವವಿಧ್ಯಾಲಯದ ನೂರಾರು ವಿದ್ಯಾರ್ಥಿಗಳನ್ನು ಬಂಧಿಸಿ, ನ್ಯಾಶನಲ್ ಸ್ಟೇಡಿಯಂಗೆ ಒಯ್ಯಲಾಗಿತ್ತು. ವಿಕ್ಟರ್‌ನನ್ನು ಚಿತ್ರಹಿಂಸೆ ಕೊಟ್ಟು ಕೊಲ್ಲಲಾಯಿತು ಎಂದು ಆಮೇಲೆ ಗೊತ್ತಾಯಿತು. ವೋಲ್ಫ್‌ಗ್ಯಾಂಗ್ ಮಿಲಿಟರಿ ಗಾರ್ಡ್‌ಗಳ ಕಣ್ತಪ್ಪಿಸಿ ಪರಾರಿಯಾಗಿದ್ದ. ಮುಂದೆ ಅವನನ್ನು ನಿರಾಶ್ರಿತನಾಗಿ ಬ್ರಿಟನ್‌ಗೆ ಒಯ್ಯಲು ಪ್ರಯತ್ನಿಸಿ ನಾನು ಸಫಲನಾದೆ. ನನಗೆ ಗೊತ್ತಿದ್ದ ಜುಲಿಅನ್ ಮತ್ತು ಆತನ ರಶ್ಯನ್ ಹೆಂಡತಿ ಸ್ವೀಡಿಶ್ ರಾಯಭಾರ ಕಚೇರಿಗೆ ಹೋಗಿದ್ದರು. ಗಂಡನನ್ನು ಪೋಲೀಸರು ಕಂಡಲ್ಲಿ ಗುಂಡು ಹಾಕಿ ಕೊಂದಿದ್ದರು. ಅವನ ಮನೆಯಲ್ಲಿ ಸ್ಪೋರ್ಟ್ಸ್‌ಗನ್ ಒಂದಿದೆ ಎಂಬ ಕಾರಣಕ್ಕೆ.

ನನ್ನ ಗೆಳೆಯರು ಫ್ಲಾಟ್‌ಗೆ ಹೋಗುವುದು ಬೇಡ ಎಂದು ಸಲಹೆ ಕೊಟ್ಟಿದ್ದರು. ಆದರೂ ನನ್ನ ಬಟ್ಟೆ ಇತರ ಸಾಮಾನು ತರಬಹುದು ಎಂದು ಹೋದೆ. ಫ್ಲಾಟ್ ಮೇಲೆ ಪೋಲೀಸರು ದಾಳಿ ಮಾಡಿದ್ದರು. ಫ್ಲಾಟ್‌ನಲ್ಲಿ ಎಲ್ಲಾ ಅಸ್ತವ್ಯಸ್ತವಾಗಿತ್ತು. ನಾನು ಒಂದು ಗಂಟೆಯೂ ಇರಲಿಲ್ಲ ಅಲ್ಲಿ. ನಾನು ಹೊರಡುತ್ತಿದ್ದಂತೆ ಸಶಸ್ತ್ರ ಪೋಲೀಸರ ಕೈಗೆ ಸಿಕ್ಕಿ ಬಿದ್ದೆ. ನಾನು ಸ್ಥಳೀಯ ಸಮುದಾಯ ಸೇವೆ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದುದನ್ನು ಇಷ್ಟಪಡದ ಕೆಲವು ನೆರೆಯವರು ನಮ್ಮ ಫ್ಲಾಟ್‌ನಲ್ಲಿ ಶಸ್ತ್ರಾಗಾರ ಇದೆ ಎಂದು ಪೋಲೀಸರಿಗೆ ಹೇಳಿದ್ದಾರಂತೆ.

ನನ್ನನ್ನು ಸ್ಥಳೀಯ ಪೋಲೀಸ್ ಸ್ಟೇಶನಿಗೆ ಒಯ್ದರು ಅಲ್ಲಿ ನನ್ನನ್ನು ಕ್ಯೂಬನ್ ಎಂದು ಆರೋಪಿಸಲಾಯಿತು. ಅದೇ ಮಧ್ಯಾಹ್ನ ನಾನು ಮತ್ತು ಇತರ ಹಲವಾರು ಬಂಧಿತರನ್ನು ಒಂದು ವ್ಯಾನ್‌ನಲ್ಲಿ ನೇಶನಲ್ ಸ್ಟೇಡಿಯಂಗೆ ಒಯ್ಯಲಾಯಿತು. ನಾವು ಬಸ್‌ನಲ್ಲಿ ಮುಖ ಕೆಳಗೆ ಹಾಕಿ ಮಲಗಬೇಕಾಗಿತ್ತು. ಸಬ್‌ಮೆಶಿನ್ ಗನ್ 8B ಪೋಲೀಸರು ನಮ್ಮ ಮೇಲೆಲ್ಲಾ ಓಡಾಡುತ್ತಿದ್ದರು.

ನೇಶನಲ್ ಸ್ಟೇಡಿಯಂ ರಾಜಧಾನಿ ಸ್ಯಾಂಡಿಯಾಗೋದಲ್ಲೇ ದೊಡ್ಡ ಫುಟ್‌ಬಾಲ್ ಸ್ಟೇಡಿಯಂ. ಸುತ್ತ ಮುತ್ತ ಇತರ ಸ್ಪೋರ್ಟ್ಸ್ ವ್ಯವಸ್ಥೆ ಇರುವ ಕಟ್ಟಡಗಳು. ಪೋಲೀಸರು ಸಾವಿರಾರು ಸಂಖ್ಯೆಯಲ್ಲಿ ಬಂದಿಸುತ್ತಿದ್ದರಿಂದ ಜಾಗ ಸಾಲದೆ ಸ್ಟೇಡಿಯಂ ಸುತ್ತ ಮುತ್ತ ಇರುವ ರೂಮುಗಳಲ್ಲಿ ಜನರನ್ನು ತುಂಬಲಾಗಿತ್ತು. ನನ್ನನ್ನು ಹಾಕಿದ ರೂಮಿನಲ್ಲಿ ಬಿಳಿಕೋಟು ಧರಿಸಿದ ಹಲವಾರು ಡಾಕ್ಟರುಗಳು ಜೂನಿಯರ್ ಡಾಕ್ಟರುಗಳು ತುಂಬಿ ಹೋಗಿದ್ದರು. ಚಿಲಿಯನ್ ಮೆಡಿಕಲ್ ಅಸೋಶಿಯೇಶನ್ ನಲ್ಲಿರುವ ಬಲಪಂಥೀಯರು, ಇವರು ಅಂದು ಸಂವಿಧಾನಾತ್ಮಕ ಸರ್ಕಾರ ಉರುಳಿಸಲು ಫ್ಯಾಸಿಸ್ಟರು ಕರೆದಿದ್ದ ಮುಷ್ಕರದಲ್ಲಿ ಭಾಗವಹಿಸದ್ದು ಅವರ ಅಪರಾಧವಾಗಿತ್ತು.

ನಮ್ಮನ್ನು ಕುರಿಮಂದೆಗಳಂತೆ ತುಂಬಿದ್ದ ಸೆಲ್ ಗಳು ಫುಟ್‌ಬಾಲ್‌ಮ್ಯಾಚ್ ನಡೆಯುವಾಗ ಡ್ರೆಸ್ ಬದಲಾಯಿಸುವ ಕೋಣೆಗಳು ಇಂತಹ ಸೆಲ್ ನಲ್ಲಿ 130 ಜನರನ್ನು ತುಂಬಿದ್ದರು. ಆ ಸೆಲ್ ಎಷ್ಟು ತುಂಬಿತ್ತೆಂದರೆ ರಾತ್ರಿಯಲ್ಲಿ ನಾವು ಸರದಿಯಂತೆ ಮಲಗಬೇಕಾಗಿತ್ತು ಸೆಲ್‌ಗಳ ಮತ್ತು ನಡೆದಾಡುವ ಜಾಗದಲ್ಲಿ ಹೊಗೆ ತುಂಬಿದ ಚೀಲಗಳ ಮೇಲೆ ಮಶಿನ್‌ಗನ್‌ಗಳನ್ನು ಇರಿಸಲಾಗಿತ್ತು. ಆದರೂ ಸೆಲ್‌ಗಳಿಂದ ಉತ್ಸಾಹ ತುಂಬುವ ಹಾಡುಗಳು ಕೇಳಿ ಬರುತ್ತಿದ್ದವು.

ಅಲ್ಲಿ ತರಲಾಗಿದ್ದವರೆಲ್ಲಾ ಬೇರೆ ಬೇರೆ ಕಾರಣಗಳಿಂದ ಆಕಸ್ಮಿಕವಾಗಿ ಬಂಧಿತರಾದವರು. ಮನಬಂದಂತೆ ಹಿಂಸಾಚಾರ ಮಾಡಿ ಜನರನ್ನು ಹೆದರಿಸುವುದು ಮಿಲಿಟರಿ ಸರ್ಕಾರದ ಗುರಿಯಾಗಿತ್ತು. ಅಂತ ಕಾಣ್ತವೆ. ಎಲ್ಲ ದೇಶದವರು, ಉದ್ಯೋಗಿಗಳಾದವರು, ವಯಸ್ಸಿನವರು ಅಲ್ಲಿದ್ದೆವು. ಸರ್ಕಾರ ಅಥವಾ ಸರ್ಕಾರಿ ಸಂಸ್ಥೆಗಳಲ್ಲಿ ಕೆಲಸ ಮಾಡುವವರು ಫ್ಯಾಕ್ಟರಿ ಕಾರ್ಮಿಕರು, ನರ್ಸುಗಳು ಅಧ್ಯಾಪಕರು, ವಿಶ್ವವಿಧ್ಯಾಲಯದ ವಿದ್ಯಾರ್ಥಿಗಳು. ಗುಮಾನಿ ಬಂದ ಎಲ್ಲರನ್ನೂ ಹಿಡಿದು ತಂದು ಅಲ್ಲಿ ಹಾಕಲಾಗಿತ್ತು.

ನಾನು ಅದೃಷ್ಟವಂತನಾಗಿದ್ದೆ. ಬ್ರಿಟಿಷ್ ರಾಯಭಾರ ಕಚೇರಿಗೆಥನಾನು ಬಂಧಿತನಾದದ್ದು ತಿಳಿದು, ಪೋಲಿಸರ ಜತೆ ಮಾತನಾಡಿ ನಾನು ದೇಶ ಬಿಟ್ಟು ಹೋಗುವ ಷರತ್ತಿನ ಮೇಲೆ ನನ್ನನ್ನು ಬಿಡುಗಡೆ ಮಾಡಿದರು.

ಆದರೆ ನನ್ನ ಸೆಲ್‌ನಲ್ಲಿ, ನನ್ನ ಬಳಿ ಇದ್ದ ಬ್ರೆಜಿಲಿಯಸ್ ಇಂಜಿನಿಯರ್ ಸರ್ಜಿಯೊ ಮೊರೆಸ್ ನನ್ನಥರ ಅದೃಷ್ಟವಂತನಾಗಿರಲಿಲ್ಲ. ಅವನು ಮಾಡೆಕೊ ಎಂಬ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ಬಿಡುಗಡೆಯಾಗುವ ಎರಡು ದಿನ ಮೊದಲು ಆತನನ್ನು. ಪೋಲಿಸರು ವಿಚಾರಣೆಗೆ ಒಡ್ಡಿದ್ದರು. ಅವನು ವಿಚಾರಣೆಯಿಂದ ಹಿಂದಿರುಗಿದ ಮೇಲೆ ಮಾತನಾಡಲು ಆಗುತ್ತಿರಲಿಲ್ಲ. ಕೇಳಲೂ ಆಗುತ್ತಿರಲಿಲ್ಲ. ಅವನ ಮುಖಕ್ಕೆ ಮುಸುಕು ಹಾಕಿ ಒಂದು ಮರದ ಬ್ಯಾಟಿನಿಂದ ತಲೆ ಮತ್ತು ಕಿವಿಯ ಮೇಲೆ ಚೆನ್ನಾಗಿ ಹೊಡೆದಿದ್ದರು. ಅವನನ್ನು ವಿಚಾರಣೆ ನಡೆಸಿದವರಲ್ಲಿ ಬ್ರೆಜಿಲಿಯನ್ ಬೇಹುಗಾರಿಕೆ ದಳದವರು ಇದ್ದರು ಎಂದು ಮಾತ್ರ ಹೇಳುವುದು ಸಾಧ್ಯವಾಯಿತು.

(ಮುಂದುವರಿಯುವುದು)

ಸಾಮ್ರಾಜ್ಯಶಾಹಿಗಳ ಲಾಭ ಪಿಪಾಸೆಗೆ ವಿಮೆ ನೀಡಿದ ಬಿಜೆಪಿ ಸರ್ಕಾರ



ಕೇಂದ್ರದ ಬಿಜೆಪಿ ಸರ್ಕಾರ ವಿಮೆ ನಿರ್ವಹಣೆ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿದೆ. ಈ ಮಸೂದೆಗೆ ತೀವ್ರ ವಿರೋಧವಿದ್ದರೂ ಅದನ್ನು ಮಂಡಿಸಲಾಗಿದೆ. ಹಿಂದೆ ಸಂಯುಕ್ತ ರಂಗ ಸರ್ಕಾರ ಮಸೂದೆ ಮಂಡಿಸಹೊರಟಾಗ ವಿರೋಧ ಪಕ್ಷವಾಗಿದ್ದ ಬಿಜೆಪಿ ತೀವ್ರ ಪ್ರತಿಭಟನೆ ತೋರಿತ್ತಾದ್ದರಿಂದ ಮಸೂದೆ ಮಂಡನೆಗೆ ತಡೆಯಾಗಿತ್ತು. ದೇಶದ ಹಿತಾಸಕ್ತಿ, ಸ್ವದೇಶಿ ಎಂದೆಲ್ಲಾ ಬೊಗಳೆ ಬಿಡುವ ವೀರರನ್ನು ಹೊಂದಿರುವ ಬಿಜೆಪಿ ಸಾಮ್ರಾಜ್ಯಶಾಹಿಗಳ ಒತ್ತಡಕ್ಕೆ ಮಣಿದು ಈ ಮಸೂದೆಯನ್ನು ಮಂಡಿಸಿದೆ ಎಂಬುದರಲ್ಲಿ ಸಂಶಯವೇ ಇಲ್ಲ.

ವಿಮಾ ಕ್ಷೇತ್ರವನ್ನು ವಿದೇಶಿ ಬಂಡವಾಳ ಹೂಡಿಕೆಗೆ ತೆರೆದಿಡುವ ಉದ್ದೇಶದಿಂದ ಈ ಮಸೂದೆ ತರಲಾಗಿದೆ. ಮಸೂದೆಯ ಪ್ರಕಾರ ಒಂದು ವಿಮಾ ನಿರ್ವಹಣಾ ಪ್ರಾಧಿಕಾರವನ್ನು ಸ್ಥಾಪಿಸಲಾಗುತ್ತದೆ. ಈ ಪ್ರಾಧಿಕಾರ ವಿಮಾ ಕಂಟ್ರೋಲರ್ ಕೆಲಸನ್ನು ವಹಿಸಿಕೊಳ್ಳುತ್ತದೆ. ಪ್ರಾಧಿಕಾರ ಅಧ್ಯಕ್ಷ ಮತ್ತು ಇತರ ಒಂಬತ್ತು ಸದಸ್ಯರನ್ನು ಹೊಂದಿರುತ್ತದೆ.

ಈ ಪ್ರಾಧಿಕಾರ ವಿಮೆ ಮತ್ತು ಪುನರ್ವಿಮೆಯನ್ನು ಬೆಳೆಸಿ ನಿಯಂತ್ರಿಸಿ ದೇಶಾದ್ಯಂತ ಒಳ್ಳೆಯ ಅಭಿವೃದ್ಧಿ ಸಾಧಿಸಲು ಭಾರತೀಯ ಹೂಡಿಕೆದಾರರು ತಮ್ಮ ಪಾಲನ್ನು ಈಗಿನ ಶೇ 100 ರಿಂದ ಶೇ 26 ಕ್ಕೆ ಇಳಿಸಬೇಕಾಗುತ್ತದೆ.

ಯಾವುದೇ ವಿಮೆದಾರ ಪರೋಕ್ಷವಾಗಿಯಾಗಲಿ ನೇರವಾಗಿಯಾಗಲಿ ಭಾರತದ ಹೊರಗೆ ಹೂಡಿಕೆ ಮಾಡುವಂತಿಲ್ಲ. ಇತ್ಯಾದಿಗಳು ಹೊಸ ವಿಮೆ ಮಸೂದೆಯ ಮುಖ್ಯಾಂಶಗಳು.

ಇಲ್ಲಿ ಬಹಳ ಮುಖ್ಯವಾಗಿ ಮಾಡಿರುವುದು ವಿದೇಶೀ ಹೂಡಿಕೆಯನ್ನು ವಿಮಾ ಕ್ಷೇತ್ರಕ್ಕೆ ತೆರೆದಿರುವುದು. ಮುಖ್ಯ ಉದ್ದೇಶ ಇದಾದರೂ ಪಾಲಿಸಿದಾರರ ಹಿತರಕ್ಷಣೆಗೆ ಒಂದು ಪ್ರಾಧಿಕಾರ ಸ್ಥಾಪನೆ, ವಿಮಾ ನೀತಿಯನ್ನೇ ನಿಯಂತ್ರಿಸುವುದು ಇತ್ಯಾದಿ ಮಾತುಗಳಲ್ಲಿ ಇವೆ. ಒಂದು ರೀತಿಯಲ್ಲಿ ಈ ಮಸೂದೆಯೇ ವಿದೇಶಿ ಹೂಡಿಕೆಯನ್ನು ದೇಶದೊಳಗೆ ಬಿಟ್ಟಾಗ ಪಾಲಿಸಿದಾರರ ಹಿತರಕ್ಷಣೆ ಮಾಡಲು ಒಂದು ಪ್ರಾಧಿಕಾರದ ಅವಶ್ಯಕತೆ ಇದೆ ಎಂದು ಒಪ್ಪಿಕೊಂಡಂತೆ. ಅಂದರೆ ಪಾಲಿಸಿದಾರರ ಹಿತಾಸಕ್ತಿಗೆ ದೊಡ್ಡ ಹೊಡೆತವನ್ನು ಈ ಕ್ರಮ ನೀಡುತ್ತದೆ ಎಂಬುದು ಸ್ಪಷ್ಟ.

ಪಾಶ್ಚಿಮಾತ್ಯ ದೇಶಗಳಲ್ಲಿ ಒಟ್ಟು ವಿಮಾ ಕ್ಲೇಮ್‌ಗಳಲ್ಲಿ ಬರೀ ಶೇ 40 ರಷ್ಟನ್ನು ಮಾತ್ರ ಮಂಜೂರು ಮಾಡಲಾಗುತ್ತಿದೆಯಂತೆ. ಅಂದರೆ ವಿಮಾ ಪಾಲಿಸಿದಾರರ ಕ್ಲೇಮ್‌ಗಳು ನಿರಾಕರಿಸಲ್ಪಡುವುದೆ ಹೆಚ್ಚು. ಭಾರತದ ಜೀವ ವಿಮಾ ನಿಗಮ ಕ್ಲೇಮ್‌ಗಳಲ್ಲಿ ಶೇ 97 ರಷ್ಟನ್ನು ಮಂಜೂರು ಮಾಡುತ್ತದೆ. ಅಂದರೆ ಪಾಲಿಸಿದಾರರ ಹಿತಾಸಕ್ತಿಗೆ ವಿದೇಶೀ ಹೂಡಿಕೆ ಏನು ಮಾಡಬಹುದು ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಸಂಸತ್ತಿನಲ್ಲಿ ಎಡಪಕ್ಷಗಳು ಸಮಾಜವಾದಿ ಪಕ್ಷ ಮತ್ತು ರಾಷ್ಟ್ರೀಯ ಜನತಾದಳದ ತೀವ್ರ ವಿರೋಧವನ್ನು ಕಂಡ ಸರ್ಕಾರ ಮಸೂದೆಯನ್ನು ಜಂಟಿ ಸಮಿತಿಯ ಪರಿಶೀಲನೆಗೆ ಒಪ್ಪಿಸಬೇಕಾಯಿತು.

ದೇಶಾದ್ಯಂತ ವಿಮಾ ನೌಕರರು ಡಿಸೆಂಬರ್ 11 ರಂದು ಅಂದರೆ ಮಸೂದೆ ಮಂಡನೆಯಾದ ಮರುದಿನವೇ ಮುಷ್ಕರ ಹೂಡಿದ್ದಾರೆ. ಬಿಜೆಪಿ ಸರ್ಕಾರಕ್ಕೆ ತನ್ನ ದುಷ್ಕಾರ್ಯಗಳ ಫಲವುಣ್ಣಲೇ ಬೇಕಾದ ಸ್ಥಿತಿಯಂತೂ ದಿನದಿಂದ ದಿನಕ್ಕೆ ಬೆಳೆಯುತ್ತಲೇ ಇದೆ!

ವಿಮೆಗಾಗಿ ಹೊಡೆದಾಟ

ಇದು ಯಾರದ್ದು? ಅಮೆರಿಕಾದ ವಿಮಾ ಬಕಗಳು ಮತ್ತು ಯುರೋಪಿನ ಬಕಗಳು ಪರಸ್ಪರ ಕಿತ್ತಾಡುತ್ತಿವೆ. ಯಾತಕ್ಕಾಗಿ? ಭಾರತದ ವಿಮಾ ಕ್ಷೇತ್ರ ತಮಗೇ ಬೇಕು ತಮಗೇ ಬೇಕು ಎಂಬ ಅವರ ಇಚ್ಛೆಯೇ ಅವರ ಹೊಡೆದಾಟಕ್ಕೆ ಕಾರಣ. ಭಾರತದ ಸರ್ಕಾರದ ಜೊತೆ ಲಾಬಿ ಮಾಡಲೂ ಅವು ತೊಡಗಿವೆ.

ಯುರೋಪಿನ ಬಕಗಳು ಯುರೋಕ್ಲಬ್ ಎಂಬ ಹೆಸರಿನ ಕ್ಲಬ್ ಮಾಡಿಕೊಂಡಿವೆ. ಡಚ್ ಕಂಪನಿ ಐಎನ್‌ಜಿ ಇನ್ಶೂರೆನ್ಸ್, ಜರ್ಮನಿಯ ಅಲೈಂಝ್ ಮತ್ತು ಹಲವು ಬ್ರಿಟಿಶ್ ಕಂಪನಿಗಳು ಈ ಕ್ಲಬ್ಬಿನಲ್ಲಿ ಸೇರಿ ಕೊಂಡಿವೆ. ಫ್ರಾನ್ಸ್, ನೆದರ್‌ಲ್ಯಾಂಡ್ ಮತ್ತು ಜರ್ಮನಿಯ ಕಂಪನಿಗಳೂ ಇವುಗಳ ಜೊತೆಗೆ ಈಗ ಸೇರಿಕೊಂಡಿವೆ.

ಈ ಯುರೋಪಿನ ಕಂಪನಿಗಳು ಅಮೆರಿಕದ ಕಂಪನಿಗಳ ಜೊತೆಗೆ ಪೈಪೋಟಿ ನಡೆಸಿವೆ. ನ್ಯೂಯಾರ್ಕ್ ಲೈಫ್ ಮತ್ತು ಜೀಇಗಳು ತಮ್ಮದೇ ಆದ ನಿಯೋಗಗಳನ್ನು ಭಾರತ ಸರ್ಕಾರದೊಂದಿಗೆ ವ್ಯವಹಾರ ಕುದುರಿಸಲು ಕಳುಹಿಸಿಕೊಟ್ಟಿವೆ. ಅಮೆರಿಕದ ಕಂಪನಿಗಳು ತಮ್ಮದೇ ರೀತಿಯಲ್ಲಿ ಕುತಂತ್ರ ಹೂಡುತ್ತವೆ ಎಂಬುದು ಯುರೋ ಕ್ಲಬ್‌ಗಳ ಪುಕಾರು.

ಈಗ ಭಾರತದ ವಿಮಾ ಕ್ಷೇತ್ರ ಇವರ ರಸದೂಟಕ್ಕೆ ತೆರೆದಿರುವಾಗ ಇವುಗಳ ಕಿತ್ತಾಟ ಜೋರಾಗಿದೆ. ಲಾಭವೇ ಮುಖ್ಯವಾಗಿರುವಲ್ಲಿ ಹೀಗಾಗದೆ ಬೇರೇನಾದರೂ ಆಗಲು ಸಾಧ್ಯವೇ?

ದುರಸ್ತಿ ಮಾಡಲಾಗದ ಸ್ಥಿತಿಯಲ್ಲಿ ಆರ್ಥಿಕ

1997-99 ರ ಮೊದಲರ್ಧ ಆರ್ಥಿಕ ಪರಿಸ್ಥಿತಿಯ ವಿಶ್ಲೇಷಣೆ ಮಾಡಿರುವ ತಜ್ಞರು ಆರ್ಥಿಕ ಆಂತರಿಕ ಮತ್ತು ವಿದೇಶಿ ವ್ಯವಹಾರಗಳ ಮಟ್ಟದಲ್ಲಿ ತೀವ್ರ ಹದಗೆಟ್ಟಿದೆ ಎಂಬ ನಿರ್ಧಾರಕ್ಕೆ ಬಂದಿದ್ದಾರೆ. ಈಗಿರುವ ಸ್ಥಿತಿಗೆ ಮಧ್ಯಮಾವಧಿ ತಿದ್ದುಪಡಿ ಕ್ರಮಗಳನ್ನು ಕೈಗೊಂಡು ಆರ್ಥಿಕವನ್ನು ದುರಸ್ತಿಗೊಳಿಸುವುದು ಅಸಾಧ್ಯ ಎಂಬ ನಿರ್ಧಾರಕ್ಕೆ ಅವರು ಬಂದಿದ್ದಾರೆ. ಈಗಿರುವ ರಾಜಕೀಯ ಪರಿಸ್ಥಿತಿಯೂ ಇದಕ್ಕೆ ಒಂದು ಕಾರಣವಾದರೆ (ಅಂದರೆ ಬಿಜೆಪಿ ಅಧಿಕಾರದಲ್ಲಿರುವುದು?) ಜಾಗತಿಕ ಹಿಂಜರಿತವೂ ಒಂದು ಕಾರಣ. ಹಣಕಾಸು ಕೊರತೆ ಕಮ್ಮಿಯಾಗುವ ಸಾಧ್ಯತೆ ಇಲ್ಲ ಹಣದುಬ್ಬರದ ಪ್ರಮಾಣ ಹದ್ದುಮೀರಿ ಹೋಗಿದೆ.

ಇದಲ್ಲದೆ ಸರ್ಕಾರ ತೆಗೆದುಕೊಳ್ಳ ಬೇಕೆಂದಿದ್ದ ಹಲವು ಕ್ರಮಗಳನ್ನು ಅದು ತೆಗೆದುಕೊಳ್ಳಲು ಸಾಧ್ಯವಾಗಿಲ್ಲ. ಉದಾಹರಣೆಗೆ ಸಾರ್ವಜನಿಕ ವಲಯದ ಉದ್ದಿಮೆಗಳ ಶೇರು ಮಾರಾಟ. ಇದಕ್ಕೆ ಆಗಲೇ ದೇಶದಾದ್ಯಂತ ತೀವ್ರ ವಿರೋಧ ಕಂಡುಬಂದಿದೆ. ಯೋಜನೇತರ ವೆಚ್ಚಗಳನ್ನು ಕಡಿತ ಮಾಡುವುದೂ ಸರ್ಕಾರದಿಂದ ಆಗದ ಕೆಲಸ. ಬಿಜೆಪಿ ಸರ್ಕಾರ 'ಸಮಾಧಾನ್' ನಂತಹ ಯೋಜನೆಗಳನ್ನು ಜಾರಿಗೆ ತಂದೂ ತೆರಿಗೆ ಸಂಗ್ರಹಣೆ ಗುರಿಗಳನ್ನು ಮುಟ್ಟುವುದು ಸಾಧ್ಯವಾಗಿಲ್ಲ. ಹೀಗೆ ಸರ್ಕಾರದ ವೈಫಲ್ಯಗಳು ಹಲವಿವೆ.

ಸರ್ಕಾರ ತಾವೇ ಪ್ರತಿಪಾದಿಸುವ ಉದಾರೀಕರಣ ನೀತಿಗಳನ್ನೇ ಜಾರಿಗೆ ತರಲು ಸಾಧ್ಯವಾಗಿಲ್ಲ. ಆದ್ದರಿಂದಲೇ ಆರ್ಥಿಕವನ್ನು ಬೂರ್ಜ್ವಾಗಳ ದೃಷ್ಟಿಯಿಂದಲೂ ಹಾಳುಗೆಡವಿ ದಂತಾಗಿದೆ. ಹೀಗಿರುವಾಗ ಸದ್ಯಕ್ಕಂತೂ ಆರ್ಥಿಕದ ದುರಸ್ತಿ ಮಾಡುವುದು ಈ ಸರ್ಕಾರದಿಂದ ಸಾಧ್ಯವೇ ಇಲ್ಲ.

ಅಂದರೆ ಭಾರತದ ಜನಸಾಮಾನ್ಯರು ಆರ್ಥಿಕದ ದುರ್ಬಲತೆಯ ಪರಿಣಾಮಗಳನ್ನು ಇನ್ನೂ ಅನುಭವಿಸುತ್ತಲೇ ಇರಬೇಕಾಗುತ್ತದೆ. ಬಿಜೆಪಿ ಸರ್ಕಾರಕ್ಕೆ ಇಳಿಯಲು ದಾರಿ ತೋರಿಸಿದರೆ ಮಾತ್ರ ಈ ಪರಿಸ್ಥಿತಿ ಬದಲಾಗುವ ಸಾಧ್ಯತೆ ಉಂಟಾಗುತ್ತದೆ.

ಇದು ಕೇವಲ ಆರಂಭವಷ್ಟೆ

ಪುಟ 1 ರಿಂದ

ಈ ವಿಷಯದಲ್ಲಿ ಕಾವಿ ಪಡೆಗಳಲ್ಲಿನ ಭಿನ್ನಾಭಿಪ್ರಾಯ ಮುಂದುವರೆದಿದ್ದದ್ದು ಸ್ಪಷ್ಟವಾಗಿತ್ತು. ಇಂತಹ ಸನ್ನಿವೇಶದಲ್ಲಿ ಬಿಜೆಪಿ ತನ್ನ ಎಂದಿನ ಎರಡು ನಾಲಗೆಯ ಆಟ ಆರಂಭಿಸಿತು. ಆರ್ಥಿಕ ಧೋರಣೆಗಳ ವಿಷಯದಲ್ಲಿ 'ಸೈದ್ಧಾಂತಿಕ' ಬಿರುಸುತನಕ್ಕೆ ಸ್ಥಾನವಿಲ್ಲ" ಎಂದು ಅಡ್ವಾಣಿಯವರು ವಿದೇಶಿ ಬಂಡವಾಳಕ್ಕೆ ವಿಮಾ ವಲಯವನ್ನು ತೆರೆಯುವುದನ್ನು ಸಮರ್ಥಿಸಿಕೊಂಡರು. ತನ್ನ ವಾದ ಸಮರ್ಥನೆಗೆ ಅವರು ಸಿಪಿಐ(ಎಂ)ನ ಉದಾಹರಣೆ ನೀಡಿದರು! - ಆರ್ಥಿಕ ವಿಷಯಗಳಲ್ಲಿ ಸಿಪಿಐ(ಎಂ) ಕೂಡಾ ಮೆದು ನಿಲುವು ತಳೆಯುತ್ತದೆ ಎಂದು ಸುಳ್ಳು ಸುದ್ದಿ ಬಿಟ್ಟರು. ನಿಜ, ಅಡ್ವಾಣಿಯ 'ವಂಚನೆಯ ಸಾರಸಂಗ್ರಹ' ಎಂಬ ತನ್ನದೇ ಖ್ಯಾತಿಯನ್ನು ಮೀರಿ ಹೋಗುತ್ತಿದ್ದಾರೆ. ವಿಮಾ ವಲಯವನ್ನು ತೆರೆಯುವುದಕ್ಕೆ ಸಿಪಿಐ(ಎಂ) ವಿರೋಧವನ್ನು 'ಸೈದ್ಧಾಂತಿಕ ಬಿರುಸುತನ'ದ ಮಟ್ಟಕ್ಕಿಳಿಸಲು ಸಾಧ್ಯವಿಲ್ಲ. ರಾಷ್ಟ್ರೀಯ ಹಿತಾಸಕ್ತಿಗಳ ಪರಮಭಾವನೆಯಿಂದ ತಳೆದ ನಿಲುವು ಅದು.

ಆದರೆ ನಾಗಪುರದಲ್ಲಿರುವ ಆರ್.ಎಸ್.ಎಸ್. ಮುಖ್ಯಾಲಯ ಮಧ್ಯ ಪ್ರವೇಶಿಸಿ ಭಿನ್ನಾಭಿಪ್ರಾಯವನ್ನು ದಬಾಯಿಸಿ ವಿದೇಶಿ ಬಂಡವಾಳಕ್ಕೆ ವಿಮಾ ವಲಯವನ್ನು ತೆರೆಯುವ ಬಗ್ಗೆ 'ಒಪ್ಪಂದ' ಎನ್ನುವುದನ್ನು ಹೇರಬೇಕಾಗಿ ಬಂತು. ಏಕೆ? ಕಾರಣ ಸರಳ. ಇಷ್ಟೊಂದು ಅಮೂಲಾಗ್ರವಾಗಿ ಆರ್ಥಿಕವನ್ನು ಹಾಳುಗೆಡವಿ (ಇದನ್ನು ಸರಿಪಡಿಸಲು ವರ್ಷಗಳೇ ಬೇಕಾದೀತು) ಹಣಕಾಸು ಮಂತ್ರಿಗಳು 'ದೇಶದ ಆರ್ಥಿಕ ಪರಿಸ್ಥಿತಿ ಸೂಕ್ಷ್ಮವಾಗಿದೆ' ಎಂದು ತನ್ನ ಬುದ್ಧಿಮತ್ತೆಯನ್ನು ಪ್ರದರ್ಶಿಸಿದರು. ಅವರ ಪ್ರಕಾರ ವಿಮಾ ಮಸೂದೆ ದೇಶಕ್ಕೆ ಎಷ್ಟು ವಿದೇಶಿ ಹಣಹೂಡಿಕೆ ಹರಿದು ಬರಬಹುದು ಎಂಬುದಕ್ಕೆ ಒಂದು 'ಪರೀಕ್ಷೆಯ ವಿಷಯ'ವಂತೆ. ಆದರೆ ಅವರು ಮುಚ್ಚಿಡುವ ಸತ್ಯವೆಂದರೆ ಈಗ ವಿದೇಶಿ ವಿನಿಮಯದಲ್ಲಿ ಇರುವ 2800 ಕೋಟಿ ಡಾಲರುಗಳಲ್ಲಿ 2100 ಕೋಟಿ ಡಾಲರು ಸಟ್ಟಾ ವ್ಯವಹಾರಗಳಿಗೆ ಬಳಸುವ 'ಬಿಸಿ ಹಣ', ಯಾವ ಕ್ಷಣದಲ್ಲಾದರೂ ಹಾರಿ ಹೋಗುವ ಇದನ್ನು ಮುಟ್ಟುವಂತಿಲ್ಲ. ಉಳಿದ 700 ಕೋಟಿ ಡಾಲರು ಒಂದು ತಿಂಗಳ ಆಮದು ಖರ್ಚಿಗೂ ಸಾಲದು. ಹೇಗೇ ಆಗಲಿ, ಬಿಜೆಪಿ ಪ್ರಕಾರ, ದೇಶಕ್ಕೀಗ ವಿದೇಶಿ ವಿನಿಮಯ ಬೇಕು. ಆದರೆ ಅದರ ಧೋರಣೆಗಳಿಂದಾಗಿ ಭಾರತ ಈಗಾಗಲೇ ಭಾರೀ ಸಾಲಗಾರ ದೇಶವಾಗಿದೆ. ಅಂದರೆ ಹೊರಬರಲು ಬಿಜೆಪಿಗೆ ಕಾಣುವ ಒಂದೇ ದಾರಿ ಅನಗತ್ಯ ಆಮದುಗಳನ್ನು ತಡೆಯುವ ದಾರಿಯಲ್ಲ! - ಬದಲಿಗೆ, ಹಣಕಾಸು ಬಂಡವಾಳಕ್ಕೆ, ದೇಶದ ವಿಮಾ ಮಾರುಕಟ್ಟೆಯನ್ನು ಸುಲಿಯಲು, ದೇಶದ ಸಂಪನ್ಮೂಲಗಳನ್ನು ಲೂಟಿ ಹೊಡೆಯಲು ತೆರೆದುಕೊಡುವುದು!

ಈ ಸರಕಾರ ಅಧಿಕಾರ ವಹಿಸಿಕೊಂಡಾಗ ಈ ಹಣಕಾಸು ಮಂತ್ರಿಗಳ ಬಗ್ಗೆ ಒಂದು ಎಚ್ಚರಿಕೆ ನೀಡಿದ್ದೆವು. ತನ್ನ ಮೊದಲ ಆಟದಲ್ಲಿ ಈ ಹಣಕಾಸು ಮಂತ್ರಿ ದೇಶದ ಚಿನ್ನವನ್ನು ಒತ್ತೆಯಿಟ್ಟಿದ್ದರು, ಈಗ ತನ್ನ ಎರಡನೇ ಆಟದಲ್ಲಿ ಅವರು ಭಾರತವನ್ನೇ ಒತ್ತೆಯಿಡ ಹೊರಟಿದ್ದಾರೆ ಈ ಎಚ್ಚರಿಕೆ ನಿಜವಾಗುತ್ತಿದೆ. ಆದರೆ ದೇಶ ಇದಕ್ಕೆ ಭಾರೀ ಬೆಲೆ ತೆರಬೇಕಾಗಿ ಬಂದಿದೆ.

ನಲ್ಮೆಯ ಸಂಗಾತಿ ಯು. ಜನಾರ್ಧನ ನಾಯಕರು

ಬಿ.ಮಾಧವ



ಡಿಸೆಂಬರ್ 9 ರಂದು ರಾತ್ರಿ 9ಗಂಟೆಗೆ ಸಂಗಾತಿ ಯು. ಜನಾರ್ಧನ ನಾಯಕರು ನಮ್ಮನ್ನು ಅಗಲಿದ ಸುದ್ದಿಯನ್ನು ಫೋನ್ ಮೂಲಕ ಕಾಮ್ರೇಡ್ ಕೆ.ಆರ್. ಶ್ರೀಯಾನ್ ಅವರು ನನಗೆ ತಿಳಿಸಿದಾಗ ನನ್ನ ದೇಹದ ಒಂದು ಭಾಗವೇ ಕಿತ್ತು ಬಿದ್ದಂತೆ ಭಾಸವಾಯಿತು. ಕಾಮ್ರೇಡ್ ರಾಮಚಂದ್ರ ರಾಯರನ್ನು ಕಳೆದುಕೊಂಡು ಇನ್ನೂ ಮೂರು ತಿಂಗಳೂ ಆಗಿಲ್ಲ, ದಕ್ಷಿಣ ಕನ್ನಡ ಜಿಲ್ಲೆಯ ಕಮ್ಯೂನಿಸ್ಟ್ ಚಳುವಳಿಯ ಮೇಲೆ ಇನ್ನೊಂದು ತೀವ್ರ ಆಘಾತ ಇಷ್ಟು ಬೇಗನೆ ಬರಬಹುದೆಂಬ ಕಲ್ಪನೆಯೂ ನಮಗಿರಲಿಲ್ಲ. ಅನೇಕ ವರ್ಷಗಳ ಒಡನಾಟ ಮಾತ್ರವಲ್ಲದೆ, ಎಕೆಜಿ ಭವನದಲ್ಲಿ ಪಕ್ಷದ ಜಿಲ್ಲಾ ಸಮಿತಿಯ ಕಚೇರಿ ಕೆಲಸ ಮಾಡಲು ಆರಂಭಿಸಿದ ನಂತರದ ಕಳೆದ ಒಂದು ವರ್ಷದಲ್ಲಿ ಹೆಚ್ಚಿನ ದಿನಗಳಲ್ಲಿ ಬೆಳಗ್ಗಿನಿಂದ ಸಂಜೆಯ ತನಕ ಒಟ್ಟಿಗಿದ್ದು, ತನ್ನ ಹೋರಾಟದ ಜೀವನದ ಅಪಾರ ಅನುಭವಗಳನ್ನು ನನ್ನೊಂದಿಗೆ ಹಂಚಿಕೊಳ್ಳುತ್ತಿದ್ದ ಸಂಗಾತಿ ಜನಾರ್ಧನ ನಾಯಕರು ಹಠಾತ್ತನೆ ಕಣ್ಮರೆಯಾಗಿದ್ದಾರೆಂಬುದನ್ನು ಆಗ ನಂಬಲಿಲ್ಲ ಮಾತ್ರವಲ್ಲ, ಈಗಲೂ ನಂಬಲು ಅತೀವ ಕಷ್ಟವಾಗುತ್ತಿದೆ.

ಎಲ್ಲರಂತಲ್ಲ

ಎಲ್ಲರಂತಲ್ಲ ಜನಾರ್ಧನ ನಾಯಕರು. ಅವರದ್ದು ವಿಶಿಷ್ಟ ವ್ಯಕ್ತಿತ್ವ. ಸಂಗಾತಿ ಎಂಬ ಪದಕ್ಕೆ ಅರ್ಥವೇನೆಂದು ತಿಳಿದುಕೊಳ್ಳಬೇಕಾದವರು ಕಾಮ್ರೆಡ್ ಜನಾರ್ಧನ ನಾಯಕರ ಜೀವನ ಶೈಲಿಯನ್ನು ನೋಡಬೇಕಿತ್ತು. ಸಂಗಾತಿಗಳನ್ನು ಅವರು ಅಷ್ಟೊಂದು ಪ್ರೀತಿಸುತ್ತಿದ್ದರು. ಮಂಗಳೂರು ತಾಲೂಕಿನಾದ್ಯಂತ ಇರುವ ಸಾವಿರಗಟ್ಟಲೆ ಕಾರ್ಯಕರ್ತರಲ್ಲಿ ಪ್ರತಿಯೊಬ್ಬರಿಗೂ ಜನಾರ್ಧನ ನಾಯಕರು ತೀರಾ ನಿಕಟರಾಗಿದ್ದರು. ಮಂಗಳೂರು ತಾಲೂಕಿನ ಜನಸಾಮಾನ್ಯರಲ್ಲಿ ಜನಾರ್ಧನ ನಾಯಕರ ಪರಿಚಯವಿಲ್ಲದವರು ವಿರಳ. ಜನಸಾಮಾನ್ಯರನ್ನು ಗಾಢವಾಗಿ ಪ್ರೀತಿಸುವ ಮತ್ತು ಜನಸಾಮಾನ್ಯರ ಪ್ರೀತಿ ವಿಶ್ವಾಸಗಳನ್ನು ಗಳಿಸಿದ ಅಪರೂಪದ ಸಂಗಾತಿಯಾಗಿದ್ದರು ಕಾಮ್ರೇಡ್ ಜನಾರ್ಧನ ನಾಯಕ್. ಪಕ್ಷದ ಜೀವನವಲ್ಲದೆ ಅವರಿಗೆ ತನ್ನ ಸ್ವಂತ ಜೀವನವೆಂಬುದೇ ಇರಲಿಲ್ಲ. ತನ್ನ ಆರೋಗ್ಯ ತೀರಾ ಹದಗೆಡುತ್ತಿದ್ದುದನ್ನು ಲೆಕ್ಕಿಸದೆ ಬೆಳಗ್ಗೆ 7 ಗಂಟೆಗೇ ಮನೆಯಿಂದ ಹೊರಟು ಹಳ್ಳಿಗಾಡಿನ ದುರ್ಗಮ ದಾರಿಯಲ್ಲಿ ನಡೆದು ತೊಕ್ಕೊಟಿಗೆ ತಲುಪಿ ಅಲ್ಲಿಂದ ಬಸ್ಸಿನಲ್ಲಿ ಮಂಗಳೂರಿಗೆ ಬಂದು 9 ಗಂಟೆಗೆ ಪಕ್ಷದ ಕಚೇರಿಗೆ ತಲುಪುತ್ತಿದ್ದರು. ಪಕ್ಷದ ಕಚೇರಿಯಲ್ಲಿ ಚಾಲನಾ ಶಕ್ತಿಯಾಗಿದ್ದವರು ಜನಾರ್ಧನ ನಾಯಕರೇ. ಉಳಿದವರು, ನಾವು ಬೇರೆ ಬೇರೆ ಚಟುವಟಿಕೆಗಳಿಗಾಗಿ ಹೊರಗೆ ಹೋಗಿ ಬರುತ್ತಾ ಇರುವಾಗ ಪಕ್ಷದ ಕಚೇರಿಯನ್ನು ಕ್ರಿಯಾಶೀಲವಾಗಿಡುವವರು ಅವರು. ಇಂದು ಅವರಿಲ್ಲದ ಎಕೆಜಿ ಭವನ ಕಳೆಗುಂದಿದೆ.

ರೈತ ಚಳುವಳಿಯ ಪ್ರಮುಖರು

ಕಾಮ್ರೇಡ್ ಉಳ್ಳಾಲ ಜನಾರ್ಧನ ನಾಯಕರು ಮಂಗಳೂರು ತಾಲೂಕಿನ ಉಳ್ಳಾಲ ಗ್ರಾಮದ ಉಳಿಯದ ಬಡ ರೈತ ಕುಟುಂಬವೊಂದರಲ್ಲಿ ಹುಟ್ಟಿದವರು. ಪ್ರಾಥಮಿಕ ಶಿಕ್ಷಣವನ್ನು ಪಡೆದ ನಂತರ ಎಳೆ ವಯಸ್ಸಿನಲ್ಲೇ ಬೀಡಿ ಕಾರ್ಮಿಕನಾಗಿ ದುಡಿಯಲು ಆರಂಭಿಸಿದರು. ಈ ಮಧ್ಯೆ ಸ್ವಲ್ಪ ಸಮಯ ಹಂಚಿನ ಕಾರ್ಮಿಕನಾಗಿಯೂ ಕೆಲಸ ಮಾಡಿದ್ದರು. 1950 ರಲ್ಲಿ ಕಮ್ಯೂನಿಸ್ಟ್ ಪಕ್ಷದ ಪೂರ್ಣಕಾಲ ಕಾರ್ಯಕರ್ತರಾಗಿ ಬೀಡಿ ಕಾರ್ಮಿಕರ ಸಂಘಟನೆಯಲ್ಲಿ ಸಕ್ರಿಯವಾಗಿ ದುಡಿಯಲಾರಂಭಿಸಿದರು. ಅವರು 1952 ರಲ್ಲಿ ಜರುಗಿದ ಬೀಡಿ ಕಾರ್ಮಿಕರ ಪ್ರಥಮ ಮುಷ್ಕರದಲ್ಲಿ ಪ್ರಮುಖ ಪಾತ್ರ ವಹಿಸಿದರು. ಅಂದಿನಿಂದ ಅವರೆಂದೂ ಹಿಂತಿರುಗಿ ನೋಡಲಿಲ್ಲ. ಮಂಗಳೂರು ತಾಲೂಕಿನಾದ್ಯಂತ ಬೀಡಿ ಕಾರ್ಮಿಕರನ್ನು ಸಂಘಟಿಸಿ ಅವರ ಹೋರಾಟಗಳಿಗೆ ನೇತೃತ್ವ ನೀಡಿದ ಅವರು 1958 ರಲ್ಲಿ ಉಡುಪಿಯಿಂದ ಬೆಂಗಳೂರುವರೆಗೆ ಹೋದ ಬೀಡಿ ಕಾರ್ಮಿಕರ ಕಾಲ್ನಡಿಗೆ ಜಾಥಾದಲ್ಲಿ ಮಂಗಳೂರಿನಿಂದ ಬೆಂಗಳೂರಿನವರೆಗೆ ನಡೆದು ಕೊಂಡು ಹೋಗಿದ್ದರು. ನಿಧನರಾದ ಸಮಯದಲ್ಲಿ ಅವರು ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನಿನ ಅಧ್ಯಕ್ಷರಾಗಿದ್ದರು. 1950 ರಿಂದಲೇ ರೈತ ಸಂಘದಲ್ಲಿ ಕೆಲಸ ಮಾಡಲಾರಂಭಿಸಿದ ಅವರು ಮುಂದಿನ ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ರೈತ ಚಳುವಳಿಯ ಪ್ರಮುಖ ಮುಖಂಡರಲ್ಲಿ ಒಬ್ಬರಾಗಿ ಬೆಳೆದು ಬಂದರು.

ಭೂಮಾಲಕರ ದರ್ಪ-ದೌರ್ಜನ್ಯಗಳು ತೀವ್ರವಾಗಿದ್ದ ಅಂದಿನ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರ ಹೋರಾಟಗಳನ್ನು ನಡೆಸುವುದೆಂದರೆ ಸಾವಿನೊಂದಿಗೆ ಸರಸವಾಡಿದಂತೆ. ಗೇಣಿ ರೈತರು ಬೆಳೆಸಿದ ಬೆಳೆಗಳನ್ನು ಭೂಮಾಲಕರು ಗೂಂಡಾಗಳ ಮೂಲಕ ಕಟಾವು ಮಾಡುವಾಗ ಅವರನ್ನು ದೈಹಿಕವಾಗಿ ಎದುರಿಸಿ, ರೈತ ಸಂಘದ ಕಾರ್ಯಕರ್ತರು ಬೆಳೆಯನ್ನು ಕಟಾವು ಮಾಡಿ ರೈತರ ಬೆಳೆಗಳಿಗೂ ಹೊಲಕ್ಕೂ ರಕ್ಷಣೆ ನೀಡಿದ ನೂರಾರು ಘಟನೆಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿವೆ. ಭೂಮಾಲಕರು ಗೂಂಡಾಗಳನ್ನು ಉಪಯೋಗಿಸಿ ರೈತರನ್ನು ಅವರ ಮನೆಗಳಿಂದ ಒಕ್ಕಲೆಬ್ಬಿಸಲು ಪ್ರಯತ್ನಿಸಿದ ಅಸಂಖ್ಯ ಸಂದರ್ಭಗಳಲ್ಲಿ ರೈತ ಸಂಘದ ಮುಂದಾಳುಗಳೂ ಕಾರ್ಯಕರ್ತರೂ ರೈತರಿಗೆ ರಕ್ಷಣೆ ನೀಡಿ ಅವರ ಮನೆಗಳನ್ನು ಉಳಿಸಿದ್ದಾರೆ. ರೈತರ ಮೇಲೆ ಪೋಲೀಸ್ ದೌರ್ಜನ್ಯ ನಡೆದಾಗ ಮುಂದೆ ನಿಂತು ರೈತರಿಗೆ ರಕ್ಷಣೆ ನೀಡಿದ್ದಾರೆ. ಇಂತಹ ಅನೇಕ ಹೋರಾಟಗಳಲ್ಲಿ ದಿಟ್ಟ ನಾಯಕತ್ವ ನೀಡಿದವರು ಜನಾರ್ಧನ ನಾಯಕರು. ಭೂಸುಧಾರಣೆಗಾಗಿ ನಡೆದ ಹೋರಾಟಗಳ ಚರಿತ್ರೆಯ ಉದ್ದಕ್ಕೂ ಜನಾರ್ಧನ ನಾಯಕರ ಹೆಜ್ಜೆಯ ಗುರುತುಗಳನ್ನು ಗಮನಿಸಬಹುದು. ಭೂಸುಧಾರಣೆಗಾಗಿ ಒತ್ತಾಯಿಸಿ ಮಂಗಳೂರಿನಿಂದ ಬೆಂಗಳೂರಿಗೆ ಹೋದ ಕಾಲ್ನಡಿಗೆ ಜಾಥಾದಲ್ಲಿ ಅವರು ಭಾಗವಹಿಸಿ ನೇತೃತ್ವ ನೀಡಿದ್ದರು.

ಪಕ್ಷದ ಸ್ವಯಂಸೇವಕರ ತಂಡಗಳ ಜಿಲ್ಲಾ ಕ್ಯಾಪ್ಟನ್ ಆಗಿ ಅವರು ಅಸಂಖ್ಯ ಸ್ವಯಂ ಸೇವಕರಿಗೆ ತರಬೇತಿ ನೀಡಿ ಅವರಲ್ಲಿ ಚೈತನ್ಯ ತುಂಬಿದರು.

ದೀರ್ಘಕಾಲ ಉಳ್ಳಾಲ ಪಂಚಾಯತಿನ ಸದಸ್ಯನಾಗಿ ದುಡಿದ ಅವರು ಒಂದು ಅವಧಿಗೆ ತಾಲೂಕು ಬೋರ್ಡ್ ಸದಸ್ಯರಾಗಿಯೂ ದುಡಿದ್ದರು.

ಕಾಮ್ರೇಡ್ ಜನಾರ್ಧನ ನಾಯಕರ ಹಠಾತ್ ನಿಧನದಿಂದಾಗಿ ಅವರ ಪತ್ನಿ, ಮಗಳು ಮತ್ತು ಅಸಂಖ್ಯ ಸಂಗಾತಿಗಳು ತುಂಬಲಾರದ ನಷ್ಟವನ್ನು ಅನುಭವಿಸಿದ್ದೇವೆ.

ಅಂತಿಮ ಯಾತ್ರೆ:

ಕಾಮ್ರೇಡ್ ಜನಾರ್ಧನ ನಾಯಕರ ನಿಧನದ ಸುದ್ದಿ ತಿಳಿದ ಪಕ್ಷದ ಕಾರ್ಯಕರ್ತರು ತಾ|| 10-12-98 ರಂದು ಬೆಳಿಗ್ಗೆ ಜಿಲ್ಲೆಯ ವಿವಿಧ ಭಾಗಗಳಿಂದ ತೊಕ್ಕೊಟ್ಟಿಗೆ ಧಾವಿಸಿ ಬಂದರು. ಮಧ್ಯಾಹ್ನ 12 ಗಂಟೆಗೆ ಅವರ ದೇಹವನ್ನು ಅವರ ಮನೆಯಿಂದ ತಂದು ತೊಕ್ಕೊಟಿನಲ್ಲಿರುವ ಪಕ್ಷದ ಉಳ್ಳಾಲ ವಲಯ ಸಮಿತಿ ಕಚೇರಿಯ ಮುಂದಿರುವ ಮೈದಾನದಲ್ಲಿ ನಿರ್ಮಿಸಲಾದ ಶಾಮಿಯಾನದಲ್ಲಿ ಅಲಂಕೃತ ವೇದಿಕೆಯ ಮೇಲೆ ಇರಿಸಲಾಯಿತು. ಸಾವಿರಗಟ್ಟಲೆ ಕಾರ್ಯಕರ್ತರು ಲಾಲ್ ಸಲಾಂ ಘೋಷಣೆ ಮೊಳಗಿಸಿದರು. ಕಾಮ್ರೇಡ್ ಕೆ.ಆರ್. ಶ್ರೀಯಾನ್, ಬಿ. ಮಾಧವ, ಸಿ. ನಂಜುಂಡಪ್ಪ, ರಾಮಚಂದ್ರ ಉಚ್ಚಿಲ್ ಮತ್ತು ಅಬ್ರಹಾಂ ಕರ್ಕಡರು ಕಾಮ್ರೇಡ್ ಜನಾರ್ಧನ ನಾಯಕರ ದೇಹದ ಮೇಲೆ ಪಕ್ಷದ ಬಾವುಟವನ್ನು ಹೊದಿಸಿ ಪುಷ್ಪಗುಚ್ಛಗಳನ್ನು ಅರ್ಪಿಸಿ ಗೌರವ ಸಲ್ಲಿಸಿದರು. ವಿವಿಧ ಸಾಮೂಹಿಕ ಸಂಘಟನೆಗಳ ಪರವಾಗಿ ಪುಷ್ಪ ಗುಚ್ಛಗಳನ್ನು ಅರ್ಪಿಸಲಾಯಿತು. ನೆರೆದ ಜನಸ್ತೋಮವು ಸಾಲಾಗಿ ಬಂದು ಗೌರವ ಅರ್ಪಿಸಿದ ನಂತರ ಮಧ್ಯಾಹ್ನ 1 ಗಂಟೆಗೆ ಕಾಮ್ರೇಡ್ ಜನಾರ್ಧನ ನಾಯಕರ ಅಂತಿಮ ಯಾತ್ರೆ ಹೊರಟಿತು. ಸುಮಾರು ಮೂರು ಸಾವಿರ ಮಂದಿ ಭಾಗ ವಹಿಸಿದ್ದ ಅಂತಿಮ ಯಾತ್ರೆಯು ಸುಮಾರು ಆರು ಕಿಲೋ ಮೀಟರ್ ದೂರದ ಅವರ ಮನೆಯ ತನಕ ಸಾಗಿ ಮನೆಯ ಮುಂದಿರುವ ಅವರ ಕುಟುಂಬದ ಹೊಲಕ್ಕೆ ತಲಪಿತು. ಅಲ್ಲಿ ನಿರ್ಮಿಸಲಾದ ಚಿತೆಯಲ್ಲಿ ಕಾಮ್ರೇಡ್ ಜನಾರ್ಧನ ನಾಯಕರ ದೇಹಕ್ಕೆ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಲಿಯ ಸದಸ್ಯರಾದ ಕೆ.ಆರ್ ಶ್ರೀಯಾನ್ ಮತ್ತು ಬಿ. ಮಾಧವನವರು ಅಗ್ನಿಸ್ಪರ್ಶ ಮಾಡಿದರು.

ಅನಂತರ ನಡೆದ ಸಂತಾಪ ಸೂಚಕ ಸಭೆಯಲ್ಲಿ ಕೆ.ಆರ್ ಶ್ರೀಯಾನ್, ಬಿ. ಮಾಧವ, ರಾಮಚಂದ್ರ ಉಚ್ಚಿಲ್, ಸುಕುಮಾರ್ ಮತ್ತು ಸಿಪಿಐ ಮುಂದಾಳು ಬಿ. ವಿಶ್ವನಾಥ ನಾಯಕ್ ಮಾತನಾಡಿ ಶ್ರದ್ಧಾಂಜಲಿ ಅರ್ಪಿಸಿದರು.



ಕೊನೆಗೂ "ಮಹಿಳಾ ಮೀಸಲಾತಿ ಮಸೂದೆ" ಮಂಡನೆ

ಜನವಾದಿ ಮಹಿಳಾ ಸಂಘಟನೆ ಅಭಿನಂದನೆ

ಕೊನೆಗೂ ಮಹಿಳಾ ಮೀಸಲಾತಿ ಮಸೂದೆ ಲೋಕಸಭೆಯ ಮುಂದೆ ಬಂದಿದೆ. ಆದರೆ ಈ ಮಸೂದೆ ಪರವಾದ ಹೋರಾಟ ಇಲ್ಲಿಗೆ ಮುಗಿದಂತಲ್ಲ. ಮಸೂದೆ ಈಗಿರುವ ಸ್ಥಿತಿಯಲ್ಲೇ ಯಥಾವತ್ತಾಗಿ ಜಾರಿಗೆ ಬರಬೇಕು. ಜಾತಿ ಧರ್ಮ ಮತ್ತು ವರ್ಗಗಳ ಹೆಸರಿನಲ್ಲಿ ಮಹಿಳಾ ಸಮುದಾಯವನ್ನು ಒಡೆಯದೆ, ಇಡೀ ಮಹಿಳೆಯರನ್ನು ಒಂದು ಗುಂಪಾಗಿ ಪರಿಗಣಿಸಬೇಕು ಎಂದು ಅದು ಹೇಳಿದೆ.

ಒಟ್ಟಾರೆಯಾಗಿ ಮಹಿಳೆಯರೇ ಶೋಷಿತರು. ಅದರಲ್ಲೂ ಹಿಂದುಳಿದ ವರ್ಗಗಳ-ಪರಿಶಿಷ್ಟ ಜಾತಿಯ ಹಾಗೂ ಆರ್ಥಿಕವಾಗಿ ದುರ್ಬಲರಾದ ಮಹಿಳೆಯರು ಮತ್ತಷ್ಟು ಶೋಷಿತರು ಎಂಬ ಅರಿವು ನಮಗಿದೆ. ಆದರೆ ಆರಂಭದಲ್ಲೇ ವರ್ಗೀಕರಣ ಮಾಡಿದರೆ ಒಟ್ಟು ಮಹಿಳಾ ಸಮುದಾಯದ ಒಳಿತು ಮೂಲೆ ಗುಂಪಾಗುತ್ತದೆ ಎಂಬುದು ನಮ್ಮ ನಿಲುವು ಎಂದು ಜೆ.ಎಂ.ಎಸ್.ಹೇಳಿದೆ.

ಸಾರ್ವತ್ರಿಕ ಚುನಾವಣೆಯಲ್ಲಿ ಹಿಂದುಳಿದ ವರ್ಗಗಳಿಗೆ ಪ್ರತ್ಯೇಕ ಮೀಸಲಾತಿ ಬೇಕೆಂದು ಈ ರೀತಿಯ ಒತ್ತಡವನ್ನು ಎಂದೂ ಹೇರದಿರುವವರು ಹಿಂದುಳಿದ ಮಹಿಳೆಯರ ಬಗ್ಗೆ ಮಾತ್ರ ಏಕೆ ಇಷ್ಟೊಂದು ಕಾಳಜಿ ವಹಿಸುತ್ತಿದ್ದಾರೆಂಬುದು ಮೀಸಲಾತಿ ಮಸೂದೆ ಪರವಾಗಿರುವ ಯಾರಿಗೂ ಅರ್ಥವಾಗುತ್ತಿಲ್ಲ. ಈ ಮಸೂದೆಯಲ್ಲಿ ಹಿಂದುಳಿದ ವರ್ಗಗಳ ಮಹಿಳೆಯರಿಗೆ ಮೀಸಲಾತಿ ಕಲ್ಪಿಸಲು ಇಷ್ಟೊಂದು ಹೋರಾಡುತ್ತಿರುವ ಆ ನಾಯಕರು ತಮ್ಮದೇ ಪಕ್ಷಗಳಲ್ಲಿ ಎಷ್ಟು ಜನ ಹಿಂದುಳಿದ ಮಹಿಳೆಯರಿಗೆ ನಾಯಕತ್ವದ ಅವಕಾಶ ನೀಡಿದ್ದಾರೆ? ಉತ್ತರ ಭಾರತದ ರಾಜ್ಯಗಳಲ್ಲಿ ಹಿಂದುಳಿದ ವರ್ಗಗಳ ಮೇಲೆ ಅದರಲ್ಲೂ ಆ ವರ್ಗಗಳ ಮಹಿಳೆಯರ ಮೇಲೆ ನಡೆಯುತ್ತಿರುವ ಹೀನಾಯ ದೌರ್ಜನ್ಯಗಳ ವಿರುದ್ಧ ಎಷ್ಟು ಬಾರಿ ಸಿಡಿದೆದ್ದಿದ್ದಾರೆ? ಎಷ್ಟು ಜನರಿಗೆ ರಕ್ಷಣೆ ನೀಡಿದ್ದಾರೆ? ನ್ಯಾಯ ಒದಗಿಸಿದ್ದಾರೆ? ಸದಾ ಜಾತಿ ರಾಜಕೀಯವನ್ನೇ ಮಾಡಿಕೊಂಡು ಅಧಿಕಾರದ ಮೇಲೆ ಕಣ್ಣಿಟ್ಟಿರುವ ರಾಜಕಾರಣಿಗಳು ಮಹಿಳೆಯರನ್ನು ಅದೇ ರೀತಿ ಒಂದು ಮತ ಬ್ಯಾಂಕ್ ಮಾಡಿಕೊಳ್ಳಲು ಹುನ್ನಾರ ನಡೆಸಿದ್ದಾರೆ. ಇದಕ್ಕೆ ಬಲಿಯಾಗದಂತೆ ಮಹಿಳೆಯರು ಇಂದು ಎಚ್ಚರ ವಹಿಸಬೇಕಾಗಿದೆ. ಇದಕ್ಕಾಗಿ ಎಲ್ಲಾ ಮಹಿಳೆಯರು ತಮ್ಮ ನಡುವಿನ ಎಲ್ಲಾ ರೀತಿಯ ಭೇದ ಭಾವಗಳನ್ನು ತೊರೆದು ಒಂದಾಗಬೇಕಾದ ತುರ್ತು ಇದೆ ಎಂದು ಜೆ.ಎಂ.ಎಸ್. ಕರೆ ನೀಡಿದೆ.

ಈ ಮಸೂದೆ ಮಂಡನೆಯನ್ನು ತಮ್ಮ ಸಕಾರದ ಸಾಧನೆಯ ಪಟ್ಟಿಗೆ ಸೇರಿಸಲು ಬಿಜೆಪಿ ಸರ್ಕಾರವೂ ಕುತಂತ್ರ ನಡೆಸಿದೆ. ಅಧಿಕಾರಕ್ಕೆ ಬಂದಾಗಿನಿಂದಲೂ ಮೇಲಿಂದ ಮೇಲೆ ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸುತ್ತೇವೆ, ಮಂಡಿಸುತ್ತೇವೆ ಎನ್ನುತ್ತಲೇ ಒಮ್ಮತದ ಅಭಿಪ್ರಾಯ ಸರ್ವಪಕ್ಷ ಸಭೆ ಇತ್ಯಾದಿಗಳ ಹೆಸರಿನಲ್ಲಿ ವಿಳಂಬ ತಂತ್ರವನ್ನು ಅದು ಅನುಸರಿಸಿತು. ಇದುವರೆಗೂ ಭಾರತೀಯ ಸಂವಿಧಾನಕ್ಕೆ ಆಗಿರುವ 80 ಕ್ಕೂ ಹೆಚ್ಚು ತಿದ್ದುಪಡಿಗಳಲ್ಲಿ ಎಲ್ಲಾ ತಿದ್ದುಪಡಿ ಮಸೂದೆಗಳಿಗೂ ಇದೇ ರೀತಿ ಒಮ್ಮತದ ಅಭಿಪ್ರಾಯವನ್ನೇ ಪಡೆಯಲಾಗಿದೆಯಾ ಎಂದು ಪ್ರಶ್ನಿಸಿರುವ ಜೆ.ಎಂ.ಎಸ್. ಸಂವಿಧಾನ ತಿದ್ದುಪಡಿಗೆ ಬೇಕಾಗಿರುವುದು ಸದನದ ಮೂರರಲ್ಲಿ ಎರಡು ಭಾಗದಷ್ಟು ಸದಸ್ಯರ ಸಮ್ಮತಿ, ಈ ಸಂಖ್ಯೆಯ ಸದಸ್ಯರ ಬೆಂಬಲ ಈ ಮಸೂದೆಗೆ ಇರುವುದು ಕಳೆದ ಎರಡು ವರ್ಷಗಳಿಂದ ಸ್ಪಷ್ಟವಾಗಿರುವಾಗ ಒಮ್ಮತದ ಅಭಿಪ್ರಾಯವೇ ಬೇಕೆಂದು ಪಟ್ಟು ಹಿಡಿದಿರುವ ಸರ್ಕಾರದ ಉದ್ದೇಶದ ಬಗ್ಗೆ ಸಂದೇಹ ಅದು ವ್ಯಕ್ತಪಡಿಸಿದೆ. ನಮ್ಮ ಸಾಮಾಜಿಕ ಪರಿಸ್ಥಿತಿಯಲ್ಲಿ ಈ ಮಸೂದೆಗೆ ಅಂತಹ 'ಒಮ್ಮತ'ದ ಬೆಂಬಲ ದೊರೆಯುವುದು ಅಸಾಧ್ಯವೆಂದು ಗೊತ್ತಿದ್ದೂ ಈ ತಂತ್ರ ಹೂಡಿರುವುದು ನೋಡಿದರೆ ಭಾರತಿಯ ಜನತಾ ಪಕ್ಷದ ಸರ್ಕಾರಕ್ಕೆ ಈ ಮಸೂದೆಯ ಬಗ್ಗೆ ನಿಜವಾದ ಕಾಳಜಿ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ. ಮಹಿಳಾ ಮೀಸಲಾತಿ ಮಸೂದೆ ವಿರೋಧಿಗಳಾದ ಬಿ.ಜೆ.ಪಿ.ಯ ಮಿತ್ರ ಸಂಘಟನೆಗಳಾದ ಆರ್.ಎಸ್.ಎಸ್. ಭಜರಂಗದಳ, ಶಿವಸೇನೆ ಮತ್ತು ಮಹಿಳಾ ಮೋರ್ಚಾಗಳ ಕೈಗೊಂಬೆಯಾಗಿವೆ.

ಈ ಎಲ್ಲದರ ಹಿನ್ನೆಲೆಯಲ್ಲಿ ಮಹಿಳಾ ಮಿಸಲಾತಿ ಪರವಾದ ಹೋರಾಟ ಮತ್ತಷ್ಟು ಬಲಗೊಳ್ಳ ಬೇಕಿದೆ. ಸಂಸತ್ತಿನ ಒಳಗೆ ಹಾಗೂ ಹೊರಗೆ ಎಲ್ಲಾ ಮಹಿಳೆಯರು ಪಕ್ಷ ಬೇಧ ತೊರೆದು ಒಗ್ಗಟ್ಟಾಗಿ ನಿಲ್ಲಬೇಕು. ಇದು ಕೇವಲ ಮಹಿಳೆಯರ ಪ್ರಶ್ನೆಯಾಗಿರದೆ ಒಟ್ಟು ಸಮುದಾಯದ ಪ್ರಶ್ನೆಯಾಗಿರುವುದರಿಂದ ಮಸೂದೆ ಪರವಾಗಿ ಚಳುವಳಿಯನ್ನು ಬಲಪಡಿಸಬೇಕು ಎಂದು ಸಂಘಟನೆ ಆಗ್ರಹ ಪಡಿಸಿದೆ.

ಸರ್ಕಾರಿ ನೌಕರರ ಬೇಡಿಕೆ ಈಡೇರಿಸಲು ಸಿಪಿಐ(ಎಂ) ಆಗ್ರಹ

ವೇತನ ಪರಿಷ್ಕರಣವೂ ಸೇರಿದಂತೆ ರಾಜ್ಯ ಸರ್ಕಾರಿ ನೌಕರರ ನ್ಯಾಯ ಸಮ್ಮತ ಬೇಡಿಕೆಗಳನ್ನು ಈಡೇರಿಸಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯು ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ. ನೌಕರರ ಬೇಡಿಕೆಗಳ ಬಗ್ಗೆ ಸರ್ಕಾರ ಮತ್ತು ನೌಕರರ ಸಂಘದ ನಡುವೆ ನಡೆದ ಮಾತುಕತೆ ವಿಫಲವಾಗಿರುವ ಬಗ್ಗೆ ವಿಷಾದ ವ್ಯಕ್ತಪಡಿಸಿರುವ ಸಿಪಿಐ(ಎಂ) ರಾಜ್ಯ ಸಮಿತಿಯು ಸರ್ಕಾರ ಇದನ್ನು ಪ್ರತಿಷ್ಠೆಯ ದೃಷ್ಟಿಯಿಂದ ಕಾಣದ ತಕ್ಷಣ ನೌಕರರ ಸಂಘದ ಮುಖಂಡರನ್ನು ಇನ್ನೊಂದು ಸುತ್ತಿನ ಮಾತುಕತೆಗೆ ಕರೆಯಬೇಕೆಂದು ಒತ್ತಾಯಿಸಿದೆ.

ಕೇಂದ್ರದ 5ನೇ ವೇತನ ಆಯೋಗದ ಶಿಫಾರಸುಗಳನ್ನು ರಾಜ್ಯದಲ್ಲಿ ಜಾರಿಗೆ ತಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಿ ನೌಕರರ ನಡುವೆ ಇದ್ದ ವೇತನ ತಾರತಮ್ಯವನ್ನು ನಿವಾರಿಸುವಂತೆ ರಾಜ್ಯ ಸರ್ಕಾರಿ ನೌಕರರು ಕಳೆದ ಒಂದು ವರ್ಷದಿಂದ ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತಾ ಬಂದಿದ್ದಾರೆ. ನೌಕರರ ಬೇಡಿಕೆಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ಕಳೆದ ಜನವರಿ ತಿಂಗಳಲ್ಲಿ ನೇಮಿಸಲಾಗಿದ್ದ ಹಿರಿಯ ಅಧಿಕಾರಿಗಳ ಸಮಿತಿಯು ಇಲ್ಲಿಯವರೆಗೆ ಅನುಸರಿಸುತ್ತಾ ಬಂದಿರುವ ವಿಳಂಬ ನೀತಿಗೆ ಸರ್ಕಾರವೇ ಹೊಣೆಯಾಗಿದೆ.

ಸರ್ಕಾರದ ಈ ವಿಳಂಬ ಧೋರಣೆ ಸಮರ್ಥನೀಯವಲ್ಲ. ರಾಜ್ಯ ಸರ್ಕಾರಿ ನೌಕರರಿಗೆ ಕೇಂದ್ರ ಸರ್ಕಾರಿ ನೌಕರ ಜೊತೆಯಲ್ಲಿ ಸಮಾನವೇತನ ನೀಡುವುದರಿಂದ ರಾಜ್ಯ ಸರ್ಕಾರದ ಮೇಲೆ ಬೀಳುವ ಹೆಚ್ಚುವರಿ ಹೊರೆಯನ್ನು ನೀಗಿಸಲು ಕೇಂದ್ರದಿಂದ ಅವಶ್ಯಕ ನೆರವನ್ನು ಪಡೆಯಲು ಸಾಧ್ಯವಾಗಬೇಕು.

ರಾಜ್ಯದ 5 ಲಕ್ಷ ಸರ್ಕಾರಿ ನೌಕರರು ಸರ್ಕಾರಕ್ಕೆ ಸಾಕಷ್ಟು ಕಾಲಾವಕಾಶ ಕೊಟ್ಟು ಈಗ ಅನಿವಾರ್ಯವಾಗಿ ಜನವರಿ 21 ರಿಂದ ಆರಂಭಿಸಲಿರುವ ಅನಿರ್ದಿಷ್ಟ ಮುಷ್ಕರಕ್ಕೆ ಸಿಪಿಐ(ಎಂ) ರಾಜ್ಯ ಸಮಿತಿ ಸೌಹಾರ್ದ ಬೆಂಬಲವನ್ನು ಘೋಷಿಸಿದೆ.

ಏಜೆನ್ಸಿದಾರರಲ್ಲಿ ಮತ್ತೊಮ್ಮೆ ಮನವಿ

'ಐಕ್ಯರಂಗ' ಅತ್ಯುತ್ತಮ ಹಾಗೂ ಅತ್ಯುಪಯುಕ್ತ ರೀತಿಯಲ್ಲಿ ಪ್ರಕಟವಾಗುವಲ್ಲಿ ನಮ್ಮ ಮಾನ್ಯ ಏಜೆನ್ಸಿದಾರರ ಸಹಕಾರದ ಮಹತ್ವವನ್ನು ನಾವು ಮತ್ತೆ - ಮತ್ತೆ ನೆನಪಿಸುತ್ತಾ ಬಂದಿದ್ದೇವೆ. ಅಭೂತಪೂರ್ವ ಬೆಲೆಯೇರಿಕೆಯ ಈ ದಿನಗಳಲ್ಲಿ ಇದು ಇನ್ನಷ್ಟು ಮುಖ್ಯವಾಗಿದೆ. ಆದರೆ ದುರದೃಷ್ಟವಶಾತ್ ಕೆಲವು ಏಜೆನ್ಸಿದಾರರು ಪರಿಸ್ಥಿತಿಯ ಗಂಭೀರತೆಯನ್ನು ಇನ್ನೂ ಅರಿತುಕೊಂಡಂತಿಲ್ಲ. ಇಂತಹ ಏಜೆನ್ಸಿದಾರರು ಇನ್ನು ಒಂದು ತಿಂಗಳೊಳಗೆ ತಮ್ಮ ಬಾಕಿಯನ್ನು ಚುಕ್ತಾ ಮಾಡದಿದ್ದರೆ ಅವರಿಗೆ ಜನವರಿ 1999 ರಿಂದ ಪತ್ರಿಕೆಯನ್ನು ನಿಲ್ಲಿಸದೆ ನಿರ್ವಾಹವಿಲ್ಲವಾಗಿದೆ. ಸಂಬಂಧಪಟ್ಟ ಏಜೆನ್ಸಿದಾರರಿಗೆ ಈ ಬಗ್ಗೆ ಪ್ರತ್ಯೇಕವಾಗಿ ಪತ್ರಗಳನ್ನು ಈಗಾಗಲೇ ಕಳಿಸಲಾಗಿದೆ. ಇತರರು ತಮ್ಮ ಬಾಕಿಯನ್ನು ಫೆಬ್ರವರಿ ಅಂತ್ಯದೊಳಗೆ ಕನಿಷ್ಟ ಮೂರು ತಿಂಗಳ ಮಟ್ಟಕ್ಕೆ ಇಳಿಸಬೇಕು ಎಂದೂ ಕೇಳಿಕೊಳ್ಳುತ್ತೇವೆ. ದುಡಿಯುವ ಜನರ ಈ ಪತ್ರಿಕೆಯ ಪ್ರಕಟಣೆಯಲ್ಲಿ ಸಂಪೂರ್ಣ ಸಹಕಾರ ನೀಡಬೇಕೆಂದು ಮತ್ತೊಮ್ಮೆ ಏಜೆನ್ಸಿದಾರರಲ್ಲಿ ವಿನಂತಿಸಿಕೊಳ್ಳುತ್ತೇವೆ.

- ಐಕ್ಯರಂಗ

ವಿಳಾಸ ಬದಲಾವಣೆ

ಕ್ರಿಯಾಪ್ರಕಾಶನವು ನಂ. 12, 18ನೇ ಕ್ರಾಸ್, ಸಂಪಂಗಿರಾಮನಗರ, ಬೆಂಗಳೂರು -27 ಇಲ್ಲಿಗೆ ವರ್ಗಾವಣೆಗಿರುವುದರಿಂದ ಇನ್ನು ಮುಂದೆ ಯಾವುದೇ ರೀತಿಯ ಪತ್ರವ್ಯವಹಾರ, ಇನ್ನಿತರ ವ್ಯವಹಾರಗಳನ್ನು ಹಿಂದಿನ ವಿಳಾಸವಾದ ನಂ.9, ಶೋಭಾಲಾಡ್ಜ್ ಕಾಂಪ್ಲೆಕ್ಸ್, ಗಾಂಧಿನಗರ ವಿಳಾಸದೊಂದಿಗೆ ನಡೆಸಬಾರದೆಂದು ಕೋರಿಕೆ.- ವ್ಯವಸ್ಥಾಪಕರು

ಕರ್ನಾಟಕದಲ್ಲಿ ಪ್ರಜಾಪ್ರಭುತ್ವ ಆಂದೋಲನಕ್ಕೆ ಹೊಸ ಹುರುಪು ನೀಡಿದ

ಸಾರ್ವತ್ರಿಕ ಮುಷ್ಕರ ಮತ್ತು ಹರತಾಳ

ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಕರೆಯ ಮೇರೆಗೆ ರಾಜ್ಯದ ಮೂಲೆ-ಮೂಲೆಗಳಲ್ಲೂ ಸಾರ್ವತ್ರಿಕ ಮುಷ್ಕರ, ರಸ್ತೆ-ರೋಕೋ, ರೈಲ್-ರೋಕೋಗಳ ಮೂಲಕ ಸಾರ್ವತ್ರಿಕ ಹರತಾಳ ನಡೆಸಿದ ವರದಿಗಳು ಬರುತ್ತಿವೆ. ಸೆಪ್ಟೆಂಬರ್ 1 ರಂದು ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಸಮಾವೇಶದಿಂದ ಆರಂಭವಾದ ಈ ಪ್ರಚಾರ-ಪ್ರಕ್ಷೋಭೆ ಡಿಸೆಂಬರ್ 11 ರ ಸಾಮೂಹಿಕ ಕಾರ್ಯಾಚರಣೆಯೊಂದಿಗೆ ಒಂದು ಹೊಸ ಘಟ್ಟವನ್ನು ತಲುಪಿತು. ಇದಕ್ಕೆ ಮೊದಲು ಸುಮಾರು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ, ಹಲವು ತಾಲೂಕುಗಳಲ್ಲಿ ಸಮಾವೇಶ, ನಂತರ ಹತ್ತಕ್ಕೂ ಹೆಚ್ಚು ಪ್ರಚಾರ ಜಾಥಾಗಳು, ನವೆಂಬರ್ 16 ರಂದು ಬೆಂಗಳೂರಿನಲ್ಲಿ ಬೃಹತ್ ರ್‍ಯಾಲಿ ಉಂಟುಮಾಡಿದ ಅಭೂತಪೂರ್ವ ಜಾಗೃತಿಯ ಹಿನ್ನೆಲೆಯಲ್ಲಿ ಡಿಸೆಂಬರ್ 11 ರ ಕಾರ್ಯಾಚರಣೆ ನಡೆಯಿತು.

ಹಿಂದಿನ ಮುಷ್ಕರದ ಕರೆಗಳಿಗೆ ಹೋಲಿಸಿದಲ್ಲಿ ಈ ಬಾರಿಯ ಮುಷ್ಕರ ಹರತಾಳ ವ್ಯಾಪಕವಾಗಿದ್ದು ಹೆಚ್ಚು ಯಶಸ್ಸು ಕಂಡಿದೆ. ಈ ಐಕ್ಯತೆಯನ್ನು ಗಟ್ಟಿಗೊಳಿಸಿ ಮುಂದುವರಿಸುವದರ ಜತೆಯಲ್ಲೇ ಇನ್ನಷ್ಟು ವಿಸ್ತರಿಸಬೇಕಾಗಿದೆ ಎಂದಿರುವ ಡಿಸೆಂಬರ್ 17 ರಂದು ಬೆಂಗಳೂರಿನಲ್ಲಿ ಸಭೆ ಸೇರಿದ ಸಿಪಿಐ(ಎಂ) ಸಮಿತಿ ಈ ಕಾರ್ಯಾಚರಣೆಯನ್ನು ಅತ್ಯಂತ ಯಶಸ್ವಿಗೊಳಿಸಿದ ರಾಜ್ಯದ ಕಾರ್ಮಿಕರನ್ನು, ರೈತರನ್ನು ಕೃಷಿಕೂಲಿಕಾರರನ್ನು, ವಿದ್ಯಾರ್ಥಿಗಳನ್ನು, ಯುವಜನರನ್ನು ಹಾಗೂ ಮಹಿಳೆಯರನ್ನು, ಅಭಿನಂದಿಸುತ್ತಾ ಹೇಳಿದೆ. ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ ಚಳುವಳಿಯ ಒಂದು ಹಂತ ಮುಗಿದಿದೆ. ಈ ಚಳುವಳಿಯಲ್ಲಿ ಹೊಸ ಆರ್ಥಿಕ ನೀತಿಯ, ಅದರಲ್ಲಿಯೂ ಬೆಲೆ ಏರಿಕೆ ಪ್ರಮುಖವಾಗಿ ಹಾಗೂ ಬಿಜೆಪಿ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವುದು ಮತ್ತು ಕೋಮುವಾದೀಕರಣ ಪ್ರಯತ್ನ, ಅಲ್ಪಸಂಖ್ಯಾತರ ಮೇಲೆ ಹಲ್ಲೆಗಳು, ಅದರಲ್ಲಿಯೂ ಮುಖ್ಯವಾಗಿ ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲೆ ಧಾಳಿಗಳಿಂದಾಗಿ ಹೆಚ್ಚು ಹೆಚ್ಚು ಜನರನ್ನು ಒಳಗೊಳ್ಳುವಂತಾಗಿದೆ. ಹೋರಾಟಗಳು ವಿಸ್ತಾರಗೊಂಡಿವೆ.

ಕೇಂದ್ರದಲ್ಲಿ ಬಿಜೆಪಿ ಹಾಗೂ ಕಾಂಗ್ರೆ ಪಕ್ಷಗಳು ಒಟ್ಟಿಗೆ ಸೇರಿ ವಿಮಾ ಹಾಗೂ ಪೇಟೆಂಟ್ ಮಸೂದೆಯನ್ನು ಅಂಗೀಕರಿಸಲು ನಡೆಸುತ್ತಿರುವ ತರಾತುರಿ ನೋಡಿದರೆ ಹೋರಾಟಗಳು ಇನ್ನಷ್ಟು ಮತ್ತಷ್ಟು ತೀವ್ರಗೊಳ್ಳಬೇಕಾದ ಅವಶ್ಯಕತೆಯನ್ನು ಪ್ರತಿಪಾದಿಸುತ್ತಿವೆ.

ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ ಅದರ ಸ್ವರೂಪ, ಪಾತ್ರ, ಸಂಘಟನೆಗಳಲ್ಲಿದ್ದೂ ಹೋರಾಟಕ್ಕೆ ಹಿಂಜರಿಯುವವರನ್ನು ಹೋರಾಟಕ್ಕೆ ತೊಡಗಿಸುವುದು ಸಂಘಟನೆಗಳ ಹೊರಗಿರುವ ಅಸಂಖ್ಯಾತ ಜನ ಸಮುದಾಯವನ್ನು ಹೋರಾಟಕ್ಕೆ, ಸಂಘಟನೆಗಳಿಗೆ ಸೆಳೆಯುವದು ಈ ರೀತಿಯ ವಿಸ್ತಾರವಾದ ಜನರ ಹೋರಾಟದ ಕಣವಾಗಿ ದುಡಿಯುವ ವಿವಿಧ ವರ್ಗಗಳ ಜಂಟಿ ಹೋರಾಟದ ರಂಗವಾಗಿ ಈ ರಾಷ್ಟ್ರೀಯ ವೇದಿಕೆ ಮುನ್ನಡೆ ಸಾಧಿಸಿದ್ದು ಆ ಮೂಲಕ ರಾಜ್ಯದಲ್ಲಿ ಪ್ರಜಾಸತ್ತಾತ್ಮಕ ಚಳುವಳಿಯ ವಿಸ್ತರಣೆಗೆ ನೆರವಾಗಿದೆ.

ಈ ಸಂಚಿಕೆ ಮುದ್ರಣಕ್ಕೆ ಹೋಗುವವರೆಗೆ ನಮಗೆ ಬಂದ ವರದಿಗಳನ್ನು ಇಲ್ಲಿ ಕೊಡಲಾಗಿದೆ.



ಉತ್ತರ ಕನ್ನಡ ಜಿಲ್ಲೆಯಲ್ಲಿ ....

ಬಿಜೆಪಿ ಸರಕಾರದ ಜನವಿರೋಧಿ ಆರ್ಥಿಕ ನೀತಿ ಬೆಲೆ ಏರಿಕೆ, ಕೋಮುವಾದಿ ನೀತಿ ವಿರುದ್ಧ ಸಾಮೂಹಿಕ ಸಂಘಟಣೆಗಳ ರಾಷ್ಟ್ರೀಯ ವೇದಿಕೆಯ ಕರೆಯಂತೆ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಭಾರಿ ಜನ ಬೆಂಬಲದೊಂದಿಗೆ ಯಶಸ್ವಿಗೊಳಿಸಲಾಗಿದೆ.

ಕಾರವಾರ: ಸುಮಾರು ಐದುನೂರು ಜನರು ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಯವರಿಗೆ ಮನವಿ ಅರ್ಪಿಸಲಾಯಿತು. ಮೆರವಣಿಗೆಯಲ್ಲಿ ವಿಮಾ, ಬ್ಯಾಂಕು, ಅಂಗನವಾಡಿ ಗ್ರಾಮಪಂಚಾಯತ್ ನೌಕರರು, ವಿದ್ಯಾರ್ಥಿ ಯುವಜನರು ಮತ್ತು ರೈತರು ಪಾಲ್ಗೊಂಡಿದ್ದರು. ನಗರದಲ್ಲಿ ವಿಮಾ ಮತ್ತು ಬ್ಯಾಂಕ್ ಕೆಲಸಗಳು ಸ್ಥಗಿತಗೊಂಡಿದ್ದವು. ಅಂಗನವಾಡಿ ಕೇಂದ್ರಗಳು ತಾಲೂಕಿನಾದ್ಯಂತ ಬಂದಾಗಿದ್ದವು. ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಬಹಿಷ್ಕಾರ ಹಾಕಿ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಕಾರ್ಯಕ್ರಮದ ನೇತೃತ್ವವನ್ನು ಎ.ಐ.ಬಿ.ಇ.ಎ. ಮುಖಂಡರಾದ ವಿನೋದ ಮೇತ್ರಿ, ಎ.ಐ.ಐ.ಇ.ಎ.ಯ ಪಿ.ಆರ್ ನಾಯ್ಕ, ಬಿ.ಇ.ಎಫ್. ಐ.ನ ಶಂಬುಶೆಟ್ಟಿ, ಎಸ್.ಎಫ್.ಐ.ನ ಜಿಲ್ಲಾಧ್ಯಕ್ಷ ಯಮುನಾ ಗಾಂವ್ಕರ, ಗ್ರಾಮಪಂಚಾಯತ್ ನೌಕರರ ಕಾರ್ಯದರ್ಶಿ ತುಕಾರಾಮ ನಾಯ್ಕ, ಅಂಗನವಾಡಿ ನೌಕರರ ಸಂಘ (ಸಿ.ಐ.ಟಿ.ಯು)ದ ಅಧ್ಯಕ್ಷೆ ರಜನಿ ಹಬ್ಬು, ರೈತ ಸಂಘದ ಜಿ.ಎಲ್. ನಾಯ್ಕ ಮುಂತಾದವರು ವಹಿಸಿದ್ದರು.

ಅಂಕೋಲಾ: 600 ಕ್ಕೂ ಹೆಚ್ಚು ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರು ನಗರದಲ್ಲಿ ಮೆರವಣಿಗೆ ನಡೆಸಿ ತಹಸೀಲ್ದಾರರಿಗೆ ಮನವಿ ಅರ್ಪಿಸಲಾಯಿತು. ಅಂಗನವಾಡಿ ನೌಕರರು, ಸಿ.ಐ.ಟಿ.ಯು, ಎಸ್.ಎಫ್.ಐ., ಡಿ.ವೈ.ಎಫ್.ಐ. ಕಾರ್ಯಕರ್ತರು, ಹಂಚುಕಾರ್ಮಿಕರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಸಭೆಯಲ್ಲಿ ಡಿ.ವೈ.ಎಫ್.ಐ ರಾಜ್ಯ ಸಮಿತಿ ಅಧ್ಯಕ್ಷ ಶಾಂತಾರಾಮ ನಾಯಕ, ತಾಲೂಕು ಸಂಚಾಲಕ ತುಕಾರಾಮ ನಾಯ್ಕ, ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಮಾಲಿನಿ ಕಾಮತ ಮಾತನಾಡಿದರು. ಮೆರವಣಿಗೆಯ ನೇತೃತ್ವವನ್ನು ಸಿ.ಐ.ಟಿ.ಯು ಮುಖಂಡರಾದ ಬೀರಣ್ಣ ನಾಯಕ ಅನಂತ ಗೌಡಾ, ಶಿವಾನಂದ ನಾಯಕ, ದಾಮೋದರ ನಾಯ್ಕ, ಲಲಿತಾಶೆಡಗೇರಿ, ಡಿ.ವೈ.ಎಫ್.ಐ.ನ ಶಿವು ಗೌಡಾ, ಎಸ್.ಎಫ್.ಐ.ನ ನಾಗರಾಜು ಶೆಟ್ಟಿ ಮುಂತಾದವರು ವಹಿಸಿದ್ದರು.

ಅಗಸೂರು: ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 63 ರನ್ನು ಒಂದು ತಾಸು ತಡೆಯಲಾಯಿತು. ಸ್ಥಳೀಯ ಹಂಚಿನ ಕಾರ್ಖಾನೆ ಕಾರ್ಮಿಕರು, ಭಾರತ ಪ್ರಜಾಸತ್ತಾತ್ಮಕ ಯುವಜನ ಫೇಡರೇಶನ್ ಸದಸ್ಯರು, ರೈತರು, ವಿದ್ಯಾರ್ಥಿಗಳು ಸುಮಾರು 300 ಜನ ಭಾಗವಹಿಸಿದ್ದರು. ರಸ್ತೆ ತಡೆ ನಿರತ ಕಾರ್ಯಕರ್ತರನ್ನು ಉದ್ದೇಶಿಸಿ ಶಾಂತಾರಾಮ ನಾಯಕ ಮಾತನಾಡಿ ಕೇಂದ್ರ ಸರಕಾರದ ಜನ ವಿರೋಧಿ ನೀತಿಗಳನ್ನು ತೀವ್ರವಾಗಿ ಖಂಡಿಸಿದರು. ಬೆಲೆ ಏರಿಕೆ ತಡೆಗಟ್ಟಲು ವಿಫಲವಾದ ಕೇಂದ್ರ ಸರಕಾರ ಒಂದು ದಿವಸವೂ ಅಧಿಕಾರದಲ್ಲಿರಲು ಅರ್ಹವಲ್ಲ ಎಂದರು. ಹೋರಾಟಕ್ಕೆ ಬೆಂಬಲಿಸಿ ತಾಲೂಕ ಪಂಚಾಯತ್ ಸದಸ್ಯ ರಾಮಚಂದ್ರ ನಾಯಕ ಮಾತನಾಡಿದರು. ರಸ್ತಾ ರೋಕೊ ನೇತೃತ್ವವನ್ನು ಶಿವಾನಂದ ನಾಯ್ಕ, ದಾಮೋದರ ನಾಯ್ಕ , ನಾಗೇಂದ್ರ ನಾಯ್ಕ, ಬೊಮ್ಮಯ್ಯ ಗೌಡಾ ಮುಂತಾದವರು ವಹಿಸಿದ್ದರು.

ಕುಮಟ: ಅಂಗನವಾಡಿ ನೌಕರರು ಮೆರವಣಿಗೆ ನಡೆಸಿ ಮನವಿ ಅರ್ಪಿಸಲಾಯಿತು. ನೌಕರರನ್ನು ಖಾಯಂಗೊಳಿಸಲು, ಕನಿಷ್ಟ ವೇತನ ಜಾರಿಗೆ ಅಗ್ರಹಿಸಲಾಯಿತು. ಡಿ.ವೈ.ಎಫ್.ಐ.ನ ಜಿಲ್ಲಾ ಸಂಚಾಲಕ ವಿಠಲ್ ಭಂಡಾರಿ ಸಭೆಯನ್ನು ಉದ್ದೇಶಿಸಿ ಮಾತನಾಡಿ ಕೇಂದ್ರ ಸರಕಾರದ ಕೋಮುವಾದಿ ನೀತಿಯನ್ನು ಬಲವಾಗಿ ಖಂಡಿಸಿದರು. ಶಶಿಕಲಾ ಭಟ್, ಲಲಿತಾ ಹೆಗಡೆ ಮುಂತಾಧವರು ನೇತೃತ್ವ ವಹಿಸಿದ್ದರು. 200 ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು.

ಹೊನ್ನಾವರ: ರಸ್ತಾ ರೋಕೊ 1.200 ಜನರ ಬಂಧನ: ನಗರದ ಭಟ್ಕಲ್ ಸರ್ಕಲ್‌ನಲ್ಲಿ ಎನ್.ಹೆಚ್. ನಂ. 17 ರಸ್ತಾ ರೋಕೊ ನಡೆಸಿದ್ದ ಸಿ.ಐ.ಟಿ.ಯು., ಹಂಚುಕಾರ್ಮಿಕರು, ಡಿ.ವೈ.ಎಫ್.ಐ., ಎಸ್.ಎಫ್.ಐ., ಅಂಗನವಾಡಿ ನೌಕರರನ್ನು ಪೋಲೀಸರು ಬಂಧಿಸಿ ಬಿಡುಗಡೆಗೊಳಿಸಿದರು. ಕಾಲೇಜು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಸಿ.ಐ.ಟಿ.ಯು ಮುಖಂಡರಾದ ತಿಲಕ ಗೌಡ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮದ ನೇತೃತ್ವವನ್ನು ಕಮಲಾ ಗೌಡ, ಕಮಲಾ ಜಾದವ, ಎಸ್.ಎಫ್.ಐ. ಅಧ್ಯಕ್ಷರಾದ ಮಾಲಿನಿ ಮೇಸ್ತ, ಡಿ.ವೈ.ಎಫ್.ಐ.ನ ರಾಮ ಗೌಡ, ಉಲ್ಲಾಸ ನಾಯ್ಕ, ಹಂಚು ಕಾರ್ಮಿಕರ ಮುಖಂಡರಾದ ರಾ[illegible] ಶಿವು ಗೌಡ, ಪುರುಪೋತ್ತಮ ಮೇಸ್ತ, ಸುರೇ[illegible] ನಾಯ್ಕ ಮುಂತಾದವರು ಪಾಲ್ಗೊಂಡಿದ್ದರು.

ಮುರ್ಡೇಶ್ವರದಲ್ಲಿ ರೈಲು ತಡೆ- ಬಂಧನ[illegible] ಸುಮಾರು 900 ಜನರು ಕೊಂಕಣ ರೈಲು ತಡೆದರು[illegible] ಸುಭಾಶ ಕೊಪ್ಪಿಕರ, ನಾಗರತ್ನ ಪಡಿಯ[illegible] ಮನ್ವೇಲ್ ಡಿಕೋನಾ ಚಂದ್ರ ನಾಯ[illegible] ಮುಂತಾದವರು ನೇತೃತ್ವ ವಹಿಸಿದ್ದರು. ಭಟ್ಕಳದ[illegible] ಅಂಗನವಾಡಿ ನೌಕರರು ಮೆರವಣಿಗೆ ನಡೆಸಿ ಮನ[illegible] ಅರ್ಪಿಸಿದರು. ಗೀತಾ ನಾಯ್ಕ, ಶಕುಂತಲ[illegible] ಮುಂತಾದವರು ನೇತೃತ್ವ ವಹಿಸಿದ್ದರು.

ದಾಂಡೇಲಿ: ಹರತಾಳ ಆಚರಿಸಲಾಯಿತು. ಪೇಪ[illegible] ಮಿಲ್‌ನ ಬಹುತೇಕ ಕೆಲಸಗಳು ಸ್ಥಗಿತಗೊಂಡಿದ್ದವ[illegible] 1000ಕ್ಕೂ ಹೆಚ್ಚು ಕಾರ್ಮಿಕರು ಮೆರವಣಿಗೆ ನಡೆ[illegible] ಬಹಿರಂಗ ಸಭೆ ನಡೆಸಲಾಯಿತು. ಸಭೆಯನ[illegible] ಉದ್ದೇಶಿಸಿ ಸಿ.ಐ.ಟಿ.ಯು ಮುಂಖಂಡರಾದ ಟ[illegible] ಎಸ್. ನಾಯ್ಕ ಎಸ್.ವಿ. ಸಾವಂತ, ಎಮ್[illegible] ಪಿ.ನಾಯ್ಕ ಮುಂತಾದವರು ಮಾತನಾಡಿದರು[illegible] ಎಲ್.ಐ.ಸಿ. ಮತ್ತು ಬ್ಯಾಂಕ್ ನೌಕರರು ಮೆರವಣಿ[illegible] ನಡೆಸಿ ಸಭೆ ನಡೆಸಿದರು.

ಶಿರಸಿಯಲ್ಲಿ ಬಸ್ ತಡೆ: ಎಸ್.ಎಫ್.ಐ[illegible] ವಿದ್ಯಾರ್ಥಿಗಳು ಬಸ್ ನಿಲ್ದಾಣದ[illegible] ಹೊರವಲಯದಲ್ಲಿ ಬಸ್‌ತಡೆ ನಡೆಸಿದರು[illegible] ಎಸ್.ಎಫ್.ಐ. ಜಿಲ್ಲಾ ಕಾರ್ಯದರ್ಶಿ[illegible] ಯುವರಾಜ್ ಕಂಬಾಳಿ ಮಠ, ಬಾಲಚಂದ್ರ ಗೌಡ[illegible] ಈರೇಶ ಮುಂತಾದವರು ನೇತೃತ್ವ ವಹಿಸಿದ್ದರು[illegible] ಶಾಲಾ, ಕಾಲೇಜು ಬಂದ್ ಆಗಿದ್ದವು. ವಿಮಾ[illegible] ಬ್ಯಾಂಕ್ ಅಂಗನವಾಡಿ ನೌಕರರು ಸುಮಾರು 40[illegible] ಜನ ನಗರದಲ್ಲಿ ಮೆರವಣಿಗೆ ನಡೆಸಿ ಬಹಿರಂಗ ಸ[illegible] ನಡೆಸಿದರು. ಸಿ.ಆರ್. ಶಾನಭಾಗ, ಜಿ.ವಿ.ವೈ[illegible] ಎನ್.ವಿ.ಭಟ್ ಪದ್ಮಾ ಭಟ್, ವಿಮಲಾ ಹೆಗ[illegible] ಮುಂತಾದವರು ನೇತೃತ್ವ ವಹಿಸಿದ್ದರು.

ಸಿದ್ದಾಪುರ: ಅಂಗನವಾಡಿ ಕಾರ್ಯಕರ್ತೆಯರ[illegible] ಸುಮಾರು 175 ಜನ ನಗರದಲ್ಲಿ ಮೆರವಣಿಗೆ ನಡೆ[illegible] ತಹಸೀಲ್ದಾರರಿಗೆ ಮನವಿ ಅರ್ಪಿಸಿದರು. ಸವಿತ[illegible] ತನ್ನಡಗಿ, ಜಯಾ ಪ್ರಭು ಮುಂತಾದವ[illegible] ನೇತೃತ್ವವಹಿಸಿದ್ದರು. ಸಾವಿರಕ್ಕೂ ಹೆಚ[illegible] ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದರು ನಗರದ[illegible] ಎಲ್ಲಾ ಶಾಲಾ ಕಾಲೇಜು ಬಂದಾಗಿದ್ದವು.

ಜೋಯಿಡಾ, ಯಲ್ಲಾಪುರ, ಮುಂಡಗೋಡ[illegible] ನಿಂದಲೂ ಸಹ ಮುಷ್ಕರ ನಡೆಸಿದ ಬಗ್ಗೆ ವರದಿ[illegible] ಬಂದಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಹರತಾಳ-ಮುಷ್ಕರ-ಬಂದ್ ಶೇ. 90 ರಷ್ಟು ಯಶಸ್ವಿ

ಬಳ್ಳಾರಿ ಜಿಲ್ಲಾ ಸಾಮೂಹಿಕ ಸಂಘಟನೆಗಳ ವೇದಿಕೆ ಕರೆ ನೀಡಿದ ಮುಷ್ಕರ-ಹರತಾಳ-ಬಂದ್‌ಗೆ ಜಿಲ್ಲೆಯ ಜನತೆ ಶೇ. 90 ರಷ್ಟು ಸ್ಪಂದಿಸಿ ಯಶಸ್ವಿಗೊಳಿಸಿದ್ದಾರೆ.

ಒಂದು ವಾರದಿಂದಲೇ ಮುಷ್ಕರ, ಹರತಾಳ, ಬಂದ್ ಯಶಸ್ವಿಗೊಳಿಸಲು ಎನ್.ಪಿ.ಎಂ.ಓ. ಉಸ್ತುವಾರಿ ಸಮಿತಿ ವಿಶೇಷ ತಯಾರಿಯನ್ನು ನಡೆಸಿತು. ಬೇರೆ ಬೇರೆ ಸಾಮೂಹಿಕ ಸಂಘಟನೆಗಳು ಪ್ರತ್ಯೇಕ ಪ್ರತ್ಯೇಕವಾಗಿ ಸಭೆ ಸೇರಿ ತಯಾರಿಯನ್ನು ತೀವ್ರ ಗೊಳಿಸಿದವು. ಡಿಸೆಂಬರ್-1 ರಿಂದಲೇ ಮುಷ್ಕರ ಹರತಾಳ ಯಶಸ್ವಿಗೊಳಿಸಲು ಕೋರಿ ಪತ್ರಿಕೆಗಳಿಗೆ ಹೇಳಿಕೆ ನೀಡಿದ್ದವು. ಬಳ್ಳಾರಿ ಹಗರಿಬೊಮ್ಮನಹಳ್ಳಿ ಮುಂತಾದೆಡೆ ಮುಷ್ಕರದ ಹಿಂದಿನ ದಿನ ಪಂಜಿನ ಮೆರವಣಿಗೆಯನ್ನು ಸಂಘಟಿಸಿದವು. 2-3 ದಿನಗಳಿಂದ ಜಿಲ್ಲೆಯಾದ್ಯಂತ ಆಟೋದಲ್ಲಿ ಮೈಕ್‌ಕಟ್ಟಿ ಸಾರ್ವತ್ರಿಕ ಮುಷ್ಕರ ಯಶಸ್ವಿಗೊಳಿಸಲು ಕರೆನೀಡಿದವು. ಶಿರುಗುಪ್ಪಾ ತಾಲೂಕಾ ಸಮಿತಿಯು ಜೀಪ್ ಜಾಥಾವನ್ನು ನಡೆಸಿ 22 ಹಳ್ಳಿಗಳಲ್ಲಿ ಬೀದಿ ಬದಿಯ ಸಭೆಯನ್ನು ನಡೆಸಿತು. ಬಳ್ಳಾರಿಯಲ್ಲಿ, ಹಂಬೊ ಹಳ್ಳಿಯಲ್ಲಿ ಹೊಸಪೇಟೆಯಲ್ಲಿ ಅಂಗನವಾಡಿ ನೌಕರರ ಸಂಘದಿಂದ ಮತ್ತು ಕರ್ನಾಟಕ ಪ್ರಾಂತ ರೈತ ಸಂಘದಿಂದ ಪ್ರತ್ಯೇಕ ಕರಪತ್ರ ಹಂಚಲಾಯಿತು.

ಬಳ್ಳಾರಿಯಲ್ಲಿ ಸಿ.ಐ.ಟಿ.ಯು, ಎ.ಐ.ಟಿ.ಯು.ಸಿ., ಯು.ಟಿ.ಯು.ಸಿ. (ಎಲ್.ಎಸ್) ಬಿ.ಇ.ಎಫ್.ಐ, ಎ.ಐ.ಬಿ.ಇ.ಎ. ಎಫ್.ಎಂ.ಆರ್.ಎ., ಮುನ್ಸಿಪಲ್ ನೌಕರರ ಸಂಘ, ಮೆಡಿಕಲ್ ಕಾಲೇಜ್ ಹಾಸ್ಟೆಲ್ ಕಾರ್ಮಿಕರ ಸಂಘ, ಅಂಗನವಾಡಿ ನೌಕರರ ಸಂಘ (ಎ.ಐ.ಟಿ.ಯು.ಸಿ.) ಎ.ಐ.ಡಿ.ಎಸ್.ಓ, ಎ.ಐ.ಡಿ.ವೈ.ಓ, ಮುಂತಾದ ಸಂಘಗಳಿಗೆ ಸೇರಿದ 1200 ಕ್ಕೂ ಹೆಚ್ಚು ಜನ ಬೆಳಿಗ್ಗೆ 11 ರಿಂದ ನಗರದಲ್ಲಿ[illegible] ಆಕರ್ಷಕ ಪ್ರತಿಭಟನಾ ಮೆರವಣಿಗೆ ನಡೆಸಿ ಮೋತಿ[illegible] ಸರ್ಕಲ್‌ನಲ್ಲಿ ಬಹಿರಂಗ ಸಭೆ ನಡೆಸಿದರು[illegible] ಬೆಳಿಗ್ಗಿನಿಂದಲೇ ಅಂಗಡಿಗಳನ್ನು ತೆರೆಯದೆ[illegible] ಮಧ್ಯಾಹ್ನದವರೆಗೆ ಸ್ವಯಂ ಸ್ಫೂರ್ತಿಯಿಂದ ಬಂದ್[illegible] ಮಾಡಿ ವ್ಯಾಪಾರಗಾರರು ನೆರವಾದರು.

ಶಿರುಗುಪ್ಪದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ[illegible] ಸಿ.ಐ.ಟಿ.ಯು, ಅಂಗನವಾಡಿ ನೌಕರರ ಸಂಘ[illegible] ಡಿ.ವೈ.ಎಫ್.ಐ., ಎಸ್.ಎಫ್.ಐ.ಗೆ ಸೇರಿದ 100[illegible] ದಷ್ಟು ಜನರು ಬೃಹತ್ ಪ್ರತಿಭಟನಾ ಮೆರವಣಿ[illegible] ನಡೆಸಿ ನಗರದ ಕೇಂದ್ರವೃತ್ತದಲ್ಲಿ ರಸ್ತೆ ತಡ[illegible] ನಡೆಸಿದರು.

ಶಿರುಗುಪ್ಪದ ವರ್ತಕರು ಶಾಂತರೀತಿಯ[illegible] ಮೆರವಣಿಗೆಯನ್ನು ಅತ್ಯಂತ ಕುತೂಹಲದಿಂದ[illegible] ವೀಕ್ಷಿಸಿದರಲ್ಲದೇ ಸಂಜೆ 4 ಗಂಟೆಯ ವರೆ[illegible] ಮಳಿಗೆಗಳನ್ನು ತೆರೆಯದೇ ಬಂದ್ ಬೆಂಬಲಿಸಿದರು[illegible]

ಹೊಸಪೇಟೆಯಲ್ಲಿ ಸಾಮೂಹಿಕ ಸಂಘಟನೆಗ[illegible] ವೇದಿಕೆಯ ಕರೆಯ ಮೇರೆಗೆ ಎಸ್.ಎಫ್.ಐ.[illegible] ಡಿ.ವೈ.ಎಫ್.ಐ., ಜೆ.ಎಂ.ಎಸ್., ಅಂಗನವಾ[illegible] ನೌಕರರ ಸಂಘ, ಸಿ.ಐ.ಟಿ.ಯು, ಎ.ಐ.ಟಿ.ಯು[illegible] ಸಂಘಗಳು ಸುಮಾರು 800 ಜನರಿಂದ ಪ್ರತಿಭಟನ[illegible] ಪ್ರದರ್ಶ ನಡೆಸಿ ಹರತಾಳ ಯಶಸ್ವಿ ಗೊಳಿಸಿದರು[illegible] ಬಂದ್ ನಡೆಯಿತು. ಮಧ್ಯಾಹ್ನದವರೆಗೆ ಬಸ[illegible] ಓಡಿಸಲಿಲ್ಲ.

ಹಗರಿಬೊಮ್ಮನಹಳ್ಳಿಯಲ್ಲಿ 400ಕ್ಕೂ ಹೆಚ್ಚು ಜ[illegible] ಅಂಗನವಾಡಿ ನೌಕರರ ಸಂಘ, ಸಿ.ಐ.ಟಿ.ಯು[illegible] ಎಸ್.ಎಫ್.ಐ., ಡಿ.ವೈ.ಎಫ್.ಐ. ಮತ್ತು ಪ್ರಾಂ[illegible] ರೈತ ಸಂಘಕ್ಕೆ ಸೇರಿದವರು ಬೃಹತ್ ಪ್ರತಿಭಟನ[illegible] ಮೆರವಣಿಗೆಗೆ, ಬಂದ್ ನಡೆಸಿದರು.

ಸಂಡೂರು ತಾಲೂಕಿನ ತಾರಾನಗರದಲ್ಲಿ 20[illegible]

ಪುಟ 7ನ್ನೂ ನೋಡಿ

ಧಾರವಾಡ ಗದಗ ಹಾವೇರಿಗಳಲ್ಲಿ......

ಧಾರವಾಡ: ಎ.ಐ.ಐ.ಇ.ಎ. ನೇತೃತ್ವದ ಜೀವ ವಿಮೆಯ ಮತ್ತು ಸಾಮಾನ್ಯ ವಿಮೆಯ ನೌಕರರು ಡಿ.11 ರಂದು ಮುಂಜಾನೆ ಜೀವ ವಿಮಾ ನಿಗಮದ ವಿಭಾಗೀಯ ಕಚೇರಿಯ ಮುಂದೆ ಮತ ಪ್ರದರ್ಶನ ನಡೆಸಿದರು. ನಂತರ ಮೆರವಣಿಗೆಯಲ್ಲಿ ಜ್ಯುಬಿಲಿ ಸರ್ಕಲ್‌ವರೆಗೆ ಬೆಲೆ ಏರಿಕೆ, ಖಾಸಗೀಕರಣ, ಜಾಗತೀಕರಣ, ಕೋಮುವಾದದ ವಿರುದ್ಧ ಘೋಷಣೆ ಹಾಕುತ್ತ ಹೋದರು. ಎ.ಐ.ಬಿ.ಇ.ಎ.ಗೆ ಸೇರಿದ ಮುಷ್ಕರ ನಿರತ ಬ್ಯಾಂಕ್ ನೌಕರರು, ಕೆನರಾ ಬ್ಯಾಂಕಿನ ಪ್ರಧಾನ ಕಾರ್ಯಾಲಯದ ಮುಂದೆ ಮತ ಪ್ರದರ್ಶನ ನಡೆಸಿ ವಿಮಾ ನೌಕರರನ್ನು ಜ್ಯುಬಿಲಿ ಸರ್ಕಲ್‌ನಲ್ಲಿ ಕೂಡಿಕೊಂಡರು. ನಂತರ ಜೊತೆಯಾಗಿ ನೌಕರರು ನಗರದ ಪ್ರಮುಖ ಬೀದಿಗಳಲ್ಲಿ ಒಂದು ಗಂಟೆಯ ಕಾಲ ಆಕರ್ಷಕ ಮೆರವಣಿಗೆ ನಡೆಸಿದರು. ಕೊನೆಯಲ್ಲಿ ಮೆರವಣಿಗೆಗಾರರು ಕಡಪಾ ಮೈದಾನದಲ್ಲಿ ಒಗ್ಗೂಡಿದರು. ಅಷ್ಟರಲ್ಲಿ ವಿದ್ಯಾರ್ಥಿ ಜನತಾದಳ, ಎಸ್.ಎಫ್.ಐ. ಮತ್ತು ಎ.ಐ.ಎಸ್.ಎಫ್. ನೇತೃತ್ವದಲ್ಲಿ ವಿದ್ಯಾರ್ಥಿಗಳು ನಗರದ ಎಲ್ಲಾ ಕಾಲೇಜುಗಳಲ್ಲಿ ತರಗತಿಗಳನ್ನು ಬಹಿಷ್ಕರಿಸಿ ಕಡಪಾ ಮೈದಾನದ ಸಭೆಗೆ ಬಂದು ಕೂಡಿಕೊಂಡರು. ಜೀವ ವಿಮಾ ನೌಕರರ ಸಂಘದ ಆರ್.ಎಚ್.ಅಯಿ, ಬಿ.ಎನ್. ಪೂಜಾರಿ, ಸಾಮಾನ್ಯ ವಿಮಾ ನೌಕರರ ಸಂಘದ ಅಪ್ಪಣ್ಣನವರ, ಎ.ಐ.ಟಿ.ಯು.ಸಿ. ನಿಂದ ಡಾ|| ಸಿದ್ದನಗೌಡ ಪಾಟೀಲ, ಬ್ಯಾಂಕ್ ನೌಕರರ ಎ.ಐ.ಬಿ.ಇ.ಎ. ನಿಂದ ಕರಗುದ್ರಿ, ಎಸ್.ಎಫ್.ಐ. ನಿಂದ ವಿಶಾಲ ಮಾಳ್ವದೆ ಮತ್ತು ಎ.ಐ.ಎಸ್.ಎಫ್. ನಿಂದ ದೊಡ್ಡಮನೆ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಜೀವವಿಮೆಯಿಂದ ಮಹಿಳಾ ನೌಕರರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು ಮತ್ತು ನಿಗಮದ ಅಭಿವೃದ್ಧಿ ಅಧಿಕಾರಿಗಳು ಆ ದಿನ ಒಂದು ದಿನದ ಧರಣಿ ಮುಷ್ಕರ ನಡೆಸಿದರು.

ಹುಬ್ಬಳಿ: ಮುಷ್ಕರ ನಿರತ ಎಲ್.ಐ.ಸಿ. ಮತ್ತು ಬ್ಯಾಂಕ್ ನೌಕರರು ಪ್ರತಿಭಟನಾ ಮತ ಪ್ರದರ್ಶನದ ನಂತರ ಅಲ್ಲಿಯೇ ಡಬಲ್ ರೋಡ ಬಂದ್ ನಡೆಸಿದರು. ಸಿಐಟಿಯುವಿಗೆ ಸೇರಿದ ಮೈಸೂರು ಕಿರ್ಲೋಸ್ಕರ ಮತ್ತು ಅದರ್ನ ಫೆರೋ ನೌಕರರು ಈ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಸಿ.ಐ.ಟಿ.ಯು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಿ.ಜೆ. ಗೋಂದಕರ, ಎ.ಬಿ.ಬಿ.ಇ.ಎ. ಮುಖಂಡರಾದ ಆನಂದ ಹೆಗಡೆ, ಟೆಲಿಕಾಂ ನೌಕರರ ಅಧ್ಯಕ್ಷರಾದ ಎಂ. ಸದಾನಂದ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ಎಸ್.ಎಫ್.ಐ. ಗೆ ಸೇರಿದ ವಿದ್ಯಾರ್ಥಿಗಳು ವಿದ್ಯಾನಗರದ ಹತ್ತಾರು ಕಾಲೇಜುಗಳಲ್ಲಿ ತರಗತಿಗಳನ್ನು ಬಹಿಷ್ಕರಿಸಿ ಪ್ರತಿಭಟನೆ ನಡೆಸಿ ನೂರಾರು ಸಂಖ್ಯೆಯಲ್ಲಿ ಮೆರವಣಿಗೆಯಿಂದ ಚೆನ್ನಮ್ಮ ವೃತ್ತಕ್ಕೆ ಬಂದು ಮಾನವ ಸರಪಣಿ ನಡೆಸಿ ರಸ್ತೆ ತಡೆ ಹಾಕಿದರು. ನಗರದ ಜನಜೀವನ ಅಸ್ತವ್ಯಸ್ತವಾಗಿತ್ತು.

ಕಲಘಟಗಿ: ಧಾರವಾಡ ಜಿಲ್ಲಾ ಸಿಐಟಿಯು ಅಧ್ಯಕ್ಷರಾದ ಎಂ.ಬಿ.ಕಟ್ಟಿ ಅವರ ನೇತೃತ್ವದಲ್ಲಿ ಕೃಷಿ ಕೂಲಿಕಾರರು ಮತ್ತು ಕೈಗಾರಿಕಾ ಕಾರ್ಮಿಕರು ಪ್ರತಿಭಟನಾ ಮತ ಪ್ರದರ್ಶನ ನಡೆಸಿದರು.

ಹಾವೇರಿ:- ಎಲ್.ಐ.ಸಿ., ಬ್ಯಾಂಕ್, ಕೆ.ಇ.ಬಿ. ನೌಕರರು ಮತ್ತು ಗೌರಾಪೂರದ ಕೃಷಿಕೂಲಿಕಾರರು ಮುಂಜಾನೆ ಬಸ್‌ಸ್ಟಾಂಡಿನ ಬಳಿ ಸೇರಿ ಪ್ರತಿಭಟನಾ ಮತಪ್ರದರ್ಶನ ಮತ್ತು ಸ್ವಲ್ಪಕಾಲ ರಸ್ತೆ ತಡೆ ನಡೆಸಿದರು. ವಿಮಾ ನೌಕರರ ಸಂಘದ ಟಿ.ವಿ. ಕಬಾಡಿ, ಕೆ.ಇ.ಬಿ. ನೌಕರರ ಸಂಘದ ಸತೀಶ ಕುಲಕರ್ಣಿ, ಕೃಷಿ ಕೂಲಿಕಾರರ ಸಂಘದ ವಿ.ಡಿ. ತುಪ್ಪದ ಮತ್ತು ಪಿ.ಸಿ. ಜಾಬಿನ್, ಬ್ಯಾಂಕ್ ನೌಕರರ ಸಂಘದ ಮುಖಂಡರು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು.

ರಾಣಿಬೆನ್ನೂರು:- ಎಲ್.ಐ.ಸಿ. ಮತ್ತು ಬ್ಯಾಂಕ್ ನೌಕರರು ನೇಕಾರರು ಜೊತೆಗೂಡಿ ಸಿದ್ದೇಶ್ವರ ಗುಡಿಯಿಂದ ನಗರದ ಮುಖ್ಯ ಬೀದಿಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆದ ಪೋಸ್ಟ್ ಸರ್ಕಲ್‌ನಲ್ಲಿ ಸಭೆ ಸೇರಿದರು. ವಿಮಾ ನೌಕರರ ಸಂಘದ ಸೋಮಶೇಖರ ಜಾಡರ, ನೇಕಾರರ ಸಂಘದ ಫಕೀರಪ್ಪ ಆರ್. ವಿಭೂತಿ, ಬ್ಯಾಂಕ್ ನೌಕರರ ಮುಖಂಡರು ಮುಷ್ಕರ ನಿರತರನ್ನು ಉದ್ದೇಶಿಸಿ ಮಾತನಾಡಿದರು.

ಗಜೇಂದ್ರ ಗಡ:- ಮುಂಜಾನೆ ಎಸ್.ಎಫ್.ಐ. ಗೆ ಸೇರಿದ 1000 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ಡಿ.ವೈ.ಎಫ್.ಐ. ಕಾರ್ಯಕರ್ತರು ನೇಕಾರರು ಪ್ರೊ.ನಂಜುಡಸ್ವಾಮಿ ನೇತೃತ್ವದ ರೈತ ಸಂಘದವರು, ನಿರಂತರ ವೇದಿಕೆಯವರು, ವಿವಿಧ ಯುವಕ ಮಂಡಳದವರು ಬಿ.ಎಸ್.ಪಿ. ಹಾಗೂ ಲೋಕಶಕ್ತಿ ಪಕ್ಷಗಳ ಕಾರ್ಯಕರ್ತರು ಪುರಸಭಾ ಆವರಣದಲ್ಲಿ ಒಂದುಗೂಡಿದರು. ಮುಂದೆ ನಗರದ ಬೀದಿಗಳಲ್ಲಿ ಆಕರ್ಷಕ ಮೆರವಣಿಗೆ ನಡೆಸಿದರು. ಸಾವಿರಾರು ಕರಪತ್ರಗಳನ್ನು ಹಂಚಲಾಯಿತು. ಹೋರಾಟದ ಹಾಡುಗಳನ್ನು ಹಾಡಲಾಯಿತು. ಪ್ರತಿಭಟನಾ ಘೋಷಣೆಗಳನ್ನು ಹಾಕಲಾಯಿತು. ಮೆರವಣಿಗೆಯ ದಾರಿ ಉದ್ದಕ್ಕೂ ಎಲ್ಲಾ ಅಂಗಡಿಗಳು ಮುಚ್ಚಿದ್ದವು. ಅಟೋರಿಕ್ಷಾಗಳು, ಸರಕಾರಿ ಹಾಗೂ ಖಾಸಗಿ ಬಸ್ಸುಗಳು, ಸಾರಿಗೆ ವಾಹನಗಳು ತಮ್ಮ ಸಂಚಾರವನ್ನು ಸಂಪೂರ್ಣ ಸ್ಥಗಿತಗೊಳಿಸಿದ್ದವು. ಮೆರವಣಿಗೆಗಾರರು ಕಾಲಕಾಲೇಶ್ವರ ವೃತ್ತದಲ್ಲಿ ಬೃಹತ್ ಪ್ರಮಾಣದ ಮೆರವಣಿಗೆ ಏರ್ಪಡಿಸಿ ರಸ್ತೆ ತಡೆ ಮಾಡಿದರು. ಬಿಗಿ ಪೋಲೀಸ್ ಬಂದೋಬಸ್ತ ಇತ್ತು. ನಗರದಲ್ಲಿ ಎಲ್ಲಾ ಶಾಲೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿದ್ದರು. ಸುಮಾರು ನಾಲ್ಕು ಗಂಟೆಗಳ ಕಾಲ ನಡೆದ ಮೆರವಣಿಗೆ ಮಾನವ ಸರಪಣಿ, ರಸ್ತೆ ತಡೆ, ಸಾರ್ವಜನಿಕ ಭಾಷಣ ಇತ್ಯಾದಿ ಕಾರ್ಯಕ್ರಮಗಳಲ್ಲಿ ಧಾರವಾಡ ಜಿಲ್ಲಾ ಸಿಐಟಿಯು. ಸಂಘಟನಾ ಕಾರ್ಯದರ್ಶಿ ಸಿ.ಆರ್. ಭಟ್, ಡಿ.ವೈ.ಎಫ್.ಐ. ಮುಖಂಡರಾದ ರವೀಂದ್ರ ಹೊನವಾಡ ಮತ್ತು ಅಶೋಕ ಶೆಟ್ಟರ, ರೈತ ಸಂಘದ ಧುರೀಣರಾದ ಲೋಕಗೌಡ, ಎಸ್.ಎಫ್.ಐ. ಮುಖಂಡರಾದ ಎಚ್.ಎಸ್.ಸೋಮಪೂರ ಮುಂತಾದವರು ಪಾಲುಗೊಂಡರು.

ಗದಗ, ರೋಣ:- ಗದಗದಲ್ಲಿ ಜೀವವಿಮಾ ಹಾಗೂ ಬ್ಯಾಂಕ್ ನೌಕರರು ಯಶಸ್ವಿ ಮುಷ್ಕರ ನಡೆಸಿದರು. ರೋಣ ತಾಲೂಕಿನ ಬೆಳವಣಿಕೆಯಲ್ಲಿ ಡಿ.ವೈ.ಎಫ್.ನ ಧುರೀಣರಾದ ಅಬ್ದುಲ್ ರಜಾಕ ಮುಲ್ಲಾರ ಮುಖಂಡತ್ವದಲ್ಲಿ ಪ್ರತಿಭಟನೆ ಹಾಗೂ ಹರತಾಳ ನಡೆಸಲಾಯಿತು.


ಬಳ್ಳಾರಿಯಲ್ಲಿ ನಡೆದ ಸಾವಿರಾರು ಪ್ರದರ್ಶನಕಾರರ ರ್‍ಯಾಲಿ


ದೊಡ್ಡಬಳ್ಳಾಪುರದಲ್ಲಿ ನಡೆದ ಮೆರವಣಿಗೆಯ ಒಂದು ದೃಶ್ಯ




ಕೋಲಾರದ ಶ್ರೀನಿವಾಸಪುರದಲ್ಲಿ ನಡೆದ ಮೆರವಣಿಗೆ

ದಾವಣಗೆರೆ ಜಿಲ್ಲೆಯಲ್ಲಿ......

ಹರಿಹರ: ಮಧ್ಯಾಹ್ನ 3.00 ಗಂಟೆಯಿಂದ ಕುಮಾರ ಪಟ್ಟಣದ ಬಳಿ ಬೃಹತ್ ಹೆದ್ದಾರಿ ತಡೆ ಚಳುವಳಿ ನಡೆಯಿತು. ಹರಿಹರ ಪಾಲಿಫೈಬರ್ಸ್, ಗ್ರಾಸಿಂ, ಗ್ರಾಸಿಲಿನ್ ಡಿವಿಜನ್ ಮತ್ತು ಸಂಗಂ ಸಾಲ್ವೆಂಟ್ ಕಾರ್ಖಾನೆಯ ನೂರಾರು ಕಾರ್ಯಕರ್ತರು ಮತ ಪ್ರದರ್ಶನ ನಡೆಸಿದರು. ಸಾರ್ವತ್ರಿಕ ಕೈಗಾರಿಕಾ ಮುಷ್ಕರದ ಬಗ್ಗೆ ಜಿಲ್ಲಾ ಸಿ.ಐ.ಟಿ.ಯು ಪ್ರಧಾನ ಕಾರ್ಯದರ್ಶಿ ಎ.ಎಸ್. ಮೂರ್ತಿ ವಿವರಿಸಿದರು.

ಬೆಳಿಗ್ಗೆ 10.30 ಕ್ಕೆ ಹರಿಹರದಲ್ಲಿ ಮೈಸೂರು ಕಿರ್ಲೋಸ್ಕರ್ ಕಾರ್ಮಿಕರು, ಬ್ಯಾಂಕ್-ವಿಮೆ ಮತ್ತು ಬೀಡಿ ಕಾರ್ಮಿಕರು ಬೃಹತ್ ಮೆರವಣಿಗೆ ನಡೆಸಿ ಮೈಸೂರು ಬ್ಯಾಂಕ್ ಬಳಿ ರಸ್ತೆತಡೆ ಕಾರ್ಯಕ್ರಮ ಯಶಸ್ವಿಗೊಳಿಸಿದರು. ಸಭೆಯುನ್ನುದ್ದೇಶಿಸಿ ಕಿರ್ಲೋಸ್ಕರ್ ಎಂಪ್ಲಾಯಿಸ್ ಯೂನಿಯನ್ನಿನ ಪ್ರಧಾನ ಕಾರ್ಯದರ್ಶಿ ಸಿ.ಎಂ. ಜಯಾನಂದ್ ಮಾತನಾಡಿದರು. ಕಿರ್ಲೋಸ್ಕರ್ ಕಂಪನಿ, ಎಲ್ಲಾ ಬ್ಯಾಂಕುಗಳು ವಾಣಿಜ್ಯ ಸಂಸ್ಥೆಗಳು, ವಿಮಾ ಕಛೇರಿ ಕೆಲಸವನ್ನು ಪೂರ್ಣ ಸ್ಥಗಿತಗೊಳಿಸಿದ್ದವು.

ಸಿ.ಎಂ. ಜಯಾನಂದ್, ಪಿ.ವೈ. ಪಾಟೀಲ್, ಪಿ.ಜಿ. ಗೌಡರ್, ಚೌಡಪ್ಪ, ಹೆಚ್. ಕರಿನಿಂಗಪ್ಪ, ಹೆಚ್.ನಜೀರ್ ಖಾನ್, ಆರ್.ಸಿ. ಉನ್ನಿತ್ತನ್, ಬಾಬಾಜಾನ್, ಮೆಹಬೂಬ್‌ಖೀ, ಮಮ್ತಾಜ್.ಬಿ ಹರಿಹರದ ರ್‍ಯಾಲಿಯ ನೇತೃತ್ವವಹಿಸಿದ್ದರು. ವಿ.ವಿ. ಕಿಂಚಪ್ಪರೆಡ್ಡಿ, ಜೆ.ಎಂ. ಮಲ್ಲಿಕಾರ್ಜುನ್, ಸಿ.ಹನುಮಂತಪ್ಪ ನಿಂಗಪ್ಪ, ಕೆ.ಬಸವರಾಜಪ್ಪ, ಎಂ.ಎಂ. ಹುಲಮನಿ, ಶಿವರಾಮಪ್ಪ, ಸೈಯದ್ ಫಜುಲ್, ಹನುಮಂತಪ್ಪ ಆರೇರ, ಹೆಚ್. ಹನುಮಂತಪ್ಪ, ಕುಮಾರ ಪಟ್ಟಣಂನಲ್ಲಿ ಮುಂದಾಳತ್ವ ವಹಿಸಿದ್ದರು. ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ಕರೆಯನ್ನು ಯಶಸ್ವಿಗೊಳಿಸಿದುದಕ್ಕೆ ಎ.ಎಸ್. ಮೂರ್ತಿಯವರು ಕೊನೆಯಲ್ಲಿ ವಂದಿಸಿದರು.

ದಾವಣಗೆರೆ: ಎಸ್.ಎಫ್.ಐ., ನೇತೃತ್ವದಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ತಾಲ್ಲೂಕು ಕಛೇರಿ ಎದುರಿಗಿರುವ ಪ್ರಧಾನ ಅಂಚೆ ಕಛೇರಿ ಮುಂಭಾಗದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತ ಮತಪ್ರದರ್ಶನ ನಡೆಸಲಾಯಿತು.

ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಎಸ್.ಎಫ್.ಐ. ಜಿಲ್ಲಾ ಸಹ ಸಂಚಾಲಕರಾದ ಕಾಡಜ್ಜಿ ಪಿ. ಮಂಜುನಾಥ್ ಹಾಗೂ ಡಿ.ವೈ.ಎಫ್.ಐ. ಜಿಲ್ಲಾ ಸಂಚಾಲಕರಾದ ಕೆ. ಮಹಾಂತೇಶ್ ಮಾತನಾಡಿದರು.

ಸಭೆಯನ್ನುದ್ದೇಶಿಸಿ ಎಸ್.ಎಫ್.ಐ. ಮುಖಂಡರಾದ ಇ.ಶ್ರೀನಿವಾಸ್, ಸರ್ಕಾರಿ ಪ್ರ.ದ. ಕಾಲೇಜಿನ ಕೆ.ಎಂ. ಪ್ರಕಾಶ್, ಮೋತಿ ವೀರಪ್ಪ, ಪ.ಪೂ ಕಾಲೇಜಿನ ರವಿಕುಮಾರ್, ಎಕ್ಸ್ ಮುನ್ಸಿಪಲ್ ಕಾಲೇಜಿನ ಸೈಯದ್ ಜುಲ್ಫಿಕರ್ ಅವರು ಮಾತನಾಡಿದರು.

ಪ್ರತಿಭಟನೆಯ ನೇತೃತ್ವವನ್ನು ಎಸ್.ಎಫ್.ಐ. ಜಿಲ್ಲಾ ಸಂಚಾಲಕರಾದ ಜೆ.ಲತಾ, ಮುಖಂಡರಾದ ಕೆ.ಎಂ. ಅಂಜನಪ್ಪ ಎಂ. ಪ್ರಶಾಂತ್, ಕೆ.ಎಂ. ಶಿವಕುಮಾರ್ ಹಾಗೂ ಡಿ.ವೈ.ಎಫ್.ಐ.ನ ಹೆಚ್ ಕೆ. ಮೂರ್ತಿ ಅವರು ವಹಿಸಿದ್ದರು.

ಬ್ಯಾಂಕ್, ವಿಮೆ, ಔಷಧಿ ಮಾರಾಟ ಕಾರ್ಮಿಕರು ಕೇಂದ್ರ ಸರ್ಕಾರದ ಜನ ವಿರೋಧಿ ನೀತಿಗಳ, ಕೋಮುವಾದದ ವಿರುದ್ಧ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

ಸ್ಥಳೀಯ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಆವರಣದಿಂದ ಹೊರಟ ನೌಕರರು ವಿಮಾ ಹಾಗೂ ಬ್ಯಾಂಕುಗಳ ಖಾಸಗೀಕರಣ, ಪೇಟೆಂಟ್ ಕಾಯ್ದೆಗೆ ತಿದ್ದುಪಡಿ, ಬಹುರಾಷ್ಟ್ರೀಯ ಕಂಪನಿಗಳಿಗೆ ದೇಶವನ್ನು ಹರಾಜು ಹಾಕುವುದು, ಬೆಲೆ ಏರಿಕೆ, ಕಾರ್ಮಿಕ ವಿರೋಧಿ ಕಾನೂನು ತಿದ್ದು ಪಡಿ, ಶಿಕ್ಷಣದ ವ್ಯಾಪಾರೀಕರಣ ಹಾಗೂ ಕೇಂದ್ರ ಸರ್ಕಾರದ ಜನವಿರೋಧಿ ಕಾರ್ಮಿಕ ವಿರೋಧಿ ನೀತಿಗಳನ್ನು ಖಂಡಿಸಿ ಘೋಷಣಾ ಫಲಕಗಳನ್ನು ಪ್ರದರ್ಶಿಸಿ ಘೋಷಣೆಗಳನ್ನು ಹಾಕಿದರು.

ಮೆರವಣಿಗೆಯ ಮುಕ್ತಾಯದಲ್ಲಿ ಔಷದಿ ಮಾರಾಟ ಪ್ರತಿನಿಧಿಗಳ ಸಂಘಟನೆಗಳ ಕಾರ್ಯದರ್ಶಿ ಮಂಜುನಾಥ್, ಸಾಮಾನ್ಯ ವಿಮಾ ನೌಕರರನ್ನು ಪ್ರತಿನಿಧಿಸಿ ಮಂಜುನಾಥ ಸ್ವಾಮಿ, ಜೀವ ವಿಮಾ ನೌಕರರ ಡಿ. ಯಾಕೂಬ್, ಬ್ಯಾಂಕ್ ನೌಕರರ ಹೆ.ಬಿ.ಡಿ. ಶರ್ಮಾ, ಭಾರತ ವಿದ್ಯಾರ್ಥಿ ಫೆಡರೇಷನ್ನಿನ ಜೆ. ಲತಾ ಇವರುಗಳು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಕೆ.ಎಲ್. ಭಟ್ ವಂದನಾರ್ಪಣೆ ಸಲ್ಲಿಸಿದರು. ಮೆರವಣಿಗೆ ಯಲ್ಲಿ 400 ಕ್ಕೂ ಹೆಚ್ಚು ನೌಕರರು ಭಾಗವಹಿಸಿ ದ್ದರು. ವಿಮಾ ಕಛೇರಿಗಳು, ಬಹುತೇಕ ಬ್ಯಾಂಕುಗಳು ವ್ಯವಹಾರವನ್ನು ಸ್ಥಗಿತಗೊಳಿಸಿದ್ದವು.

ಸ್ವತಂತ್ರ ಭಾರತದ ಅತಿದೊಡ್ಡ ಅತಿವಿಶಾಲ ಕಾರ್ಯಾಚರಣೆ: ಎಡಪಕ್ಷಗಳ ಅಭಿನಂದನೆ

ಡಿಸೆಂಬರ್ 11 ರಂದು ಸಿಪಿಐ(ಎಂ) ಕೇಂದ್ರ ಸಮಿತಿ ಕಛೇರಿಯಲ್ಲಿ ಸಭೆ ಸೇರಿದ ನಾಲ್ಕು ಎಡಪಕ್ಷಗಳ ಮುಖಂಡರಾದ ಹರ್ಕಿಶನ್ ಸಿಂಗ್ ಸುರ್ಜಿತ್, ಸೀತಾರಾಂ ಯೆಚೂರಿ(ಸಿಪಿಐ(ಎಂ)), ಎ.ಬಿ.ಬರ್ಧನ್ (ಸಿಪಿಐ), ದೇಬಬ್ರತ ಬಿಸ್ವಾಸ್ (ಫಾರ್ವರ್ಡ್‌ಬ್ಲಾಕ್) ಹಾಗೂ ಅಬನಿ ರಾವತ್(ಆರ್.ಎಸ್.ಪಿ) ಈ ಕೆಳಗಿನ ಹೇಳಿಕೆಯನ್ನು ನೀಡಿದ್ದಾರೆ.

ಸಿಪಿಐ(ಎಂ), ಸಿಪಿಐ, ಆರ್.ಎಸ್.ಪಿ ಹಾಗೂ ಫಾರ್ವರ್ಡ್ ಬ್ಲಾಕ್ ದೇಶವ್ಯಾಪಿಯಾಗಿ ಕೇಂದ್ರದ ಬಿಜೆಪಿ ನೇತೃತ್ವದ ಸರಕಾರ ಅನುಸರಿಸುತ್ತಿರುವ ವಿನಾಶಕಾರಿ ಆರ್ಥಿಕ ಧೋರಣೆಗಳ ವಿರುದ್ಧ ಪ್ರತಿಭಟಿಸಿ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಹಾಗೂ ಹರತಾಳದಲ್ಲಿ ಭಾಗವಹಿಸಿದ ಕೋಟಿ-ಕೋಟಿ ಜನಗಳಿಗೆ ನಮಿಸುತ್ತದೆ.

ಯಾವುದೇ ರೀತಿಯಲ್ಲಿ ನೋಡಿದರೂ ಈ ಸಾಮೂಹಿಕ ಕಾರ್ಯಾಚರಣೆ ಸ್ವತಂತ್ರ ಭಾರತದಲ್ಲಿ ನಡೆದ ಇಂತಹ ಕಾರ್ಯಾಚರಣೆಗಳಲ್ಲಿ ಅತ್ಯಂತ ವಿಶಾಲ ಹಾಗೂ ಅತ್ಯಂತ ದೊಡ್ಡ ಕಾರ್ಯಾಚರಣೆ. ತಮಿಳುನಾಡು, ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾ, ಅಸ್ಸಾಂ, ಬಿಹಾರ ಇತ್ಯಾದಿ ದೇಶದ ಹಲವು ಭಾಗಗಳಲ್ಲಿ ಕೈಗಾರಿಕಾ ಚಟುವಟಿಕೆ ಸ್ತಬ್ಧಗೊಂಡಿತು. ಸಾಮಾನ್ಯ ಚಟುವಟಿಕೆಗಳು ಅಸ್ತವ್ಯಸ್ತಗೊಂಡವು. ಇದರ ಪ್ರಭಾವ ಎಷ್ಟಿತ್ತೆಂದರೆ ದೇಶದ ಹಲವು ಭಾಗಗಳಲ್ಲಿ ರೈಲು, ವಿಮಾನಗಳು ಚಲಿಸಲಿಲ್ಲ. ದೇಶದ ಎಲ್ಲಾ ಪ್ರಮುಖ ಬಂದರುಗಳು, ಬ್ಯಾಂಕುಗಳು, ವಿಮೆ ಮತ್ತಿತರ ಹಣಕಾಸು ಸಂಸ್ಥೆಗಳು ಮುಚ್ಚಿದ್ದವು. ಸಾರ್ವಜನಿಕ ವಲಯದ ಕಾರ್ಮಿಕರು ಲಂಗುಲಗಾಮಿಲ್ಲದ ಖಾಸಗೀಕರಣದ ವಿರುದ್ಧ ದೊಡ್ಡ ಸಂಖ್ಯೆಯಲ್ಲಿ ಮುಷ್ಕರ ನಡೆಸಿದರು.

ಇನ್ನಷ್ಟು ನೋವನ್ನು, ತಮ್ಮ ಆಜೀವಿಕೆಯ ಸವೆತವನ್ನು ತಾಳಲಾಗದ ಗ್ರಾಮೀಣ ಭಾರತದ ಸೋದರ, ಸೋದರಿಯರು 'ರಾಸ್ತಾ ರೋಕೋ', 'ಕಛೇರಿ ಜಾಮ್' ಇತ್ಯಾದಿಗಳ ಮೂಲಕ ಕಾರ್ಮಿಕ ವರ್ಗದೊಂದಿಗೆ ಕೈಜೋಡ್ಡಿದ್ದರು.

ಹರ್‍ಯಾಣದಲ್ಲಿ ನಡೆದಂತೆ ಬಂಧನಗಳ ಮೂಲಕ ಹೆದರಿಸುವ, ದಮನ ಮಾಡುವ ಕ್ರಮಗಳನ್ನು ಕೈಗೊಂಡರೂ ಇಂತಹ ಒಂದು ಬೃಹತ್ ಕಾರ್ಯಾಚರಣೆ ನಡೆದಿರುವುದು ಬಿಜೆಪಿ ನೇತೃತ್ವದ ಸರಕಾರದ ವಿರುದ್ಧ ಜನಗಳ ವ್ಯಾಪಕ ಕೋಪ-ತಾಪಗಳನ್ನು ಬಿಂಬಿಸಿದೆ. ಒರಿಸ್ಸಾ, ಉತ್ತರ ಪ್ರದೇಶ, ಪಂಜಾಬ್, ಮಧ್ಯಪ್ರದೇಶ, ದಿಲ್ಲಿ, ಇತ್ಯಾದಿ ರಾಜ್ಯಗಳಿಂದ ಬಂಧನಗಳ, ಬೆದರಿಕೆ ಕ್ರಮಗಳ ವರದಿಗಳು ಬರುತ್ತಿವೆ.

ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯೊಂದಿಗೆ ಸಂಪೂರ್ಣ ಸೌಹಾರ್ದ ವ್ಯಕ್ತಪಡಿಸುತ್ತಾ ಎಡಪಕ್ಷಗಳು ನಮ್ಮ ದೇಶದ ಜನತೆ ಖಾಸಗೀಕರಣ ಮತ್ತು ಉದಾರೀಕರಣದ ಮೂಲಕ ತಮ್ಮ ಆರ್ಥಿಕ ಆಸ್ತಿಗಳ ಲೂಟಿಗೆ ಅನುಮತಿ ಕೊಡುವುದನ್ನು ಸಹಿಸುವುದಿಲ್ಲ ಎಂದು ಬಿಜೆಪಿ ನೇತೃತ್ವದ ಸರಕಾರವನ್ನು ಎಚ್ಚರಿಸುತ್ತವೆ. ಸರಕಾರ ರಾಷ್ಟ್ರದ ವಾಣಿಗೆ ಕಿವಿಗೊಡಬೇಕು, ವಿದೇಶಿ ಪಾಲುದಾರಿಕೆಯೂ ಸೇರಿದಂತೆ ವಿಮಾ ವಲಯವನ್ನು ಖಾಸಗೀಕರಿಸಲು ತರುವ ಮಸೂದೆಯನ್ನು ಹಿಂತೆಗೆದುಕೊಳ್ಳಬೇಕು, ಸಾರ್ವಜನಿಕ ವಲಯದ ಲಂಗುಲಗಾಮಿಲ್ಲದ ಖಾಸಗೀಕರಣ ಧೋರಣೆಯನ್ನು ಬದಲಿಸಬೇಕು ಹಾಗೂ ಭಾರತದ ಆರ್ಥಿಕ ಸಾರ್ವಭೌಮತೆಯನ್ನು ಗಂಭೀರ ಅಪಾಯಕ್ಕೆ ಸಿಲುಕಿಸುವ ಪೇಟೆಂಟ್ ತಿದ್ದುಪಡಿ ಮಸೂದೆಯನ್ನು ಪಾಸು ಮಾಡಿಕೊಳ್ಳುವ ತರಾತುರಿಯನ್ನು ಬಿಡಬೇಕು ಎಂದು ಎಡಪಕ್ಷಗಳು ಆಗ್ರಹಪಡಿಸಿವೆ.

ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು...

ಆರ್ಥಿಕ ಉದಾರೀಕರಣ ಮತ್ತು ಕೇಂದ್ರದ ಬಿಜೆಪಿ ಸರಕಾರದ ಕೋಮುವಾದೀಕರಣ ನೀತಿಯ ವಿರುದ್ಧ ಜನವಿರೋಧಿ ಆಡಳಿತಗಾರರಿಗೆ ಎಚ್ಚರಿಕೆಯ ಗಂಟೆಯಾಗಿದೆ.

ಕಾಂಗ್ರೆಸೇತರ ಪ್ರತಿಪಕ್ಷಗಳು ಬೆಂಬಲಿಸಿದ್ದ ಸಾಮೂಹಿಕ ಸಂಘಟನೆಗಳ ಕಾರ್ಯಚರಣೆಗೆ ಕಾಂಗ್ರೆಸ್ ಪಕ್ಷ ನೈತಿಕ ಬೆಂಬಲ ನೀಡಿದ್ದು ಒಂದು ವಿಶೇಷ ಅಂಶವಾದರೆ ಕೇಂದ್ರದ ಆಡಳಿತ ಮಿತ್ರ ಕೂಟ ಅಣ್ಣಾ ಡಿ.ಎಂ.ಕೆ. ಪಕ್ಷವೂ ತಮಿಳು ನಾಡಿನಲ್ಲಿ ಮುಷ್ಕರಕ್ಕೆ ಬೆಂಬಲ ನೀಡಿದ್ದು ಜನಸಾಮಾನ್ಯರು ಹಾಗೂ ದುಡಿಯುವ ಜನರಲ್ಲಿ ಮಡುಗಟ್ಟಿರುವ ಅತೃಪ್ತಿ ಅಸಹನೆಯ ದ್ಯೋತಕವಾಗಿದೆ.

ಈ ಐತಿಹಾಸಿಕ ಹೋರಾಟವನ್ನು ವಿಫಲಗೊಳಿಸಲು ಆಳುವ ವರ್ಗಗಳು ನಡೆಸಿದ ಪ್ರಯತ್ನಗಳು ಮಣ್ಣುಪಾಲಾಗಿ ದೇಶದೆಲ್ಲೆಡೆ ಅಪೂರ್ವ ಸ್ಪಂದನ ಕಂಡು ಬಂದಿದ್ದು ಕೆಲವು ರಾಜ್ಯಗಳಿಂದ ಸಿಕ್ಕಿರುವ ವರದಿಗಳನ್ನು ಇಲ್ಲಿ ನೀಡಲಾಗಿದೆ.

ಕೇರಳದಲ್ಲಿ ಬಂದ್ ಆದ ಮುಷ್ಕರ:

ಕೇರಳದಲ್ಲಿ ನ್ಯಾಯಾಂಗ ಮಧ್ಯ ಪ್ರವೇಶಿಸಿದ್ದರೂ ಮುಷ್ಕರ ಅಭೂತ ಪೂರ್ವವಾಗಿ ಯಶಸ್ಸು ಕಂಡಿದ್ದಲ್ಲದೆ ಮುಷ್ಕರವು ರಾಜ್ಯ ಬಂದ್ ಆಗಿ ಪರಿವರ್ತನೆ ಗೊಂಡಿತು.

ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ (NPMO) ನೀಡಿದ ಕರೆಯಿಂದಾಗಿ ಡಿ.11 ರಂದು ರಾಜ್ಯದಲ್ಲಿ ಕೈಗಾರಿಕಾ ಚಟುವಟಿಕೆ ಸ್ಥಗಿತಗೊಂಡಿತು. ಮಾತ್ರವಲ್ಲದೆ ಸಾರ್ವಜನಿಕ ಜೀವನ ಅಸ್ತವ್ಯಸ್ತಗೊಂಡಿತು. ವಾಹನ ಸಂಚಾರ ಇರಲಿಲ್ಲ. ಅಂಗಡಿ ಮುಂಗಟ್ಟುಗಳು ಮುಚ್ಚಿದ್ದವು. ಕೈಗಾರಿಕೆ ಘಟಕಗಳು ಮತ್ತು ಸರಕಾರಿ ಕಚೇರಿಗಳಲ್ಲಿ ಹಾಜರಿ ತೀರಾ ಕಡಿಮೆಯಿತ್ತು.

ರಾಜ್ಯದಾದ್ಯಂತ ರೈಲುಗಳ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಮುಷ್ಕರ ನಿರತರು ಮತ್ತು ಕಾರ್ಯಕರ್ತರು ರೈಲುತಡೆ ಚಳವಳಿ ನಡೆಸಿದರು.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳು ಓಡಾಡಲಿಲ್ಲ. ಖಾಸಗಿ ಬಸ್‌ಗಳು ಟ್ಯಾಕ್ಸಿಗಳು ಮತ್ತು ರಿಕ್ಷಾಗಳ ಸಂಚಾರವೂ ಇರಲಿಲ್ಲ. ರಾಜ್ಯದ ಯಾವ ಬಂದರುಗಳಲ್ಲೂ ಕೆಲಸ ಕಾರ್ಯ ನಡೆಯಲಿಲ್ಲ. ಬ್ಯಾಂಕ್‌ನೌಕರರು ಪೂರ್ಣವಾಗಿ ಮುಷ್ಕರದಲ್ಲಿ ಪಾಲ್ಗೊಂಡಿದ್ದರಿಂದ ಬ್ಯಾಂಕಿಂಗ್ ಚಟುವಟಿಕೆ ಸ್ಥಗಿತಗೊಂಡಿತ್ತು.

ರೈಲು ಹಳಿಗಳ ಮೇಲೆ ಪ್ರತಿಭಟನಾಕಾರರು ಧರಣಿ ನಡೆಸಿದ್ದರಿಂದ ರೈಲುಗಳ ಸಂಚಾರ ವಿಳಂಬಗೊಂಡಿತು.

ಮುಷ್ಕರದಲ್ಲಿ ಪಾಲ್ಗೊಂಡ ಕಾರ್ಮಿಕರು ಮತ್ತು ಎಡಕ್ಷಗಳ ಕಾರ್ಯಕರ್ತರು ರಾಜ್ಯದಾದ್ಯಾಂತ ಮತ ಪ್ರದರ್ಶನಗಳನ್ನು ನಡೆಸಿದರು.

ತಮಿಳುನಾಡಿನಲ್ಲಿ ಯಶಸ್ವಿ

ತಮಿಳುನಾಡಿನಲ್ಲಿಯೂ ಕೈಗಾರಿಕೆ ಚಟುವಟಿಕೆ ಪೂರ್ಣವಾಗಿ ಸ್ಥಗಿತಗೊಂಡಿತ್ತು. ರಾಜ್ಯದ ಆಳುವ ಡಿ.ಎಂ.ಕೆ. ಮತ್ತದರ ಮಿತ್ರ ಪಕ್ಷಗಳಲ್ಲದೆ ಬಿಜೆಪಿ ಕೂಟದ ಅಂಗಪಕ್ಷವಾದ ಅಣ್ಣಾ ಡಿ.ಎಂ.ಕೆ. ಕೂಡ ಬೆಂಬಲ ವ್ಯಕ್ತಪಡಿಸಿದ್ದವು.

ರೈಲು ಮತ್ತು ಬಸ್ ಸಂಚಾರ ಸ್ಥಗಿತವಾಗಿತ್ತು. ಶಿಕ್ಷಣ ಸಂಸ್ಥೆಗಳು ಮುಚ್ಚಿದ್ದವು. ರೈಲು ಸಂಚಾರ ಸಂಜೆ 6 ಗಂಟೆ ನಂತರವಷ್ಟೆ ಆರಂಭವಾಯಿತು. ಆಟೋಗಳು ಬೀದಿಗಿಳಿಯಲಿಲ್ಲ.

ಖಾಸಗಿ ರಂಗದ ಕೆಲವನ್ನು ಹೊರತು ಪಡಿಸಿದರೆ ರಾಜ್ಯದ ಕೈಗಾರಿಕಾ ಕಾರ್ಮಿಕರ ಪೈಕಿ ಶೇಕಡ 90 ರಷ್ಟು ಜನರು ಮುಷ್ಕರವನ್ನು ಬೆಂಬಲಿಸಿದ್ದರು. ಕೊಯಮತ್ತೂರು ಮತ್ತು ತಿರುಪುರ ಮೊದಲಾದ ಆರ್ಥಿಕ ಚಟುವಟಿಕೆ ಕೇಂದ್ರಗಳಲ್ಲಿ ದೈನಂದಿನ ಚಟುವಟಿಕೆ ಸ್ತಬ್ಧವಾಗಿತ್ತು. ಚೆನ್ನೈ ಮತ್ತು ತೂತುಕುಡಿ ಬಂದರುಗಳಲ್ಲಿ ಚಟುವಟಿಕೆ ಮೇಲೆ ಪರಿಣಾಮ ಬೀರಿತು. ರಾಜ್ಯದಾದ್ಯಂತ ಬ್ಯಾಂಕಿಂಗ್ ಚಟುವಟಿಕೆಗಳು ನಡೆಯಲಿಲ್ಲ.

ಆಂಧ್ರ ಪ್ರದೇಶ

ಕೇಂದ್ರದಲ್ಲಿ ಕೋಮುವಾದಿ ಪಕ್ಷದ ನೇತೃತ್ವದ ಸರಕಾರ ಅಧಿಕಾರಕ್ಕೆ ಬರಲು ಕಾರಣವಾದ ತೆಲುಗುದೇಶಂನ ಆಡಳಿತ ವಿರುವ ಆಂಧ್ರಪ್ರದೇಶದಲ್ಲಿ ಕೂಡ ಮುಷ್ಕರಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಹೈದರಾಬಾದ್ ಮತ್ತು ವಿಶಾಖಪಟ್ಟಣದ ಸುತ್ತಮುತ್ತ ಪ್ರಮುಖ ಕೈಗಾರಿಕೆ ಕೇಂದ್ರಗಳಲ್ಲಿ ಚಟುವಟಿಕೆ ಸ್ಥಗಿತಗೊಂಡಿತ್ತು. ಮುಷ್ಕರ ನಿರತರು ರಸ್ತೆ ತಡೆ ಚಳವಳಿ ನಡೆಸಿದರು ಹಾಗೂ ಧರಣಿ ನಡೆಸಿದರು.

ಹಿಂದೂಸ್ತಾನ್ ಕೇಬಲ್ಸ್, ಬಿ.ಇ.ಎಲ್., ಎಚ್.ಎಂ.ಟಿ., ಐ.ಡಿ.ಪಿ.ಎಲ್ ಮೊದಲಾದ ಸಾರ್ವಜನಿಕ ರಂಗದ ಕೈಗಾರಿಕೆಗಳಲ್ಲಿ ಮುಷ್ಕರ ಸಂಪೂರ್ಣವಾಗಿತ್ತು. ಇಸಿಐಎಲ್, ಎಚ್.ಎ.ಎಲ್. ಮತ್ತು ಎಚ್.ಎಂ.ಟಿ ಮೊದಲಾದ ಕಡೆಯೂ ಮುಷ್ಕರ ನಡೆಯಿತು.

ರಾಜ್ಯ ಸರಕಾರಿ ಕಾರ್ಯಾಲಯದ ಮುಂದಿರುವ ಎಲ್.ಐ.ಸಿ. ಕಚೇರಿ ಬಳಿ ನೌಕರರು ಧರಣಿ ನಡೆಸಿದರು. ಕೇಂದ್ರ ಸರಕಾರದ ಖಾಸಗೀಕರಣ ನೀತಿಯನ್ನು ಖಂಡಿಸುವ ವ್ಯಂಗ್ಯ ಚಿತ್ರ ಪ್ರದರ್ಶನವನ್ನು ಅಲ್ಲಿ ಏರ್ಪಡಿಸಲಾಗಿತ್ತು.

ಹರ್ಯಾಣ ಚಂಡೀಗಢ

ಹರ್ಯಾಣ ಮತ್ತು ಕೇಂದ್ರಾಡಳಿತ ಪ್ರದೇಶ ಚಂಡೀಗಢದಲ್ಲಿ ಮುಷ್ಕರಕ್ಕೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತೆಂದು ವರದಿಯಾಗಿದೆ. ಚಂಡೀಗಢದಲ್ಲಿ ಬಸ್ ಸಂಚಾರ ಸ್ಥಗಿತಗೊಂಡಿತ್ತು. ಬ್ಯಾಂಕ್‌ಗಳು ಮತ್ತು ಎಲ್.ಐ.ಸಿ., ಜಿ.ಐ.ಸಿ. ಕಚೇರಿಗಳಲ್ಲಿ ಹಾಜರಿ ತೀರಾ ಕಡಿಮೆಯಿತ್ತು. ಹಿಂದೂಸ್ತಾನ್ ಮೆಷಿನ್ ಟೂಲ್ಸ್ (HMT)ನಲ್ಲಿಯೂ ಮುಷ್ಕರ ಯಶಸ್ವಿಯಾಯಿತು.

ಹರ್ಯಾಣದಲ್ಲಿ ಬನ್ಸಿಲಾಲ್ ಸರಕಾರ ಮುಷ್ಕರವನ್ನು ಮುರಿಯಲು ದಬ್ಬಾಳಿಕೆ ಯಂತ್ರವನ್ನೇ ಹರಿಯ ಬಿಟ್ಟಿತ್ತು. ಹಿಸ್ಸಾರ್‌ನಲ್ಲಿ ಡಿಸೆಂಬರ್ 8 ರಂದು ನಡೆದ ಸರ್ವ ಕರ್ಮಚಾರಿ ಸಂಘದ ಬೃಹತ್ ರ್‍ಯಾಲಿ ಮೇಲೆ ದಾಳಿ ಮಾಡಿದ 150ಕ್ಕೂ ಹೆಚ್ಚು ಪೋಲೀಸರ ಪಡೆ 44 ಮುಖಂಡರನ್ನು ಬಂಧಿಸಿತು.

ಡಿ.11ರ ಮುಷ್ಕರವನ್ನು ಯಶಸ್ವಿಗೊಳಿಸಿದ್ದಕ್ಕೆ ಜನತೆಗೆ ಅಭಿನಂದನೆ ತಿಳಿಸುವ ಸಂದೇಶವೊಂದನ್ನು ಬಂಧಿತ ಮುಖಂಡರು ತಾವಿರುವ ಜಾಗದಿಂದ ಕಳಿಸಿದ್ದಾರೆ.

ಕೇಂದ್ರಾಡಳಿತ ಪ್ರದೇಶ ಚಂಡೀಗಢದಲ್ಲಿ ಎಸ್ಮಾ ವನ್ನು ಜಾರಿಗೊಳಿಸಿದ್ದರೂ ದುಡಿಯುವ ಜನರು ಅದನ್ನು ಕಡೆಗಣಿಸಿ ಹೋರಾಟದ ಸಾಗರಕ್ಕೆ ಧುಮುಕಿದ್ದರು.

ಬಿಹಾರ

ಸಾರ್ವತ್ರಿಕ ಮುಷ್ಕರಕ್ಕೆ ಬಿಹಾರದಾದ್ಯಂತ ಪ್ರೋತ್ಸಾಹಕಾರಿ ಸ್ಪಂದನ ದೊರೆಯಿತು. ಕೈಗಾರಿಕೆಗಳು, ರೈಲ್ವೆ, ಕಲ್ಲಿದ್ದಲುಗಣಿಗಳು, ವಾಣಿಜ್ಯ ಕೇಂದ್ರಗಳು, ಸರಕಾರಿ ಕಚೇರಿಗಳು, ಶಾಲೆ, ಕಾಲೇಜುಗಳ ಚಟುವಟಿಕೆಗಳು ಅಸ್ತವ್ಯಸ್ತಗೊಂಡವು ಎಂದು ಐ.ಎನ್.ಎಸ್. ವರದಿ ಮಾಡಿದೆ.

ದಕ್ಷಿಣ ಬಿಹಾರದ ಕೈಗಾರಿಕೆ ವಲಯದಲ್ಲಿ ಮುಷ್ಕರ ಸಂಪೂರ್ಣ ಯಶಸ್ವಿಯಾಯಿತು. ಖಾಸಗಿ ಮತ್ತು ಸರಕಾರಿ ರಂಗದ ಘಟಕಗಳಲ್ಲಿ ಹರತಾಳ ಬಹುತೇಕ ಪೂರ್ಣವಾಗಿತ್ತು.

ಗಣಿ ಉದ್ಯಮದಲ್ಲಿ ಮುಷ್ಕರ ಶೇ. 90 ರಷ್ಟು ಯಶಸ್ವಿಯಾಯಿತು. ಬೊಕಾರೊ ಉಕ್ಕು ಸ್ಥಾವರದಲ್ಲಿ ಶೇ. 90 ರಷ್ಟು ಮಾರುಕಟ್ಟೆಗಳು ಮುಚ್ಚಿದ್ದವು. ಬ್ಯಾಂಕಿಂಗ್ ಉದ್ಯಮ ಸ್ಥಗಿತಗೊಂಡಿತು. ಸರಕಾರಿ ನೌಕರರೂ ಮುಷ್ಕರಕ್ಕೆ ಪೂರ್ಣ ಬೆಂಬಲ ವ್ಯಕ್ತಪಡಿಸಿದರು.

ಪಟ್ನಾದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಗಣೇಶ ಶಂಕರ ವಿದ್ಯಾರ್ಥಿ ಸಹಿತ ಪಕ್ಷದ ಹಲವು ಪ್ರಮುಖ ಮುಖಂಡರನ್ನು ಬಂಧಿಸಲಾಯಿತು. ಸಿಪಿಐ ನಾಯಕರನ್ನು ಪೋಲೀಸರು ಬಂಧಿಸಿದರು.

ಒರಿಸ್ಸಾ:

ಒರಿಸ್ಸಾದಲ್ಲಿ ಕೂಡ ಮುಷ್ಕರ ಬಹುತೇಕ ಯಶಸ್ವಿಯಾಯಿತು. ವಿಮಾನ ನಿಲ್ದಾಣಗಳಲ್ಲಿ ಕೆಲಸ ಸಾಗಲಿಲ್ಲ ಬಸ್‌ಗಳ ಸಂಚಾರವಿರಲಿಲ್ಲ ರೈಲುಗಳು ಸಂಚಾರ ಅಸ್ತವ್ಯಸ್ತವಾಯಿತು. ಅಂಗಡಿ ಮುಂಗಟ್ಟುಗಳು, ವಾಣಿಜ್ಯ ಕೇಂದ್ರಗಳು ಮುಚ್ಚಿದ್ದವು. ಎಸ್.ಬಿ.ಐ.ನ ಕೆಲವು ಶಾಖೆಗಳನ್ನು ಬಿಟ್ಟರೆ ರಾಜ್ಯಾದ್ಯಂತ ಬ್ಯಾಂಕ್‌ಗಳು ಮುಚ್ಚಿದ್ದವು. ವಿಮೆ ಕಚೇರಿಗಳಲ್ಲೂ ಕೆಲಸ ನಡೆಯಲಿಲ್ಲ. ಗಣಿಗಳಲ್ಲಿ ಕೆಲಸ ಸ್ಥಗಿತಗೊಂಡಿತ್ತು. ಕೆಲಸಕ್ಕೆ ಹಾಜರಾಗಲು ವಕೀಲರು ನಿರಾಕರಿಸಿದ್ದರಿಂದ ಒರಿಸ್ಸಾ ಹೈಕೋರ್ಟ್ ಕಲಾಪ ಕೂಡ ಸ್ಥಗಿತವಾಯಿತು. ರಾಜ್ಯಾದ್ಯಂತ ಸಿಪಿಐ(ಎಂ)ನ 600 ಕ್ಕೂ ಹೆಚ್ಚು ಕಾರ್ಯಕರ್ತರರು ಹಾಗೂ ಮುಖಂಡರನ್ನು ಬಂಧಿಸಲಾಯಿತು.

ದೆಹಲಿಯಲ್ಲಿ ಯಶಸ್ವಿ:

ಈಚಿನ ವಿಧಾನಸಭೆ ಚುನಾವಣೆಗಳಲ್ಲಿ ಹಿಂದೂ ಕೋಮುವಾದಿ ಶಕ್ತಿಗಳ ಕೋಟೆಗಳನ್ನು ನಡುಗಿಸಿದ ರಾಜ್ಯಗಳಲ್ಲಿ ಒಂದಾದ ದೆಹಲಿಯಲ್ಲಿ ಕೂಡ ಸಾರ್ವತ್ರಿಕ ಮುಷ್ಕರ ಬಹುತೇಕ ಯಶಸ್ವಿಯಾಯಿತು.

ದೆಹಲಿ ಮತ್ತು ಸುತ್ತ ಮುತ್ತ ಪ್ರದೇಶಗಳ ಹತ್ತು ಲಕ್ಷಕ್ಕೂ ಹೆಚ್ಚಿನ ದುಡಿಮೆಗಾರರು ಹರತಾಳದಲ್ಲಿ ಪಾಲ್ಗೊಂಡರು.

ಸಿಟು ನಾಯಕ ಎಚ್.ಸಿ. ಪಂತ್‌ರನ್ನು ಬಂಧಿಸಲಾಯಿತು. ವಾಜಿಪಾರ ಕೈಗಾರಿಕೆ ಕ್ಷೇತ್ರದಲ್ಲಿ ಬೃಹತ್ ರ್‍ಯಾಲಿಯೊಂದರ ಮೇಲೆ ಪೋಲೀಸರು ನಡೆಸಿದ ಲಾಠಿ ಪ್ರಹಾರದಲ್ಲಿ ಅನೇಕ ಕಾರ್ಮಿಕರು ಗಾಯಗೊಂಡರು.

ವಿಮಾನ ನಿಲ್ದಾಣದ ಕಾರ್ಮಿಕರು ಕೂಡ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ವೈರ್‌ಲೆಸ್ ಕಾರ್ಮಿಕರು ಸಫ್ದರ್‌ಜಂಗ್ ವಿಮಾನ ನಿಲ್ದಾಣದಲ್ಲಿ ಧರಣಿ ನಡೆಸಿದರು.

ಮಧ್ಯಪ್ರದೇಶ:

ಭಾರೀ ಪ್ರಮಾಣದ ಬಂಧನ ಮತ್ತು ಪೋಲೀಸ್ ದೌರ್ಜನ್ಯವನ್ನು ಲೆಕ್ಕಿಸದೆ ಮಧ್ಯಪ್ರದೇಶದಲ್ಲಿ ಮುಷ್ಕರ ಯಶಸ್ವಿಯಾಯಿತು. ಬಹುತೇಕ ಕೈಗಾರಿಕೆಗಳು ಮುಚ್ಚಿದ್ದವು. ಬ್ಯಾಂಕ್, ವಿಮೆ, ಹಣಕಾಸು ಸಂಸ್ಥೆಗಳ ಕಚೇರಿಗಳಲ್ಲಿ ಕೆಲಸ ಕಾರ್ಯಗಳು ನಡೆಯಲಿಲ್ಲ. ಸರಕಾರಿ ಕಚೇರಿಗಳಲ್ಲಿ ಕೂಡ ಹಾಜರಾತಿ ವಿರಳವಾಗಿತ್ತು ರಾಜಧಾನಿ ಭೂಪಾಲ್ ಅಲ್ಲದೆ ಅನೇಕ ನಗರ ಪಟ್ಟಣಗಳಲ್ಲಿ ರ್‍ಯಾಲಿಗಳು ನಡೆದವು.

ಗಣಿ ಉದ್ಯಮದಲ್ಲಿ ಮುಷ್ಕರದ ಪರಿಣಾಮ ಎದ್ದು ಕಾಣುತ್ತಿತ್ತು. 70,000ಕ್ಕೂ ಹೆಚ್ಚು ಅಂಗನವಾಡಿ ನೌಕರರು ಮತ್ತು ಸಹಾಯಕಿಯರು ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ರಸ್ತೆ, ರೈಲು ತಡೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಅಸ್ಸಾಂ ಜನ ಜೀವನ ಅಸ್ತವ್ಯಸ್ತ

ಮುಷ್ಕರದ ಕರೆಗೆ ಉತ್ತಮ ಪ್ರತಿಕ್ರಿಯೆ ಕಂಡುಬಂದ ಅಸ್ಸಾಮ್‌ನಲ್ಲಿ ಜನಜೀವನ ಅಸ್ತವ್ಯಸ್ತ ಗೊಂಡಿತ್ತು. ವಾಸ್ತವವಾಗಿ ಮುಷ್ಕರ "ಬಂದ್" ಆಗಿ ಪರಿವರ್ತನೆಗೊಂಡಿತು. ಕೇಂದ್ರ ಮತ್ತು ರಾಜ್ಯ ಸರಕಾರಿ ಕಚೇರಿಗಳು, ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ವಾಣಿಜ್ಯ ಕೇಂದ್ರಗಳು ಮುಚ್ಚಿದ್ದವು. ರಸ್ತೆಗಳಲ್ಲಿ ಸಂಚಾರ ವಿರಳವಾಗಿತ್ತು. ರೈಲುಗಳ ಸಂಚಾರ ರದ್ದುಪಡಿಸಲಾಗಿತ್ತು. ಅಥವಾ ವೇಳೆಯನ್ನು ಬದಲಾಯಿಸಲಾಯಿತು.

ರಾಜಧಾನಿ ಗುವಾಹಟಿ ಒಂದರಲ್ಲೇ ಮೂರುಸಾವಿರ ಕಾರ್ಯಕರ್ತರನ್ನು ಬಂಧಿಸಲಾಯಿತು. ಅಸ್ಸಾಮ್‌ನಲ್ಲಿ ಎಡಪಕ್ಷಗಳಲ್ಲದೆ ಆಳುವ ಎ.ಜಿ.ಪಿ. ಕೂಡ ಮುಷ್ಕರಕ್ಕೆ ಬೆಂಬಲ ಸಾರಿತ್ತು.

ಪಂಜಾಬ್‌ನಲ್ಲಿ:

ಪಂಜಾಬಿನ 17 ಪ್ರಮುಖ ನಗರಗಳಲ್ಲಿ ಮುಷ್ಕರ ಪ್ರತಿಭಟನಾ ಕಾರ್ಯಕ್ರಮಗಳು ನಡೆದ ಬಗ್ಗೆ ವರದಿಗಳು ಬಂದಿವೆ. ಜಲಂಧರ್, ಲೂಧಿಯಾನ, ರಾಜಪುರ, ಬಾಲಚೌದಾ ಅಬೋಹರ್, ಮಲೌತ್, ಬಟಾಲಾ ಮುಂತಾದ ಕೈಗಾರಿಕಾ ನಗರಗಳು ಇವುಗಳಲ್ಲಿ ಸೇರಿದ್ದವು.

ದೇಶದೊಳಗೆ

ವಿಶ್ವ

ಬಿಜೆಪಿ ರಾಜ್ಯಭಾರದಲ್ಲಿ ನಿಲ್ಲದ ದೌರ್ಜನ್ಯ

ಗುಜರಾತ್ ಠಾಣೆಯಲ್ಲಿ ಬುಡಕಟ್ಟು ಯುವತಿಯ ಮೇಲೆ ಅತ್ಯಾಚಾರ

ಬಿಜೆಪಿ ಮತ್ತು ಬಿಜೆಪಿ ಮಿತ್ರಕೂಟದ ಆಡಳಿತ ಇರುವ ರಾಜ್ಯಗಳಲ್ಲಿ ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಗಳ ಪ್ರಕರಣಗಳು ಇನ್ನೂ ನಿಂತಿಲ್ಲ. ಆ ಪ್ರಕ್ರಿಯೆ ಇನ್ನೂ ಮುಂದುವರಿದಿದೆ.

ಈ ಸರಣಿಗೆ ಇದೀಗ ಬುಡಕಟ್ಟು ಮಹಿಳೆಯ ಮೇಲಿನ ದೌರ್ಜನ್ಯ ಸೇರ್ಪಡೆಯಾಗಿದೆ. ಗುಜರಾತಿನಿಂದ ಇಂತಹ ಒಂದು ಪ್ರಕರಣ ವರದಿಯಾಗಿದೆ.

ಬರೋಡಾ ಜಿಲ್ಲೆಯ ಶಿನೋರ್ ಪೋಲೀಸ್ ಠಾಣೆಯಲ್ಲಿ 25 ವರ್ಷ ಪ್ರಾಯದ ಬುಡಕಟ್ಟು ಹುಡುಗಿಯ ಮೇಲೆ ದೌರ್ಜನ್ಯ ನಡೆದಿದ್ದು ಅದನ್ನು ಮುಚ್ಚಿಹಾಕಲು ಭಾರೀ ಪ್ರಯತ್ನವೇ ಸಾಗಿದೆ.

ಒಬ್ಬ ಮೂಕ ಹುಡುಗನನ್ನು ಅಪಹರಿಸಿ ಆತನನ್ನು ಮಾರಲು ಯತ್ನಿಸಿದ ಅಪಾದನೆ ಮೇಲೆ ನವೆಂಬರ್ 27 ರಂದು ಶಿನೋರ್ ಪೊಲೀಸರು ಆಕೆಯನ್ನು ಬಂಧಿಸಿದ್ದರು. ಮೂರು ದಿನ ಠಾಣೆಯಲ್ಲಿಟ್ಟು ಹಿಂಸಿಸಲಾಯಿತು. ಆಕೆಯ ಗುಪ್ತಾಂಗಗಳನ್ನು ಮೊಂಬತ್ತಿಯಿಂದ ಸುಡಲಾಯಿತು ಹಾಗೂ ಸಬ್‌ಇನ್ಸ್‌ಪೆಕ್ಟರ್ ಮತ್ತು ಮೂವರು ಕಾನ್‌ಸ್ಟೇಬಲ್‌ಗಳು ಸಾಮೂಹಿಕ ಅತ್ಯಾಚಾರ ನಡೆಸಿದರು ಎಂದು ಯುವತಿ ಹೇಳಿದ್ದಾಳೆ. ತಲೆತಪ್ಪಿಸಿಕೊಂಡಿರುವ ಎಸ್.ಐ. ಪ್ರವೀಣ್ ಚೌಧರಿಯನ್ನು ಅಮಾನತು ಮಾಡಲಾಗಿದೆ. ದೌರ್ಜನ್ಯಕ್ಕೆ ಒಳಗಾದ ಯುವತಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ.

ಈ ಇಡೀ ಪ್ರಕರಣಕ್ಕೆ ಕಾರಣದ ಅಂಶವೆಂದರೆ ಹಿರಿಯ ಸರಕಾರಿ ಅಧಿಕಾರಿಯೊಬ್ಬ ದೌರ್ಜನ್ಯಕ್ಕೆ ಒಳಗಾದ ಹುಡುಗಿಯ ನಡತೆ ಬಗ್ಗೆಯೇ ಅನುಮಾನ ವ್ಯಕ್ತಪಡಿಸಿರುವುದು.

ಆ ಹುಡುಗಿಯ ತಂಗಿ ಜಾಮೀನು ಕೊಟ್ಟು ಬಿಡಿಸಿ ತಂದ ಮೇಲೆ ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಲಾಯಿತು. ಆದಾದ ನಂತರವಷ್ಟೇ ಡಿಸೆಂಬರ್ 3 ರಂದು ಆಕೆಗೆ ದೂರು ಸಲ್ಲಿಸಲು ಸಾಧ್ಯವಾಯಿತು. ಆದರೆ ಪೋಲೀಸರು ಡಿಸೆಂಬರ್ 9 ರಂದು ದೂರನ್ನು ದಾಖಲಿಸಿಕೊಂಡರು.

ಅತ್ಯಾಚಾರಕ್ಕೊಳಗಾದ ಮಹಿಳೆಯನ್ನು ಎಥೋಡಿಯಾದ ಬಿಜೆಪಿ ಶಾಸಕ ಮಧು ಶ್ರೀವಾಸ್ತವ ಭೇಟಿ ಮಾಡಿದ್ದು ಅತ್ಯಾಚಾರ ನಡೆದಿದ್ದಾಗಿ ಆಕೆ ಹೇಳಿರುವುದಾಗಿ ತಿಳಿಸಿದ್ದಾರೆ. ಇದರಿಂದಾಗಿ ಬಿಜೆಪಿ ಸರಕಾರಕ್ಕೆ ಇನ್ನಷ್ಟು ಇರುಸು ಮುರುಸು ಉಂಟಾಗಿದೆ.

ಭಾರತೀಯ ಜನತಾ ಪಕ್ಷದ ಶಿನೋರ್ ಘಟಕ ಮತ್ತು ಸಂಘ ಸಂಸ್ಥೆಗಳು ಈ ಪ್ರಕರಣವನ್ನು ಕೈಗೆತ್ತಿಕೊಂಡು ಹೋರಾಟಕ್ಕೆ ಸಜ್ಜಾಗಿವೆ. ಬಿಜೆಪಿ ಸರಕಾರ ಇಕ್ಕಟ್ಟಿಗೆ ಸಿಲುಕಿದೆ.

ಅಣ್ಣಾ ಡಿಎಂಕೆ ರಂಗ ಬರ್ಖಾಸ್ತು!

ತಮಿಳುನಾಡಿನಲ್ಲಿ ಕಳೆದ ಲೋಕಸಭೆ ಚುನಾವಣೆ ವೇಳೆ ಅಸ್ತಿತ್ವಕ್ಕೆ ಬಂದಿದ್ದ ಅಖಿಲ ಭಾರತ ಅಣ್ಣಾ ಡಿ.ಎಂ.ಕೆ. ನೇತೃತ್ವದ ರಂಗ ಬರ್ಖಾಸ್ತುಗೊಂಡಿದೆ. ಇದು ಬರ್ಕಾಸ್ತು ಎನ್ನುವುದಕ್ಕಿಂತ ನಾಶ ಗೊಂಡಿದೆ ಎನ್ನುವುದೇ ಹೆಚ್ಚು ಸೂಕ್ತ ಅನಿಸುತ್ತದೆ.

ಯಾಕೆಂದರೆ ರಂಗದ ಒಂದು ಪಕ್ಷ ಒಂದು ನಿಲುವು ತಳೆದರೆ ಇನ್ನೊಂದು ಪಕ್ಷ ಇನ್ನೊಂದು ನಿಲುವು ತಳೆಯುತ್ತಿತ್ತು. ಅದರ ವಿರುದ್ಧ ಇದು, ಇದರ ವಿರುದ್ಧ ಅದು ಕತ್ತಿ ಮಸೆಯುತ್ತಿತ್ತು. ಹೀಗಾಗಿ ಈ ರಂಗಕ್ಕೆ ಅರ್ಥವೇ ಉಳಿದಿರಲಿಲ್ಲ.

ಕೊನೆಗೂ ರಂಗವನ್ನು ಬರ್ಖಾಸ್ತುಗೊಳಿಸಲಾಗಿದೆ ಎಂದು ಅಣ್ಣಾ ಡಿ.ಎಂ.ಕೆ. ನಾಯಕಿ ಜಯಲಲಿತಾ ಈಚೆಗೆ 'ಅಧಿಕೃತವಾಗಿ ' ಘೋಷಿಸಿದರು. ಈ ರೀತಿಯಾಗಿ ಕೇಂದ್ರದಲ್ಲಿ ಕೋಮುವಾದಿ ಶಕ್ತಿಗಳು ಅಧಿಕಾರದ ಸೂತ್ರ ಹಿಡಿದು ಅದನ್ನು ಮುಂದುವರಿಸುವಲ್ಲಿ ನೆರವಾಗುತ್ತಿರುವ ರಂಗ ಛಿದ್ರಗೊಂಡಂತಾಗಿದೆ. ಮತೀಯವಾದಿಗಳ ಕೈಯಿಂದ ಅಧಿಕಾರದ ಸೂತ್ರ ತಪ್ಪುವ ನಿಟ್ಟಿನಲ್ಲಿ ಅದು ನೆರವಾಗಲಿ ಎಂಬುದು ಜನತೆಯ ಆಶಯವಾಗಿದೆ.

ಅಸ್ಸಾಂನಲ್ಲಿ ಮತ್ತೆ ಪ್ರತ್ಯೇಕವಾದಿಗಳ ರುದ್ರನರ್ತನ

ಸ್ವಲ್ಪ ಸಮಯದ ನಂತರ ಮತ್ತೆ ಉಗ್ರಗಾಮಿಗಳ ಪ್ರತ್ಯೇಕತಾವಾದಿ ಶಕ್ತಿಗಳ ರುದ್ರನರ್ತನ ತಾಂಡವವಾಡತೊಡಗಿದೆ.

ಅಸ್ಸಾಮ್‌ನ ಕೊಕ್ರಝರ್ ಜಿಲ್ಲೆಯಲ್ಲಿ ಡಿಸೆಂಬರ್ 12 ರ ಬೆಳಿಗ್ಗೆ ಬೋಡೋ ಉಗ್ರಗಾಮಿಗಳು 19 ಜನರನ್ನು ದಾರುಣವಾಗಿ ಕೊಂದು ಹಾಕಿದರು.

ಪಂಚಾನ್ ಭಾಥನ್ ಅರಣ್ಯಕ್ಕೆ ಹೋಗಿದ್ದ ಜನರ ಮೇಲೆ ಪ್ರತ್ಯೇಕತಾವಾದಿ ಶಕ್ತಿಗಳು ಗುಂಡು ಹಾರಿಸಿದರು. ಬೋಡೋ ಲ್ಯಾಂಡ್ ರಾಷ್ಟ್ರೀಯ ಜನತಾಂತ್ರಿಕ ರಂಗ ಈ ಹೇಯ ಕೃತ್ಯ ನಡೆಸಿದೆ.

ಬೋಡೋಯೇತರ ಜನರ ಹತ್ಯೆ ಗೈದು ಜನಾಂಗೀಯ ಕಲಹವನ್ನುಂಟು ಮಾಡುವ ಈ ಕುಕೃತ್ಯಕ್ಕೆ ವ್ಯಾಪಕ ಪ್ರತಿಭಟನೆ ವ್ಯಕ್ತವಾಗಿದೆ.

ಸಂಘ ಪರಿವಾರಕ್ಕೆ ಹೀಗೊಂದು ಹಿತವಚನ

"ಅಯೋಧ್ಯೆ ವಿವಾದದಿಂದ ದೂರ ಉಳಿಯಿರಿ ದೇಶದ ಹಿತಾದೃಷ್ಟಿಯಿಂದ ನ್ಯಾಯಾಲಯ ತನ್ನ ನಿರ್ಧಾರವನ್ನು ಪ್ರಕಟಿಸಲು ಅವಕಾಶ ಕೊಡಿ".

ಇದು ಭಾರತೀಯ ಜನತಾ ಪಕ್ಷ ಮತ್ತು ಸಂಘ ಪರಿವಾರದ ಇತರ ಸಂಘ ಸಂಸ್ಥೆಗಳಿಗೆ ಮಾಡಿಕೊಳ್ಳಲಾಗಿರುವ ಕಳಕಳಿಯ ಮನವಿ.

ಈ ರೀತಿ ಮನವಿ ಮಾಡಿರುವುದು ಯಾವುದೇ ಜಾತ್ಯಾತೀತ ಸಂಸ್ಥೆ ಅಥವಾ ವ್ಯಕ್ತಿಯಲ್ಲ.

ದ್ವಾರಕಾ ಶಾರದಾ ಪೀಠದ ಜಗದ್ಗುರು ಶಂಕರಾಚಾರ್ಯರು ಸಂಘ ಪರಿವಾರಕ್ಕೆ ಈ ಪರಿಯ ಮನವಿ ಮಾಡಿದ್ದಾರೆ.

ನ್ಯಾಯಾಲಯ ಪ್ರತಿಕೂಲ ತೀರ್ಪು ಕೊಟ್ಟರೂ ವಿವಾದಿತ ಸ್ಥಳದಲ್ಲೇ ರಾಮಮಂದಿರ ನಿರ್ಮಿಸುವುದಾಗಿ ವಿಶ್ವ ಹಿಂದೂ ಪರಿಷತ್ತು ಹೇಳಿರುವುದಕ್ಕೆ ಈ ಸ್ವಾಮಿ ವಿಷಾದ ವ್ಯಕ್ತಪಡಿಸಿದ್ದಾರೆ.

ಸಂಬಂಧಪಟ್ಟ ಧಾರ್ಮಿಕ ಮುಖಂಡರೊಂದಿಗೆ ಮಾತುಕತೆ ನಡೆಸುವ ಮೂಲಕ ಅಥವಾ ನ್ಯಾಯಾಲಯ ಈ ವಿವಾದವನ್ನು ಬಗೆಹರಿಸಬಹುದಾಗಿದೆ ಎಂದು ಡಿಸೆಂಬರ್ 11 ರಂದು ಉತ್ತರ ಪ್ರದೇಶದ ಮೀರತ್‌ನಲ್ಲಿ ಅವರು ಹೇಳಿದರು.

ಶರತ್ ಚಂದ್ರ

ವೆನೆಜುವೆಲಾ ಅಧ್ಯಕ್ಷೀಯ ಚುನಾವಣೆಯಲ್ಲಿ ಎಡಪಂಥೀಯ ಅಭ್ಯರ್ಥಿಗೆ ಜಯ

ವೆನೆಜುವಾಲಾದಲ್ಲಿ ಇತ್ತೀಚೆಗೆ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಕಳೆದ 40 ವರ್ಷಗಳಲ್ಲಿ ಮೊದಲ ಬಾರಿಗೆ, ದೇಶದ ಎರಡು ಪ್ರಮುಖ ಪಕ್ಷಗಳಲ್ಲದೆ ಇತರ ಪಕ್ಷವೊಂದರ ಅಭ್ಯರ್ಥಿ ಆಯ್ಕೆಯಾಗಿ ಎಲ್ಲರನ್ನೂ ಆಶ್ಚರ್ಯಪಡಿಸಿದ್ದಾರೆ. ಆತ ಹ್ಯುಗೋ ಚಾವೆಜ್. ಇದು ವೆನೆಜುವಾಲಾದ ಆಳುವ ವರ್ಗಗಳನ್ನು ಮಾತ್ರವಲ್ಲ, ಇಡೀ ದಕ್ಷಿಣ ಅಮೆರಿಕ ಹಾಗೂ ಉತ್ತರ ಅಮೆರಿಕಾದ ಉಚ್ಚವರ್ಗದವರನ್ನು ದಂಗುಬಡಿಸಿದೆ. ಹಿಂದೆ ಬೇಸ್‌ಬಾಲ್ ಆಟಗಾರನಾಗಿ ಪ್ರಖ್ಯಾತನಾಗಿದ್ದ ಚಾವೇಜ್ ಕಳೆದ ಹಲವು ವರ್ಷಗಳಿಂದ ಒಂದಲ್ಲ ಒಂದು ರೀತಿಯಲ್ಲಿ ಸುದ್ದಿಯಲ್ಲಿದ್ದವರು. ಹಿಂದೆ ಸೈನ್ಯದ ವಿಶೇಷ ಪಡೆಗಳ ಕಮಾಂಡರ್ ಆಗಿದ್ದ ಅವರು ಪರಿಣತ ಪ್ಯಾರಾಟ್ರೂಪರ್ ಸಹ. ಆರು ವರ್ಷಗಳ ಹಿಂದೆ 1992 ರಲ್ಲಿ ದೇಶ ಆರ್ಥಿಕ- ರಾಜಕೀಯ ಬಿಕ್ಕಟ್ಟು ಎದುರಿಸುತ್ತಿದ್ದಾಗ ಅವರು ಮಿಲಿಟರಿ ಕ್ಷಿಪ್ರಕ್ರಾಂತಿಗೆ ಪ್ರಯತ್ನಿಸಿ ಬಂಧಿಸಲ್ಪಟ್ಟಿದ್ದರು. ಆಗಲೂ ಆಗಿನ ಅಧ್ಯಕ್ಷರ ಹಗರಣಗಳು, ಭ್ರಷ್ಟಾಚಾರ, ದೇಶದ ಬಡಜನರ ಬದುಕನ್ನು ದುರ್ಭರಗೊಳಿಸುವ ಆರ್ಥಿಕ ನೀತಿಗಳ ವಿರುದ್ಧ ಅವರು ಕಿಡಿಕಾರಿ ಜನಪ್ರಿಯರಾಗಿದ್ದರು. ಈಗಲೂ ಅಮೆರಿಕಾಕ್ಕೆ ತೈಲ ಸರಬರಾಜು ಮಾಡುವ ದೇಶಗಳಲ್ಲಿ ಮೊದಲನೆಯ ಸ್ಥಾನದಲ್ಲಿರುವ ವೆನೆಜುವೆಲಾ ದಲ್ಲಿ ಶೇಕಡಾ 80 ಬಡತನದ ರೇಖೆಯ ಕೆಳಗಿದ್ದಾರೆ. 40 ವರ್ಷಗಳ ಹಿಂದೆ ಶೇಕಡಾ 40 ಜನ ಮಾತ್ರ ಬಡತನದ ರೇಖೆಯ ಕೆಳಗಿದ್ದರು. ಇದಕ್ಕೆ ಕಾರಣವಾದ ಎರಡು ಪಕ್ಷಗಳ ಬಗೆಗಿನ ಕೋಪ, ಇದನ್ನು ಸಾಧ್ಯವಾಗಿದ್ದ ರಾಜಕೀಯ ವ್ಯವಸ್ಥೆಯ ಬಗ್ಗೆ ಆಕ್ರೋಶದ ಅಲೆಯಲ್ಲಿ ಅವರು ಗೆದ್ದು ಬಂದಿದ್ದಾರೆ. ಅವೆರಡರ ಬಗೆಗೂ ನಿರ್ದಿಷ್ಟ ಕ್ರಮಕೈಗೊಳ್ಳುವ ಭರವಸೆ ಮೇಲೆ ಅವರು ಆಯ್ಕೆಯಾಗಿದ್ದಾರೆ.

ಕನಿಷ್ಟ ಕೂಲಿಯನ್ನು ಏರಿಸುವುದು, ತೆರಿಗೆಗಳ್ಳತನ ಹಾಗೂ ಭ್ರಷ್ಟಾಚಾರದ ವಿರುದ್ಧ ಸಮರ, ಸಾಮಾಜಿಕ ವೆಚ್ಚಗಳಿಗೆ ಬೇಕಾದ ಸಂಪನ್ಮೂಲಗಳ ಹೊಂದಾಣಿಕೆ, ಹೊಸ ಸಂವಿಧಾನ ರಚಿಸಲು ಚುನಾಯಿತ ಸಂವಿಧಾನ ಸಭೆಗೆ ಕ್ರಮ ಚಾವೆಜ್‌ರ ಕೆಲವು ಚುನಾವಣಾ ಭರವಸೆಗಳು. ಅವರನ್ನು ಎರಡು ಪ್ರಮುಖ ಪಕ್ಷಗಳು ಬಿಟ್ಟರೆ ಇತರ ಎಲ್ಲಾ ಪಕ್ಷಗಳು ಬೆಂಬಲಿಸಿದ್ದವು. ಅವುಗಳಲ್ಲಿ ಎಡಪಂಥೀಯ ಪಕ್ಷಗಳು ಪ್ರಮುಖವಾಗಿದ್ದವು ಮತ್ತು 1994 ರಲ್ಲಿ ಅವರನ್ನು ಜೈಲಿನಿಂದ ಬಿಡುಗಡೆ ಮಾಡಿದಾಗ ಅವರು ಕ್ಯೂಬಾಕ್ಕೆ ಹೋಗಿ ಕ್ಯಾಸ್ಟ್ರೋ ಜತೆ ಚರ್ಚೆ ನಡೆಸಿ ಬಂದಿದ್ದರು. ಇದರಿಂದ ಅವರನ್ನು ಕಮ್ಯುನಿಸ್ಟರು ಎಂದು ಕರೆಯಲಾಗಿದೆ. ಆದರೆ ಅವರು ಕಮ್ಯುನಿಸ್ಟರೇನಲ್ಲ. ಈ ರೀತಿ ನೋಡಿದರೆ ಅವರ ಆಯ್ಕೆ ಭಾರೀ ಆಶ್ಚರ್ಯಕಾರಿಯೇನಲ್ಲ. ಪೋಲೋ ಪೇಟ್ರಿಯಾಟಿಕೊ ಎಂಬ ರಾಜಕೀಯ ಒಕ್ಕೂಟ ಇತ್ತೀಚಿನ ಹಲವು ಚುನಾವಣೆಗಳಲ್ಲಿ ಮುನ್ನಡೆ ಸಾಧಿಸಿತ್ತು. ಪಾರ್ಲಿಮೆಂಟ್‌ನ 35 ಶೇಕಡಾ ಸ್ಥಾನಗಳನ್ನು, 23 ರಾಜ್ಯಗಳಲ್ಲಿ 8 ರ ಗವರ್ನರ ಹುದ್ದೆಗಳನ್ನು ಪಡೆದುಕೊಂಡಿತ್ತು. ಅವರು ಭರವಸೆಗಳನ್ನು ಸಾಕಾರಗೊಳಿಸಲು ದುಡಿಯುತ್ತಾರೋ, ಅಮೆರಿಕದ ಆಳುವ ವರ್ಗಗಳು ಅದನ್ನು ಬಿಡುತ್ತವೋ ಎಂಬುದನ್ನು ಇಡೀ ಅಮೆರಿಕಾ ಉತ್ಸುಕತೆಯಿಂದ ನೋಡುತ್ತಿದೆ.

ತೈವಾನ್‌ನಲ್ಲಿ ಚೀನಾ-ವಿರೋಧಿ ಪಕ್ಷಕ್ಕೆ ಸೋಲು

ತೈವಾನ್‌ನಲ್ಲಿ ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ ಪ್ರಮುಖ ವಿರೋಧ ಪಕ್ಷವಾದ ಡೆಮಾಕ್ರೆಟಿಕ್ ಪ್ರೋಗ್ರೆಸಿವ್ ಪಾರ್ಟಿ(ಡಿಪಿಪಿ) ಪಕ್ಷಕ್ಕೆ ಸೋಲಾಗಿದೆ. ಆಳುವ ಪಕ್ಷವಾದ ಕ್ಯೂಮಿಂಟಾಂಗ್ ಪುನಃ ಆರಿಸಿ ಬಂದಿದೆ. ಡಿಪಿಪಿ ಚೀನಾದ ಜತೆ ಪುನರೈಕ್ಯತೆಯನ್ನು ಸಾರಾಸಗಟಾಗಿ ವಿರೋಧಿಸಿದರೆ, ಕ್ಯೂಮಿಂಟಾಂಗ್ ಹಂತ ಹಂತವಾಗಿ ಚೀನಾದ ಜತೆ ಪುನರೈಕ್ಯತೆಗೆ ಪರವಾಗಿದೆ. ಪಾರ್ಲಿಮೆಂಟಿನ ಚುನಾವಣೆಗಳಲ್ಲಿ ಕ್ಯೂಮಿಂಟಾಂಗ್ 123 ಸೀಟುಗಳನ್ನು ಗಳಿಸಿದರೆ, ಡಿಪಿಪಿ 70 ಸೀಟುಗಳಿಸಿದೆ. ಇದರ ಜತೆಗೆ ರಾಜಧಾನಿ ಟಾಯಿಪೆಯಿ ಹಾಗೂ ಕಾವ್‌ಸ್ಲುಂಗ್ ಸಿಟಿಯ ಸಭೆಗೆ ನಡೆದ ಚುನಾವಣೆಗಳಲ್ಲೂ ಕ್ಯೂಮಿಂಟಾಂಗ್ ಜಯಗಳಿಸಿದೆ. ಈ ಎರಡು ನಗರಗಳ ಮೇಯರ್ ಚುನಾವಣೆಗಳಲ್ಲಿ ಕ್ಯೂಮಿಂಟಾಂಗ್ ತಾಯಿಪಿ ಮೇಯರ್‌ಗಿರಿ ಗೆದ್ದರೆ, ಡಿಪಿಪಿ ಕಾವ್‌ಸ್ಲುಂಗ್ ಮೇಯರ್ ಪದವಿ ಗೆದ್ದಿದೆ. ತಾಯಿಪೇಯಿನಲ್ಲಿ ಡಿಪಿಪಿ ಅಭ್ಯರ್ಥಿ ಚೆನ್ ಪ್ರಸ್ತುತ ಮೇಯರ್ ಆಗಿದ್ದು, ಅವರೇ ಪುನಃ ಗೆಲ್ಲುವರೆಂಬ ನಿರೀಕ್ಷೆಯಿತ್ತು. ಕಾವ್‌ಸ್ಲುಂಗ್ ಮೇಯರ್ ಸ್ಪರ್ಧೆಯಲ್ಲಿ ಡಿಪಿಪಿ ಅಭ್ಯರ್ಥಿ ಗೆದ್ದಿದ್ದಾರೆ. ಚೀನಾದ ಜತೆ ತಕ್ಷಣ ಪುನರೈಕ್ಯತೆಗೆ ವಾದಿಸುವ ನ್ಯೂ ಪಾರ್ಟಿ ಮಾತ್ರ ಹೆಚ್ಚಿನ ಮತವಾಗಲಿ, ಹೆಚ್ಚಿನ ಸೀಟುಗಳನ್ನಾಗಲೀ ಗೆದ್ದುಕೊಂಡಿಲ್ಲ.

ಡಿಪಿಪಿಯ ತಾಯಿಪೆಯಿಗೆ ಮೇಯರ್ ಅಭ್ಯರ್ಥಿ ಚೆನ್ ಗೆದ್ದಿದ್ದರೆ ಮುಂದಿನ ಚುನಾವಣೆಯಲ್ಲಿ (2000 ರಲ್ಲಿ) ಅಧ್ಯಕ್ಷೀಯ ಅಭ್ಯರ್ಥಿ ಆಗುವ ಸಾಧ್ಯತೆ ಇತ್ತು. ಅಧ್ಯಕ್ಷನಾಗಿ ಚುನಾಯಿತನಾದರೆ, ಪುನರೈಕ್ಯತೆ ಮಾತುಕತೆಗಳಲ್ಲಿ ಸಾಕಷ್ಟು ಏರುಪೇರಾಗುವ ಸಾಧ್ಯತೆ ಇತ್ತು.

ಸ್ವಿಟ್‌ಜರ್‌ಲ್ಯಾಂಡಿಗೆ ಪ್ರಥಮ ಮಹಿಳಾ ಅಧ್ಯಕ್ಷೆ

ಸೋಶಿಯಲ್ ಡೆಮಾಕ್ರೆಟಿಕ್ ಪಕ್ಷದ ಅಭ್ಯರ್ಥಿ ಶ್ರೀಮತಿ ರುಥ್ ಡ್ರೈಫಸ್ ಸ್ವಿಜ್ಜರ್‌ಲ್ಯಾಂಡಿನ ಪ್ರಥಮ ಮಹಿಳಾ ಅಭ್ಯರ್ಥಿಯಾಗಿ ಆಯ್ಕೆ ಹೊಂದಿದ್ದಾರೆ. ಸ್ವಿಸ್ ಫೆಡರೇಷನ್ 150 ವರ್ಷಗಳ ಚರಿತ್ರೆಯಲ್ಲೇ ಮೊದಲ ಬಾರಿಗೆ, ಮಹಿಳೆಯರಿಗೆ ಮತದಾನದ ಹಕ್ಕು ಸಿಕ್ಕಿದ ಕಳೆದ 27 ವರ್ಷಗಳಲ್ಲಿ ಮಹಿಳಾ ಅಧ್ಯಕ್ಷೆ ಆಯ್ಕೆಯಾಗುತ್ತಿರುವುದು ಇದೇ ಮೊದಲು. ಪಾರ್ಲಿಮೆಂಟಿನ ಚುನಾಯಿತರಾಗುವ ಸ್ವಿಸ್ ಅಧ್ಯಕ್ಷೆ 234 ರಲ್ಲಿ 158 ಮತಗಳನ್ನು ಗಳಿಸಿ ಗೆದ್ದಿದ್ದರು. ಬಲಪಂಥೀಯ ಪಕ್ಷಗಳು ಬಿಟ್ಟರೆ ಇತರ ಎಲ್ಲಾ ಪಕ್ಷಗಳು ಶ್ರೀಮತಿ ರುಥ್‌ರಿಗೆ ಬೆಂಬಲ ವ್ಯಕ್ತಪಡಿಸಿದ್ದವು.


ಯುರೋಪ್‌ನಲ್ಲಿ ಜನಾಂಗವಾದ ಹೆಚ್ಚಾಗುತ್ತಿದೆ

ಯುರೋಪ್‌ನ ನಾಗರಿಕರಲ್ಲಿ ಮೂವರಲ್ಲಿ ಒಬ್ಬ ತಾನು 'ಜನಾಂಗವಾದಿ' ಎಂದು ಸಮೀಕ್ಷೆ ಒಂದರಲ್ಲಿ ಹೇಳಿಕೊಂಡಿದ್ದು, ಇಂತಹವರ ಸುದ್ದಿ ಗಮನಾರ್ಹ ಪ್ರಮಾಣದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಹೆಚ್ಚಿದೆ. ಇದು ಯುರೋಪ್‌ನಲ್ಲಿ ಜನಾಂಗವಾದದ ಬಗ್ಗೆ ಯುರೋಪಿಯನ್ ಒಕ್ಕೂಟ ನಡೆಸಿದ ಸಮೀಕ್ಷೆಯೊಂದರಲ್ಲಿ ವ್ಯಕ್ತವಾಗಿದೆ. ತಮ್ಮ ಭವಿಷ್ಯದ ಬಗ್ಗೆ ಆತಂಕಗೊಂಡಿರುವ ನಾಗರಿಕರು, ವಿದೇಶಿಯರನ್ನು, ಇತರ ಜನಾಂಗೀಯ ಜನರನ್ನು ತಮ್ಮ ಸಮಸ್ಯೆಗಳ ಮೂಲ ಎಂದುಕೊಂಡು ಜನಾಂಗವಾದ ಪ್ರದರ್ಶಿಸುತ್ತಿದ್ದಾರೆ. ಪೂರ್ವ ಯುರೋಪಿನಿಂದ ವಲಸೆ ಬರುತ್ತಿರುವವರನ್ನು ಇವರಲ್ಲಿ ಬಹುತೇಕರು ಸ್ವೀಕರಿಸುತ್ತಿಲ್ಲ ಎಂದು ಸಮೀಕ್ಷೆ ವರದಿಯಲ್ಲಿ ಹೇಳಲಾಗಿದೆ.

ಚಿಲಿಯ ಕಟುಕ ಸರ್ವಾಧಿಕಾರಿ ಪಿನೋಶೆ ಸ್ಪೈನ್‌ಗೆ ಕಳಿಸಲು ನಿರ್ಧಾರ

ಚಿಲಿಯ ಕಟುಕ ಮಾಜಿ ಸರ್ವಾಧಿಕಾರಿ ಜನರಲ್ ಪಿನೋಶೆಯನ್ನು ಸ್ಪೈನ್‌ಗೆ ಕಳಿಸಲು ಕ್ರಮ ವಹಿಸುವಂತೆ ಬ್ರಿಟಿಶ್ ಕೋರ್ಟುಗಳಿಗೆ ಬ್ರಿಟಿಶ್ ಸರಕಾರ ಅನುಮತಿ ಕೊಟ್ಟಿದೆ. ಚಿಲಿ ಯಲ್ಲಿ ಸ್ಪಾನಿಷ್ ನಾಗರಿಕರ ಚಿತ್ರಹಿಂಸೆ ಹಾಗೂ ಕೊಲೆಗೆ ಸಂಬಂಧಪಟ್ಟಂತೆ ಜನರಲ್ ಪಿನೋಶೆ ವಿರುದ್ಧ ಸ್ಪಾನಿಷ ಪೋಲೀಸರು ವಾರಂಟು ಹೊರಡಿಸಿದ್ದು, ಪಿನೋಶಿ ಬ್ರಿಟನ್‌ಗೆ ಭೇಟಿ ನೀಡುತ್ತಿದ್ದಾಗ, ಬ್ರಿಟಿಶ್ ಸರಕಾರಕ್ಕೆ ಆತನನ್ನು ಬಂಧಿಸಿ ಸ್ಪೈನಿಗೆ ಕಳಿಸುವಂತೆ ಕೇಳಲಾಗಿತ್ತು. ಆದರೆ ಈ ಕೇಳಿಕೆಯಿಂದ ಯಾವುದೇ ಅಂತರ್‍ರಾಷ್ಟ್ರೀಯ ಕ್ರಿಮಿನಲ್ ಮೊಕದ್ದಮೆ ಹೂಡುವಂತಿಲ್ಲ. ಏಕೆಂದರೆ ಅವನಿಗೆ ಈ ಕಾನೂನುಗಳು ಅನ್ವಯಿಸುವುದಿಲ್ಲ ಎಂಬ ಪಿನೋಶೆ ವಕೀಲರ ವಾದವನ್ನು ಬ್ರಿಟಿಶ್ ಸರಕಾರ ತಳ್ಳಿ ಹಾಕಿದಂತಾಗಿದೆ. ಈ ಚಾರಿತ್ರಿಕ ನಿರ್ಣಯ ಮಾನವ ಹಕ್ಕು ಪರ ಸಂಘಟನೆಗಳಿಗೆ ಹೊಸ ಸ್ಫೂರ್ತಿ ತಂದಿದೆ. ಚಿಲಿಯಲ್ಲಿ ಹಾಗೂ ಇತರ ದೇಶಗಳಲ್ಲಿ ಆತನ ಚಿತ್ರಹಿಂಸೆ, ಕೊಲೆ, ಲೂಟಿಗೆ ತುತ್ತಾದ ಸಾವಿರಾರು ಜನ ಹರ್ಷೋಲ್ಲಾಸದಿಂದ ಈ ನಿರ್ಣಯವನ್ನು ಸ್ವಾಗತಿಸಿದ್ದಾರೆ. ಆದರೆ ಚಿಲಿ ಸರಕಾರ ಈ ನಿರ್ಣಯವನ್ನು ವಿರೋಧಿಸಿ, ಮಾತುಕತೆಗೆ ಬ್ರಿಟನ್‌ನಲ್ಲಿ ಚಿಲಿ ರಾಯಭಾರಿಯನ್ನು ಹಿಂದಕ್ಕೆ ಕರೆಸಿಕೊಂಡಿದೆ. ಬ್ರಿಟನ್ ಸಂಕೀರ್ಣ ಕಾನೂನುಗಳನ್ನು ಗಮನಿಸಿದರೆ ಪಿನೋಶಿ ವಕೀಲರು, ಸ್ಪೈನ್‌ಗೆ ಹೋಗುವುದನ್ನು ಬಹಳ ಕಾಲ ತಡೆಯ ಬಹುದು. ಆದರೆ ಪಿನೋಶಿ ಚಿಲಿಗೆ ಈಗ ಮರಳುವುದು ಅಷ್ಟೇ ಅಸಾಧ್ಯ ಎನಿಸುವಂತಾಗಿದೆ. ಬ್ರಿಟಿಶ್ ಸರ್ಕಾರದ ಈ ನಿರ್ಣಯದಿಂದ ಅಂತರ ರಾಷ್ಟ್ರೀಯ ಕುಖ್ಯಾತಿ ಯ ಸಿಐಎ ಬೆಂಬಲಿತ ಮಾಜಿ/ಹಾಲಿ ಸರ್ವಾಧಿಕಾರಿಗಳಿಗೆ ನಡುಕ ಹುಟ್ಟಿದೆ. ಸುಹಾರ್ತೋಗಳು, ಅಂತರ್‍ರಾಷ್ಟ್ರೀಯ ಓಡಾಟಕ್ಕೆ ಹೆದರಲಾರಂಭಿಸಿದ್ದಾರೆ. ○

ವಿಳನೇ 'ಏನನ್ನೂ ಕೊಳ್ಳಬೇಡಿ ದಿವಸ' ಆಚರಣೆ



ಬಂಡವಾಳಶಾಹಿಯ ಆಧಾರ ಶಿಲೆ ಈಗ ಕೊಳ್ಳುಬಾಕ ಸಂಸ್ಕೃತಿ - ಕಂಡದ್ದನ್ನೆಲ್ಲಾ ಬೇಕೆನ್ನಿಸುವ, ಕೊಳ್ಳಬೇಕೆನಿಸುವ, ನೆರೆಮನೆಯಾತನ/ಆಕೆ ಹತ್ತಿರ ಇದ್ದದ್ದೆಲ್ಲಾ ನನ್ನ ಹತ್ತಾನೂ ಇರಬೇಕು ಎನ್ನುವ ಅಂಧಃಶ್ರದ್ಧೆ ಮೇಲೆ ನಿಂತಿದೆ. ಕೊಳ್ಳುಬಾಕ ಸಂಸ್ಕೃತಿ ಪರಿಸರವನ್ನು ನಾಶಮಾಡುವಂತಹ ಅನಗತ್ಯ ಬಳಕೆಯ ಮೇಲೆ ನಿಂತಿದೆ. ಇದನ್ನು ವಿರೋಧಿಸಲು, ಆ ವಿರೋಧವನ್ನು ಜನಜನಿತಗೊಳಿಸಲು ಹಲವು ಪರಿಸರವಾದಿಗಳು ಏಳು ವರ್ಷದ ಹಿಂದೆ ನವೆಂಬರ್ 27 ರಂದು 'ಏನನ್ನೂ ಕೊಳ್ಳಬೇಡಿ ದಿವಸ' ಅಥವಾ ಬಳಕೆದಾರರ 'ಬಳಕೆ ಉಪವಾಸ' ಸತ್ಯಾಗ್ರಹ ಆರಂಭಿಸಿದರು. ಈಗ ಪ್ರತಿವರ್ಷ ಈ ದಿವಸ 'ಬಳಕೆ ಉಪವಾಸ' ವನ್ನು ಸಂಘಟಿಸಲಾಗುತ್ತಿದೆ. ವಾಯುವ್ಯ ಅಮೆರಿಕದಲ್ಲಿ ಆರಂಭವಾದ ಈ ಚಳುವಳಿ ಈಗ 15 ಅಭಿವೃದ್ಧ ದೇಶಗಳಿಗೆ ಹಬ್ಬಿದೆ. ಈ ಚಳುವಳಿಗೆ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಕಳೆದ ವರ್ಷದ ಈ 'ಬಳಕೆ ಉಪವಾಸ'ದಲ್ಲಿ ಹತ್ತುಲಕ್ಷ ಜನ ಭಾಗವಹಿಸಿದ್ದರಂತೆ.

ನವೆಂಬರ್ - ಡಿಸೆಂಬರ್ ಹಬ್ಬದ ತಿಂಗಳುಗಳು ಅಮೆರಿಕ, ಯುರೋಪ್‌ಗಳಲ್ಲಿ ಕ್ರಿಸ್‌ಮಸ್‌ಗೆ ಉಡುಗೊರೆ ಕೊಡುವುದು 'ಕೊಳ್ಳುಬಾಕ ಸಂಸ್ಕೃತಿ'ಯಲ್ಲಿ ಅರ್ಥಹೀನ ಬೂಟಾಟಿಕೆಯ ಸಂಪ್ರದಾಯವಾಗಿಬಿಟ್ಟಿದೆ. ಇದರಿಂದಾಗಿಯೇ ಈ 'ಏನನ್ನು ಕೊಳ್ಳಬೇಡಿ' ದಿನವನ್ನು ನವೆಂಬರ್ ಕೊನೆಯಲ್ಲಿ ಇಡಲಾಗಿದೆ.

ಈ ಬಗ್ಗೆ 'ಎಡ್ ಬಸ್ಟರ್ಸ್' ಎಂಬ ಸಂಘಟನೆ ಒಂದು 30 ಸೆಕೆಂಡುಗಳ ಕಮರ್ಶಿಯಲ್ (ಅಥವಾ ಜಾಹಿರಾತು) ಮಾಡಿತ್ತು. ಆದರೆ ಹೆಚ್ಚಿನ ಟೆಲಿವಿಷನ್ ನೆಟ್‌ವರ್ಕ್‌ಗಳು ಆ ಜಾಹೀರಾತನ್ನು ತಿರಸ್ಕರಿಸಿದವಂತೆ. ಅದೇ ದೊಡ್ಡ ಸುದ್ದಿಯಾಗಿ, ಆ ನೆಟ್‌ವರ್ಕ್‌ಗಳು ತಮ್ಮ ನಿರ್ಧಾರ ಬದಲಿಸಬೇಕಾಯಿತಂತೆ. ಉತ್ತರ ಅಮೆರಿಕಾದ ಸರಾಸರಿ ನಾಗರಿಕ, ಚೀನಾದ ಭಾರತದ ಸರಾಸರಿ ನಾಗರಿಕನಿಗಿಂತ ಮುವತ್ತು ಪಟ್ಟು ವಸ್ತುಗಳನ್ನು ಬಳಸುತ್ತಾನೆ. ಮೆಕ್ಸಿಕನ್ ಸರಾಸರಿ ಪ್ರಜೆಯ ಐದುಪಟ್ಟು ಹೆಚ್ಚು ವಸ್ತುಗಳನ್ನು ಬಳಸುತ್ತಾನೆ. ಇದೇ ಮುಂದುವರೆದರೆ ಈ ಜಗತ್ತು ಇಲ್ಲವಾಗುತ್ತದೆ ಎಂದು ಹೇಳುವ ಈ ಜಾಹೀರಾತು ಭಾರೀ ಜನಪ್ರಿಯವಾಯಿತು.

ಹರತಾಳ-ಮುಷ್ಕರ

ಪುಟ 4 ರಿಂದ

ಜನ ರಸ್ತೆ ತಡೆ ನಡೆಸಿದರು.ತೋರಣಗಲ್ಲಿನಲ್ಲಿ 150ಕ್ಕೂ ಹೆಚ್ಚು ಜನಪ್ರತಿಭಟನಾ ಮೆರವಣಿಗೆ ನಡೆಸಿದರು. ಕುರುಗೋಡಿನಲ್ಲಿ ಅಂಗನವಾಡಿ ನೌಕರರು ಪ್ರತಿಭಟನಾ ಪ್ರದರ್ಶನ ನಡೆಸಿದರೆ, ಕಂಡಟ್ಟಿ ಗ್ರಾಮ, ತಿರುತೂಪುರ ಗ್ರಾಮ ಹಾಗೂ ಕೋಳೂರು ಹೊಸ ಹೆದ್ದಾರಿಗಳ ಕರ್ನಾಟಕ ಪ್ರಾಂತ ರೈತ ಸಂಘಕ್ಕೆ ಹಾಗೂ ಕೂಲಿಕಾರರ ಸಂಘಕ್ಕೆ ಸೇರಿದ ಸುಮಾರು 700 ಜನರು ಬೆಳಗ್ಗೆ 7 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ರಸ್ತೆ ತಡೆ ನಡೆಸಿದರು.

ಒಟ್ಟಾರೆ ಜಿಲ್ಲೆಯಾದ್ಯಂತ 10,000 ಕ್ಕೂ ಹೆಚ್ಚು ಜನ ಪ್ರತಿಭಟನೆಯಲ್ಲಿ ಹಾಗೂ ಬಹಿರಂಗ ಸಭೆಗಳಲ್ಲಿ ಭಾಗವಹಿಸಿ ಯಶಸ್ವಿಗೆ ಕಾರಣರಾದರೆಂದು, ಬ್ಯಾಂಕ್ ಎಲ್.ಐ.ಸಿ. ನೌಕರರು ಬಂದಿಗೆ ಬಂದು ಮೆರವಣಿಗೆ ನಡೆಸಿದ್ದು ವಿಶೇಷವೆಂದು ಎಪ್.ಪಿ.ಎಂ.ಓ ಬಳ್ಳಾರಿ ಜಿಲ್ಲಾ ಮುಂದಾಳುಗಳು ತಿಳಿಸಿದ್ದಾರೆ. ಎ.ಐ.ಟಿ.ಯು.ಸಿ.ಯಿಂದ ಇಸ್ಮಾಯಿಲ್, ಯು.ಟಿ.ಯು.ಸಿ. (ಎಲ್.ಎಸ್) ನಿಂದ ಶೇಖರ್ ಸಿ.ಐ.ಟಿ.ಯು.ನಿಂದ ಪ್ರಸನ್ನ ಕುಮಾರ್, ಕರ್ನಾಟಕ ಪ್ರಾಂತ ರೈತ ಸಂಘದ ಯು.ಬಸವರಾಜ್, ರಂಗಪ್ಪದಾಸ್, ಡಿ.ವೈ.ಎಫ್.ಐ ಮುಂದಾಳು ಬಿ. ಗಣೇಶ್, ಅಂಗನವಾಡಿ ನೌಕರರ ಸಂಘದ ನಾಗರತ್ನ, ಬಿ.ಇ.ಎಫ್.ಐ.ನ ನಾಗಭೂಷಣರಾವ್, ಎ.ಐ.ಐ.ಇ.ಎ. ನ ಸೂರ್ಯನಾರಾಯಣ ಜಿಲ್ಲೆಯ ಜನತೆಯನ್ನು ಅಭಿನಂದಿಸಿದ್ದಾರೆ.

ಉಡುಪಿಯಲ್ಲಿ.......

9 ರಂದು ಸಿಐಟಿಯು ಮತ್ತು ವಿಮಾ ಸಂಘಟನೆಯ ಸುಮಾರು 25 ಕಾರ್ಯಕರ್ತರು ಉಡುಪಿ ನಗರದ ಎಲ್ಲ ರಸ್ತೆಗಳಲ್ಲಿ ಪಾದಯಾತ್ರೆ ನಡೆಸಿ, ಬೇಡಿಕೆಗಳ ಮತ್ತು ಚಳವಳಿಯ ಕಾರ್ಯಕ್ರಮಗಳ ವಿವರಗಳಿದ್ದ ಕರಪತ್ರಗಳನ್ನು ಹಂಚಿದರು.

ಡಿ. 10 ರಂದು ಉಡುಪಿ ನಗರ ಮತ್ತು ಸುತ್ತಮುತ್ತಲಿನ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಾಪಕವಾಗಿ ಮೈಕ್ ಪ್ರಚಾರ ನಡೆಸಿ ಹರತಾಳ ಆಚರಿಸಿ, ಸಾರಿಗೆ ಮುಷ್ಕರ ನಡೆಸುವಂತೆ ಪ್ರಚಾರ ನಡೆಸಿಸಲಾಯಿತು.

11ರ ಮುಷ್ಕರದಲ್ಲಿ ಉಡುಪಿ ತಾಲೂಕಿನಲ್ಲಿ ಎಲ್ಲ ಖಾಸಗಿ ಬಸ್ಸುಗಳು ಪೂರ್ತಿಯಾಗಿ ಸಂಚಾರ ನಿಲ್ಲಿಸಿದ್ದವು. ಅತಿ ಕಡಿಮೆ ಸಂಖ್ಯೆಯಲ್ಲಿ ರಿಕ್ಷಾಗಳು ಚಲಿಸುತ್ತಿದ್ದವು. ಸುಮಾರು 11ರ ವೇಳೆಗೆ ಉಡುಪಿ ನಗರ ಹೆಚ್ಚಿನ ಎಲ್ಲ ಅಂಗಡಿಗಳು ಮುಚ್ಚಲ್ಪಟ್ಟಿದ್ದವು.

ಉಡುಪಿ ನಗರದ ಅಂಬಾಗಿಲಿನಲ್ಲಿ ಸಿ.ಐ.ಟಿ.ಯು ಕಾರ್ಯಕರ್ತರು ನೂರಾರು ಸಂಖ್ಯೆಯಲ್ಲಿ ರಾ. ಹೆದ್ದಾರಿ 17 ರಲ್ಲಿ ರಸ್ತೆ ತಡೆ ಮಾಡಿದರು.

ವ್ಯಾಪಕವಾದ ಪ್ರಚಾರದಿಂದಾಗಿ 11 ರ ಕಾರ್ಯಕ್ರಮ ಉಡುಪಿ ತಾಲೂಕಿನಲ್ಲಿ ಯಶಸ್ವಿಯಾಗಿದೆ. ಮುಷ್ಕರ ದಿಂದಾಗಿ ಬ್ಯಾಂಕು ಮತ್ತು ವಿಮಾ ಕಛೇರಿಗಳಲ್ಲಿ ದೈನಂದಿನ ವ್ಯವಹಾರಗಳು ಸ್ಥಗಿತಗೊಂಡಿದ್ದವು.

ಕೋಲಾರದಲ್ಲಿ.......

ಶ್ರೀನಿವಾಸಪುರ ತಾಲ್ಲೂಕು ಕೇಂದ್ರದಲ್ಲಿ ಡಿಸೆಂಬರ್ 11 ರಂದು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ತಾಲ್ಲೂಕು ಕಛೇರಿ ಮುಂಭಾಗದಲ್ಲಿ ರಸ್ತೆ ತಡೆ ಚಳುವಳಿ ನಡೆಲಾಯಿತು. AIKS, DYFI, SFI, LIC ನೌಕರರು ಸೇರಿದಂತೆ 50 ಕ್ಕೂ ಹೆಚ್ಚು ಜನ ಕಾರ್ಯಕರ್ತರು ಈ ರಸ್ತೆ ತಡೆ ಚಳುವಳಿ ಯಲ್ಲಿ ಭಾಗವಹಿಸಿದ್ದರು. ಕೇಂದ್ರಸರ್ಕಾರದ ಹೊಸ ಆರ್ಥಿಕ ಕೃಷಿ ಕೈಗಾರಿಕಾ, ಶಿಕ್ಷಣ, ಬ್ಯಾಂಕಿಂಗ್ ನೀತಿಗಳನ್ನು, ಅಗತ್ಯವಸ್ತುಗಳ ಬೆಲೆ ಏರಿಕೆ ಕುರಿತು ರಸ್ತೆ ತಡೆ ಸಂದರ್ಭದಲ್ಲಿ ರೈತ ಸಂಘದ ಕಾರ್ಯದರ್ಶಿ ಪಿ.ಆರ್. ಸೂರಿ ಮಾತನಾಡಿದರು. ಸುಮಾರು ಒಂದು ಗಂಟೆಗೂ ಮೀರಿ ರಸ್ತೆತಡೆ ಮಾಡಿದಾಗ ಪೋಲೀಸರು 30 ಜನರನ್ನು ಬಂಧಿಸಿ ಬಿಡುಗಡೆ ಮಾಡಿದರು.

ಅಂಗನವಾಡಿ ನೌಕರರು ಸುಮಾರು 300 ಜನಕ್ಕೂ ಮೀರಿ ಹೋರಾಟದಲ್ಲಿ ಭಾಗವಹಿಸಿದ್ದರು. ಸುರಿಯುವ ಮಳೆಯನ್ನೂ ಲೆಕ್ಕಿಸದೆ ಕೆಲವು ಛತ್ರಿಗಳನ್ನು ಹಿಡಿದು, ಉಳಿದವರು ಮಳೆಯಲ್ಲಿ ನೆಂದುಕೊಂಡೇ ಸಿ.ಡಿ.ಪಿ.ಓ. ಕಛೇರಿಯಿಂದ ಮೆರವಣಿಗೆ ನಡೆದು ಡಿ.ವಿ.ಜಿ. ವೃತ್ತದಲ್ಲಿ ರಸ್ತೆ ತಡೆ ಚಳುವಳಿ ನಡೆಸಿ ತಾಲ್ಲೂಕು ಕಛೇರಿಯ ಮುಂಭಾಗದಲ್ಲಿ ಬಹಿರಂಗ ಸಭೆಯನ್ನು ನಡೆಸಿದರು. ಹೋರಾಟದ ನೇತೃತ್ವವನ್ನು ಗೌರವಾಧ್ಯಕ್ಷರಾದ ವಿ. ನಾಗಪ್ಪ, ಅಧ್ಯಕ್ಷರಾದ ಎನ್. ಭಾಗ್ಯಲಕ್ಷ್ಮಮ್ಮ ಕಾರ್ಯದರ್ಶಿ ಗೌರಮ್ಮ ವಹಿಸಿದ್ದರು. ತಾಲ್ಲೂಕಿನ ಯಾವುದೇ ಒಂದು ಹಳ್ಳಿಯಲ್ಲಿಯೂ ಅಂಗನವಾಡಿ ಕೇಂದ್ರಗಳು ಕೆಲಸ ಮಾಡಲಿಲ್ಲ.

ಶಾಲಾ ಕಾಲೇಜು ಮುಷ್ಕರ:

ಎಸ್.ಎಫ್.ಐ. ನ ಗೀತಾ ನೇತೃತ್ವದಲ್ಲಿ 25 ಕ್ಕೂ ಹೆಚ್ಚು ಕಾರ್ಯಕರ್ತರು ಶಾಲಾ ಕಾಲೇಜುಗಳಿಂದ ವಿದ್ಯಾರ್ಥಿಗಳನ್ನು ಬಿಡಿಸಿ ಶ್ರೀನಿವಾಸಪುರ ಪಟ್ಟಣದಲ್ಲಿ ಯಶಸ್ವಿ ಬಂದ್ ನಡೆಸಿದರು. ಕೆಲವು ಶಾಲಾ ಕಾಲೇಜುಗಳಲ್ಲಿ ಮೊದಲೇ ರಜಾ ಘೋಷಿಸಲಾಗಿತ್ತು. ಶಾಲಾ ಕಾಲೇಜುಗಳನ್ನು ಬಿಡಿಸಲು ಎಸ್.ಎಫ್.ಐ.ನ ಜೊತೆ ಕೆಲವು ಡಿ.ಎಸ್.ಎಫ್. ವಿದ್ಯಾರ್ಥಿಗಳೂ ಸಹಕರಿಸಿದ್ದರು. ತಾಲ್ಲೂಕಿನಲ್ಲಿ ಯಲ್ದೂರು ಹೋಬಳಿ ಕೇಂದ್ರವಾಗಿದ್ದು ಇಲ್ಲಿನ ಹೊಸ ಎಸ್.ಎಫ್.ಐ. ಘಟಕವೂ ಶಾಲಾ ಕಾಲೇಜುಗಳನ್ನು ಬಿಡಿಸಿ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿಸಿ, ಬಸ್ಸುಗಳನ್ನು ತಡೆದು ಯಶಸ್ವಿ ಬಂದ್ ಆಚರಿಸಿದರು.

ವಾಜಪೇಯಿಯ - ಅಡ್ವಾಣಿಯವರ ಹೊಸ ಧರ್ಮನಿರಪೇಕ್ಷ ಯುಗಳ ಗೀತೆ?

ಐಎನ್‌ಎಸ್ ಸುದ್ದಿ ಸಂಸ್ಥೆಯ ಮಾನಿನಿ ಚಟರ್ಜಿಯವರ ಪ್ರಶ್ನೆ

ಈ ಡಿಸೆಂಬರ್ 6 ರಂದು ಬಾಬ್ರಿ ಮಸೀದಿ ಧ್ವಂಸದ 6ನೇ ವಾರ್ಷಿಕದಂದು ಆ ಧ್ವಂಸ ಕಾರ್ಯದ ಅಧ್ವರ್ಯುಗಳ ಕೈಯಲ್ಲಿ ಸರ್ಕಾರದ ಲಗಾಮು ಇದೆ. ಬಾಬ್ರಿ ಮಸೀದಿ ಇದ್ದಲ್ಲಿ ರಾಮದೇವಸ್ಥಾನ ಕಟ್ಟುತ್ತೇವೆಂಬ ಪ್ರಶ್ನೆಯ ಮೇಲೆ ಅಧಿಕಾರಕ್ಕೆ ಲಗ್ಗೆಯಿಟ್ಟಿದ್ದ ಈ ಪಕ್ಷದ ಹಿರಿಯ ಮುಖಂಡರು ಈ ಬಾರಿ ಡಿಸೆಂಬರ್ 6 ರಂದು ಬೇರೆಯೇ ರಾಗ ಹಾಡಿದರು.

ಕವಿಯೆನಿಸಿಕೊಂಡ, ಆದರೆ ಅದಕ್ಕಿಂತ ನಟನೆಯಲ್ಲೇ ಹೆಚ್ಚು ಕಾಲ ಕಳೆಯುವ ಪ್ರಧಾನಿ ವಾಜಪೇಯಿಯವರು ತಾವಾಗಿಯೇ ಒಂದು ಹೇಳಿಕೆ ನೀಡಿ ತನ್ನ ಸರಕಾರ ನಮ್ಮ ದೇಶದ ಸ್ವಂತಿಕೆಯ ಅಡಿಗಲ್ಲಾದ ಧರ್ಮನಿರಪೇಕ್ಷತೆಯನ್ನು ರಕ್ಷಿಸಲು ನಿಸ್ಸಂಧಿಗ್ಧವಾಗಿ ಬದ್ಧವಾಗಿದೆ" ಎಂದರು. ಅಷ್ಟೇ ಅಲ್ಲ, 'ಈ ದೃಢ ಬದ್ಧತೆಯ ಒಂದು ಪ್ರಮುಖ ಅಂಶ ಎಂದರೆ ಎಲ್ಲಾ ನಂಬಿಕೆಗಳ ಪೂಜಾ ಸ್ಥಳಗಳ ಪಾವಿತ್ರ್ಯತೆ ಯನ್ನು ರಕ್ಷಿಸುವುದು ಎಂದರು' - ಡಿಸೆಂಬರ್ 6 'ಆತ್ಮಶೋಧನೆ'ಯ ದಿನವಾಗಬೇಕು ಎಂದರು. ಮಸೀದಿಯೊಂದರ ಧ್ವಂಸದ ವಾರ್ಷಿಕದ ಸಂದರ್ಭದಲ್ಲಿನ ಹೇಳಿಕೆಯಿದು ಎಂಬುದನ್ನು ನೆನಪಿಟ್ಟುಕೊಳ್ಳಬೇಕು.

ಹೋಗಲಿ, ವಾಜಪೇಯಿಯವರಂತೂ ಈ ಕಾವಿಪಡೆಗಳ 'ಮುಖವಾಡ' ಎಂದೇ ಪ್ರಸಿದ್ಧರಾಗಿದ್ದಾರೆ. ಆದ್ದರಿಂದ ಈ ಮಾತು ಆ 'ಮುಖವಾಡ' ದ ಮಾತಷ್ಟೇ ಎಂದು ತಳ್ಳಿ ಹಾಕುವಾ ಎಂದರೆ ಸ್ವತಃ ಅಡ್ವಾಣಿಯವರು, ಅಯೋಧ್ಯೆಯ ರಥಯಾತ್ರೆಯ ಅಡ್ವಾಣಿಯವರು, ಬಾಬ್ರಿ ಧ್ವಂಸದ ವೇಳೆ ಸ್ವತಃ ಹಾಜರಿದ್ದ ಅಡ್ವಾಣಿಯವರು ಕೂಡಾ ಡಿಸೆಂಬರ್ 6 ರ ಘಟನೆ "ಅತ್ಯಂತ ದುರದೃಷ್ಟಕರ ಘಟನೆ' ಎಂದರಂತೆ.

ಕೆಲವರು ನಿರೀಕ್ಷಿಸಿದಂತೆ ಇನ್ನೂ ಕೆಲವರು ಸಾರಿಯೇ ಬಿಟ್ಟಂತೆ ಅಧಿಕಾರ ಕೈಗೆ ಬಂದ ಮೇಲೆ ನಿಜಕ್ಕೂ ಬಿಜೆಪಿ ಸಂಕುಚಿತ ಕಣ್ಣೋಟ ಬಿಟ್ಟಿದೆಯೇ? ಹೆಚ್ಚು ಜವಾಬ್ದಾರಿಯುತವಾಗಿದೆಯೇ?

ಬಿಜೆಪಿ ನೇತೃತ್ವದ ಸರಕಾರದ ಎಂಟು ತಿಂಗಳಂತೂ ಈ ಬಗ್ಗೆ ಯಾವುದೇ ಪುರಾವೆ ತೋರುತ್ತಿಲ್ಲ. ತದ್ವಿರುದ್ಧವಾದ ಪುರಾವೆ ಗಳನ್ನು ನೀಡುತ್ತಿದೆ. ಕ್ರಿಶ್ಚಿಯನ್ನರ ಮೇಲೆ ಹಲವೆಡೆ ಧಾಳಿ, ಮುಂಬೈಯಲ್ಲಿ ಶಿವಸೇನಾ ಕಾರ್ಯಕರ್ತರ ಗೂಂಡಾಗಿರಿ, ಚಿಕ್ಕ ಮಗಳೂರಿನಲ್ಲಿ ಬಾಬಾಬುಡನ್‌ಗಿರಿಯಲ್ಲಿ ಬಾಬ್ರಿ ಮಸೀದಿ ಪ್ರಕರಣವನ್ನು ಪುನರಾ ವರ್ತಿಸುವ ಹಲವು ಪ್ರಯತ್ನ ಇವೆಲ್ಲಾ ವಾಜಪೇಯಿಯವರ 'ಆತ್ಮ ಶೋಧನೆ' ಯನ್ನಾಗಲೀ, ಅಡ್ವಾಣಿಯವರ 'ಖೇದ' ವನ್ನಾಗಲೀ ಸಾರಲಿಲ್ಲ.

ಡಿಸೆಂಬರ್ 6 ರಂದು ವಿ.ಹೆಚ್.ಪಿ.ಯ ಮುಖಂಡ ಅಶೋಕ್ ಸಿಂಘಾಲ್‌ಗೆ ಆತ್ಮಶೋಧನೆಯ ಅಗತ್ಯ ಕಾಣಲಿಲ್ಲ. ಅವರು ಕೃಷ್ಣ ಜನ್ಮಭೂಮಿಯ 'ವಿಮೋಚನೆ' ನಡೆಸಬೇಕೆಂದು ಎಂದಿನಿನಂತೆ 'ಗುಡುಗಿದರು'. ಶಿವಸೇನೆ, ಭಜರಂಗದಳದವರಂತೂ 'ವಿಜಯ ದಿನ'ವನ್ನೇ ಆಚರಿಸಿದರು.

ಹಾಗಿದ್ದರೆ ವಾಜಪೇಯಿ, ಅಡ್ವಾಣಿಯವರ ಈ ಯುಗಳ ಗೀತೆಯ ಅರ್ಥವೇನು? ಇಲ್ಲ, ಅವರು ನಮ್ಮನ್ನು ನಮ್ಮಷ್ಟಕ್ಕೆ ಬಿಟ್ಟುಬಿಡಿ ಎಂದು ಆರ್.ಎಸ್.ಎಸ್. ಗೆ ಈ ಮೂಲಕ ಹೇಳಲಿಲ್ಲ. ಅಂತಹ ಪ್ರಾಮಾಣಿಕತೆಯನ್ನೇ ತೋರಲಿಲ್ಲ. ಏಕೆಂದರೆ ಇಬ್ಬರೂ ಬಾಬ್ರಿ ಮಸೀದಿ ಧ್ವಂಸವನ್ನು ಇನ್ನೂ ಖಂಡಿಸಿಲ್ಲ. ಈ ಯುಗಳ ಗೀತೆ ತನ್ನ ಸರಕಾರೀ ಮಿತ್ರರನ್ನು ಓಲೈಸಲಷ್ಟೇ. ಮಿತ್ರರನ್ನು ಓಲೈಸದೆ ಅಧಿಕಾರದಲ್ಲಿ ಉಳಿ ಯಲು ಸಾಧ್ಯವಿಲ್ಲ. ಇತ್ತ ಆರ್.ಎಸ್.ಎಸ್. ನ ಉಪಗ್ರಹ ಬಿಜೆಪಿ ತನ್ನ 'ಹಿಂದುತ್ವ'ವನ್ನು ಬಿಡುವಂತಿಲ್ಲ. ಅತ್ತ ಆರ್.ಎಸ್. ಎಸ್. ಅಂತೂ ಬಿಜೆಪಿಯ ಅಧಿಕಾರಾವಧಿಯಲ್ಲಿ ತನ್ನ ಹಲವು ಅಜೆಂಡಾಗಳನ್ನು ಜಾರಿಗೊಳಿಸ ಬೇಕೆಂದಿದೆ. ಈ ಎಳೆದಾಟಗಳ ಫಲವೇ ವಾಜಪೇಯಿಯವರ 'ಆತ್ಮಶೋಧನೆ'ಯ ಹೊಸ ಮುಖವಾಡ. ಪ್ರಧಾನಿಯಾಗಲು ಆಕಾಂಕ್ಷೆಯುಳ್ಳ ಅಡ್ವಾಣಿ ಯವರೂ ಬಹಳ ಮಟ್ಟಿಗೆ ಇದೇ ಎಳೆದಾಟಕ್ಕೆ ಒಳಗಾಗಿರುವು ದರಿಂದಲೇ 'ಅತ್ಯಂತ ಖೇದ' ದ ಮಾತು ಬಂತು.

ಕಾವಿ ಕೂಟ ಬಹಳ ದೂರದೃಷ್ಟಿಯ ಕೂಟ ಎನ್ನಲಾಗುತ್ತದೆ. ಅದು ನಿಜವಿರಬಹುದು. ಆದರೆ, ಈ ದೂರದೃಷ್ಟಿಯ ಮುನ್ನಡೆಯ ಹಾದಿಯಲ್ಲಿ ಹಲವು ಕಲ್ಲುಮುಳ್ಳುಗಳನ್ನು ಸರಿಸುವುದು ಹೇಗೆ ಎಂಬ ಬಗ್ಗೆ ಅದು ತಿಕ್ಕಾಟದಲ್ಲಿದೆ. ಈ ವೈರುಧ್ಯಗಳಿಗೆ ಅತಿ ಹೆಚ್ಚಾಗಿ ಬಲಿಯಾಗಿರು ವುದು ಅವರ ರಾಜಕೀಯ ಪಕ್ಷವಾದ ಬಿಜೆಪಿ. ಮುಂಬರುವ ತಿಂಗಳುಗಳಲ್ಲಿ ಈ ವೈರುಧ್ಯ ಇನ್ನಷ್ಟು ತೀಕ್ಷ್ಣಗೊಳ್ಳಲಿದೆ.

ಹಾನಗಲ್: ರಸ್ತೆತಡೆಯಲ್ಲಿ ಭಾಗವಹಿಸಿದ ಸಚಿವ ಉದಾಸಿ

ಹಾನಗಲ್‌ನಲ್ಲಿ ಪ್ರಾಂತ ರೈತ ಸಂಘ, ಪ್ರಾಂತ ಕೃಷಿಕೂಲಿಕಾರರ ಸಂಘ ಮತ್ತು ಎಸ್.ಎಫ್.ಐ. ಜಂಟಿಯಾಗಿ ಏರ್ಪಡಿಸಿದ್ದ ರಸ್ತೆತಡೆ ಚಳುವಳಿಯಲ್ಲಿ ಸ್ಥಳೀಯ ಶಾಸಕರೂ ಲೋಕೋಪಯೋಗಿ ಸಚಿವರೂ ಆಗಿರುವ ಸಿ.ಎಂ. ಉದಾಸಿಯವರು ಭಾಗವಹಿಸಿದ್ದು ವಿಶೇಷವಾಗಿತ್ತು. ಬೆಳಿಗ್ಗೆಯಿಂದಲೇ ತಾಲೂಕಿನ ಕಾಡಶೆಟ್ಟಿಹಳ್ಳಿ, ಬಿಂಗಾಪುರ, ಹುಣಸಿಕಟ್ಟಿ, ಗುಂಡೂರು, ಜಂಗಿನಕೊಪ್ಪ, ಹನುಮನಕೊಪ್ಪ, ಮಂತಿಗಿ ಎಲಿವಾಳ, ವರ್ದಿ, ನರೇಗಲ್, ಶ್ಯಾಡಗುಪ್ಪಿ, ಬ್ಯಾತನಾಳ, ಅಕ್ಕಿಆಲೂರು, ಬಾಳಂಬೀಡ್ ಮೊದಲಾದ ಗ್ರಾಮಗಳಿಂದ ಸಾವಿರಾರು ರೈತರು, ಕೂಲಿಕಾರರು ನಗರದ ಮಧ್ಯವರ್ತಿ ಸರ್ಕಲ್‌ನಲ್ಲಿ ಸೇರತೊಡಗಿದರು. ಎಸ್.ಎಫ್.ಐ. ಮುಖಂಡರಾದ ವಿಜಯ ಕುಮಾರ ದೊಡ್ಡಮನಿ, ಸಂತೋಷ ಹೊಂಬರಡಿ, ಶರೀಫ್ ಹಾದಿಮನಿ ಮೊದಲಾದವರ ನೇತೃತ್ವದಲ್ಲಿ ಸ್ಥಳೀಯ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳನ್ನು ವರ್ಗ ಬಹಿಷ್ಕಾರ ಮಾಡಿಸಿ ರಸ್ತೆ ತಡೆಗೆ ಕರೆತಂದಿದ್ದರು.

ರಸ್ತೆತಡೆ ನಡೆಯುತ್ತಿದ್ದ ಸ್ಥಳಕ್ಕೆ ಆಗಮಿಸಿದ ಸಚಿವ ಸಿ.ಎಂ.ಉದಾಸಿಯವರು ರಸ್ತೆಯ ಮಧ್ಯದಲ್ಲಿ ರಸ್ತೆ ತಡೆ ನಿರತರಾದವರ ಜೊತೆಯಲ್ಲಿ ಕುಳಿತುಕೊಂಡು ರಸ್ತೆತಡೆಯಲ್ಲಿ ಪಾಲ್ಗೊಂಡರಲ್ಲದೆ ಅಲ್ಲಿ ನೆರದಿದ್ದ 2 ಸಾವಿರಕ್ಕೂ ಹೆಚ್ಚು ಜನರನ್ನು ಉದ್ದೇಶಿಸಿ ಬಿಜೆಪಿ ಸರ್ಕಾರದ ಜನವಿರೋಧಿ ಆರ್ಥಿಕ ನೀತಿ ಹಾ[illegible] ಕೋಮುವಾದವನ್ನು ಖಂ[illegible] ಮಾತನಾಡಿದರು. ಭೂ ಹೋರಾಟದಲ್ಲಿ ತಾಲೂಕಿನ ಕೂಲಿಕಾರರು ಎದುರಿಸುತ್ತಿರುವ ಕೇಸುಗಳನ್ನು ಜನವರಿ 24 ರ ಒಳಗಾಗಿ ವಾಪಸ್ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದರು. ಎ.ಐ.ಟಿ.ಯು.ಸಿ. ನೇತೃತ್ವದ ಅಂಗನವಾಡಿ ಕಾರ್ಯಕರ್ತೆಯರು ನೂರಾರು ಸಂಖ್ಯೆಯಲ್ಲಿ ಮೆರವಣಿಗೆಯಲ್ಲಿ ಬಂದು ರಸ್ತೆ ತಡೆ ನಡೆಸಿದರು. ಬೆಳಿಗ್ಗೆ 10 ಘಂಟೆಯಿಂದ ಸಂಜೆ 5 ಘಂಟೆಯ ವರೆಗೆ ರಸ್ತೆ ತಡೆ ನಡೆದಿದ್ದು ಬಸ್ ಸಂಚಾರ ಸ್ಥಗಿತಗೊಂಡಿತ್ತು. ಕೊನೆಯಲ್ಲಿ ನಡೆದ ಸಭೆಯಲ್ಲಿ ನಿತ್ಯಾನಂದ ಸ್ವಾಮಿ, ಫಕೀರಪ್ಪ ಹೋತನಹಳ್ಳಿ, ಎಂ. ಜಿನ್ನಾ, ಸಿ.ಎಂ. ಪಾಟೀಲ್, ಜಿತೇಂದ್ರಗೌಡ ಪಾಟೀಲ್, ಸಹದೇವಪ್ಪ, ಕರಬಣ್ಣನವರ ಮತ್ತು ಹಕ್ಕಲಗೌಡ ಪಾಟೀಲ್ ಮಾತನಾಡಿದರು.

ಶಿಗ್ಗಾಂವ್‌ನಲ್ಲಿ ಕೃಷಿ ಕೂಲಿಕಾರರ ಮುಖಂಡ ಫಕೀರಪ್ಪ ಕುಂದೂರ್ ಅವರ ಮುಖಂಡತ್ವದಲ್ಲಿ ರಸ್ತೆ ತಡೆ ಚಳುವಳಿ ನಡೆಸಲಾಗಿದೆ. ಕಲಘಟಗಿಯಲ್ಲಿ ಸಿ.ಐ.ಟಿ.ಯು ಮುಖಂಡ ಎಂ.ಬಿ. ಕಟ್ಟಿ, ಕೃಷಿ ಕೂಲಿಕಾರರ ಸಂಘದ ತಾನೆವಾಲೆ ಅವರ ನೇತೃತ್ವದಲ್ಲಿ ನಗರದ 3 ಕಡೆ ಹೆದ್ದಾರಿ ಬಂದ್ ಮಾಡಲಾಗಿದೆ.

ರಾಣೇಬೆನ್ನೂರ್‌ನಲ್ಲಿ ಸಿ.ಐ.ಟಿ.ಯು ಕಾರ್ಮಿಕರು ನೇಕಾರರು, ಬ್ಯಾಂಕ್, ಎಲ್.ಐ.ಸಿ. ನೌಕರರು ಮೆರವಣಿಗೆ ಮತ್ತು ಪ್ರತಿಭಟನಾ ಸಭೆ ನಡೆಸಿದ್ದಾರೆ.

ರೋಣ್ ತಾಲ್ಲೂಕಿನ ಬೆಳವಣಿಕೆ ಗ್ರಾಮದಲ್ಲಿ ಅಬ್ದುಲ್‌ರಜಾಕ್ ಮುಲ್ಲಾ ನೇತೃತ್ವದಲ್ಲಿ ಡಿ.ವೈ.ಎಫ್.ಐ. ಕಾರ್ಯಕರ್ತರರು ರಸ್ತೆ ತಡೆ ನಡೆಸಿದ್ದಾರೆ.

ಬಿಜಾಪುರದಲ್ಲಿ......

ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ಕರೆಯ ಮೇರೆಗೆ ಬಿಜಾಪುರದಲ್ಲಿ ಬ್ಯಾಂಕ್, ಎಲ್.ಐ.ಸಿ., ಔಷಧ ಪ್ರತಿನಿಧಿಗಳ ಸಂಘ, ಸಿಐಟಿಯು, ಎಐಟಿಯುಸಿ, ರೈತ ಸಂಘ, ಮಹಿಳಾ ಸಂಘಟನೆಯ ಕಾರ್ಯಕರ್ತರನ್ನೊಳಗೊಂಡ 500 ರಷ್ಟು ಜನರ ಬೃಹತ್ ಮೆರವಣಿಗೆ ವಿಜಯಾ ಬ್ಯಾಂಕ್ ವೃತ್ತದಿಂದ ಬ್ಯಾನರ್, ಘೋಷಣೆಗಳೊಡನೆ ಹೊರಟು, ಗಾಂಧಿ ಚೌಕದಲ್ಲಿ ರಸ್ತಾರೋಕೋ ನಡೆಸ ಲಾಯಿತು. ನೆಹರೂ ಮಾರ್ಕೆಟ್, ಶಾಸ್ತ್ರಿ ಮಾರ್ಕೆಟ್, ಕಾಯಿಪಲ್ಯ ಮಾರ್ಕೆಟ್ ಗಳೆಲ್ಲಾ ಮುಚ್ಚಿದ್ದವು. ಕೆ.ಎಸ್.ಆರ್. ಟಿ.ಸಿ. ಸಾರಿಗೆ ಬಂದಾಗಿತ್ತು. ಎಲ್ಲಾ ವ್ಯಾಪಾರಸ್ತರು ಮುಷ್ಕರಕ್ಕೆ ಬೆಂಬಲ ನೀಡಿದ್ದರು. ಗಾಂಧಿಚೌಕದಲ್ಲಿ ನಡೆದ ಬೃಹತ್ ಸಭೆಯಲ್ಲಿ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ವಿ.ಎಂ.ಕಾಳೆ, ಸಿಪಿಐ(ಎಂ) ಮುಖಂಡ ಎನ್.ಕೆ. ಉಪಾಧ್ಯಾಯ, ರೈತ ಸಂಘದ ಭೀಮಸಿ ಕಲಾದಗಿ, ಬಿ.ಡಿ.ಬಿ.ಇ.ಎಯ ವಿ.ಎಸ್. ಸೀಮೆಕೇರಿ, ಔಷಧ ಪ್ರತಿನಿಧಿಗಳ ಸಂಘದ ವಿ.ಎಸ್.ಹಳ್ಳಿ, ಎಲ್.ಐ.ಸಿ. ಯೂನಿಯನ್ನಿನ ಕುಲಕರ್ಣಿ, ಎಐಟಿಯುಸಿ ಯ ಎಲ್.ಕೆ.ಚಂಚಲಕರ ಭಾಷಣ ಮಾಡಿ ಕೇಂದ್ರ ಸರ್ಕಾರದ ಆರ್ಥಿಕ ನೀತಿಯ ದುಷ್ಪರಿಣಾಮ, ಬೆಲೆಯೇರಿಕೆ, ಜಾತೀಯತೆಗೆ ಕುಮ್ಮಕ್ಕು, ಮೊದಲಾದ ವಿಷಯಗಳ ಕುರಿತು ಭಾಷಣ ಮಾಡಿ, ಈ ಹೋರಾಟಕ್ಕೆ ಸಾರ್ವಜನಿಕರ ಸಹಕಾರ ಬೇಡಿದರು. ಅನಂತರ ಮೆರವಣಿಗೆ ಡಿ.ಸಿ. ಕಚೇರಿ ಮುಂದೆ ಮತಪ್ರದರ್ಶನ ನಡೆಸಿ ಮನವಿ ಅರ್ಪಿಸಿದ ನಂತರ ರೈಲ್ ರೋಕೋ ಮಾಡಲಾಯಿತು. ರೈಲ್ ರೋಖೋ ಮುಖಂಡತ್ವವನ್ನು ಸುರೇಖಾ ರಜಪೂತ ವಹಿಸಿದ್ದರು. ಮಹಿಳೆಯರೇ ಅದರಲ್ಲಿ ಹೆಚ್ಚು ಭಾಗವಹಿಸಿದ್ದರು. ಪೋಲೀಸರು 75 ಜನರನ್ನು ಬಂಧಿಸಿ ನಂತರ ಬಿಡುಗಡೆ ಮಾಡಿದರು.

ಇಂಡಿಯಲ್ಲಿ ಸಾವಿರ ವಿದ್ಯಾರ್ಥಿಗಳು, ರೈತರು, ಬೃಹತ್ ಮೆರವಣಿಗೆ ತೆಗೆದು, ರಸ್ತಾರೋಕೋ ಮಾಡಿದರು. ಇಂಡಿಯಲ್ಲಿ ಸಂಪೂರ್ಣ ಬಂದ್ ಆಚರಿಸಲಾಯಿತು. ಬಸವನ ಬಾಗೇವಾಡಿ, ಸಿಂಧಗಿಯ ಲ್ಲಿಯೂ ರಸ್ತಾ ರೋಕೋ ನಡೆಯಿತು.

ನೋಬೆಲ್ ವಿಜೇತನಿಗೆ ತಾಯ್ನೆಲದಲ್ಲಿ ಸಂಭ್ರಮದ ಅಭಿನಂದನೆ



ಡಿಸೆಂಬರ್ 10 ರಂದು ಡಾ. ಅಮರ್ತ್ಯ ಸೆನ್ ಈ ಬಾರಿಯ ಅರ್ಥಶಾಸ್ತ್ರದ ನೊಬೆಲ್ ಪಾರಿತೋಶಕವನ್ನು ಸ್ಟಾಕ್‌ಹೋಂನಲ್ಲಿ ನಡೆದ ಸಮಾರಂಭದಲ್ಲಿ ಪಡೆದರು. ಇದೀಗ ಈ ಅಂತರ್‍ರಾಷ್ಟ್ರೀಯ ಖ್ಯಾತಿಯ ಅರ್ಥಶಾಸ್ತ್ರಜ್ಞನನ್ನು ಗೌರವಿಸುವ ಸರದಿ ಅವರ ತಾಯ್ನಾಡಿನದ್ದು - ಅವರ ತಾಯ್ನೆಲದ್ದು - ಮುಖ್ಯವಾಗಿ ಪಶ್ಚಿಮ ಬಂಗಾಳದ ಶಾಂತಿನಿಕೇತನದ್ದು. ಏಕೆಂದರೆ ಅವರು ಹುಟ್ಟಿದ್ದು, ಓದಿದ್ದು, ಕಾಲೇಜು ಶಿಕ್ಷಣ ಮುಗಿಸಿದ್ದು, ಅಷ್ಟೇ ಅಲ್ಲ ಅವರ ಸಂಶೋಧನೆಗೆ ಇಂಬು ನೋಡಿದ್ದು ಆನಂದನಗರಿಯೆನಿಸಿಕೊಳ್ಳುವ ಕಲ್ಕತ್ತ. ಸಹಜವಾಗಿಯೇ ಡಿಸೆಂಬರ್ 15 ರಂದು ಕಲ್ಕತ್ತೆಯಲ್ಲಿ ಬಂದಿಳಿದಾಗ ಅವರಿಗೆ ಭಾರೀ ಸ್ವಾಗತ ಕಾದಿತ್ತು.

ಆದರೆ ಕಲ್ಕತ್ತಾ ನಗರ ಇಷ್ಟರಿಂದಲೇ ತೃಪ್ತಿಗೊಳ್ಳುತ್ತಿಲ್ಲ. ಡಿಸೆಂಬರ್ 27 ರಂದು ನೇತಾಜಿ ಕ್ರೀಡಾಂಗಣದಲ್ಲಿ ಅವರಿಗೊಂದು ಭವ್ಯ ಹಾಗೂ ವಿಶಿಷ್ಟ ಅಭಿನಂದನಾ ಸಮಾರಂಭಕ್ಕೆ ಸಕಲ ಸಿದ್ಧತೆಗಳು ನಡೆಯುತ್ತಿವೆ. ಎಡರಂಗ ಸರ್ಕಾರ ಈ ಸಮಾರಂಭವನ್ನು ಏರ್ಪಡಿಸುತ್ತಿದೆ. ಪ್ರೊ. ಸೆನ್‌ರ ಜತೆಗೆ ಅವರ ಪತ್ನಿ ಎಮ್ಮಾ ರೊಥ್ ಶಿಲ್ಡ್, ರಾಜ್ಯಪಾಲ ಎ.ಆರ್. ಕಿದ್ವಾಯಿ, ಮುಖ್ಯಮಂತ್ರಿ ಜ್ಯೋತಿಬಸು ಈ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಜ್ಯೋತಿ ಬಸುರವರು ಪ್ರೊ. ಸೆನ್‌ರವರಿಗೆ ವಿಶಿಷ್ಟ ಸ್ಮಾರಿಕೆಗಳನ್ನು ನೀಡಲಿದ್ದಾರೆ. ಅಲ್ಲದೆ ಕಲ್ಕತ್ತಾ ಮಹಾನಗರ ಪಾಲಿಕೆ ಐತಿಹಾಸಿಕ ಪುರಭವನದ ಪ್ರತಿಕೃತಿಯೊಂದನ್ನು ನೆನಪಿನ ಉಡುಗೊರೆಯಾಗಿ ನೀಡಲಿದೆ.

ಎಲ್ಲಾ ಜನವಿಭಾಗಗಳಿಂದ ಸುಮಾರು 2500 ಮಂದಿ ಈ ಸಮಾರಂಭದಲ್ಲಿ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಇನ್ನೂ 10 ಸಾವಿರ ಮಂದಿ ಕ್ರೀಡಾಂಗಣದಲ್ಲಿ ನೆರೆಯುವ ನಿರೀಕ್ಷೆಯಿದೆ. ಇವರೆಲ್ಲಾ ಆಹ್ವಾನಿತರೇ!. ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳೂ ಭಾಗವಹಿಸಲಿದ್ದಾರೆ. ಆಹ್ವಾನ ಪತ್ರವನ್ನು ಪ್ರಖ್ಯಾತ ಕಲಾವಿದ ಗೌತಮ್ ಹಲ್ದಾರ್ ರಚಿಸಿದ್ದಾರೆ. ಆರಂಭದ ಹಾಡನ್ನು ಪ್ರಖ್ಯಾತ ರವೀಂದ್ರ ಸಂಗೀತ ಗಾಯಕಿ ಸುಚಿತ್ರ ಮಿತ್ರಾ ಹಾಡಲಿದ್ದಾರೆ. ಬಿ.ಬಿ.ಸಿ. ಮತ್ತು ಇತರ ಟಿ.ವಿ. ವಾಹಿನಿಗಳು ಈ ಸಮಾರಂಭವನ್ನು ನೇರ ಪ್ರಸಾರ ಮಾಡಲಿವೆ.

ಅರ್ಥಶಾಸ್ತ್ರದ ಅಧ್ಯಯನ ಹಾಗೂ ಸಂಶೋಧನೆಗೆ ಹೊಸ ಆಯಾಮ ನೀಡಿರುವ ಡಾ. ಅಮರ್ತ್ಯಸೆನ್ ಈ ನಡುವೆ ಬಾಂಗ್ಲಾದೇಶದ ರಾಜಧಾನಿ ಢಾಕಾಕ್ಕೂ ಹೋಗಿ ಬಂದಿದ್ದಾರೆ. ಡಿಸೆಂಬರ್ 21 ರಂದು ಅವರು ಹುಟ್ಟಿ ಬೆಳೆದ, ಶಿಕ್ಷಣ ಪಡೆದ ಶಾಂತಿನಿಕೇತನದ ಮಾವಿನ ತೋಪಿನಲ್ಲಿ ವಿಶ್ವಭಾರತಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು, ಅಧ್ಯಾಪಕರು ಅವರಿಗೆ ಅಭಿನಂದನೆ ಸಲ್ಲಿಸಲಿದ್ದಾರೆ. ಡಿಸೆಂಬರ್ 26 ರಂದು ಅವರು ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಭಾಷಣ ಮಾಡಲಿದ್ದಾರೆ. ಡಿಸೆಂಬರ್ 28 ರಂದು ಅವರು 'ಉದಾರೀಕರಣ' ಕುರಿತ ಒಂದು ವಿಚಾರ ಸಂಕಿರಣದಲ್ಲಿ ಮಾತನಾಡಲಿದ್ದಾರೆ. ಆದರೆ ಡಿಸೆಂಬರ್ 27 ರ ಅಭಿನಂದನಾ ಕಾರ್ಯಕ್ರಮವನ್ನೇ ಎಲ್ಲರೂ ಬಹುವಾಗಿ ನಿರೀಕ್ಷಿಸುತ್ತಿದ್ದಾರೆ.

ಡಿಸೆಂಬರ್ 10 ರಂದು ಪಶ್ಚಿಮ ಬಂಗಾಳ ವಿಧಾನಸಭೆ ಡಾ. ಅಮರ್ತ್ಯಸೆನ್‌ರಿಗೆ ನೊಬೆಲ್ ಪಾರಿತೋಷಕ ದೊರೆತುದರ ಬಗ್ಗೆ ಹರ್ಷ ವ್ಯಕ್ತಪಡಿಸಿ ಒಂದು ಸರ್ವ ಸಮ್ಮತಿಯ ನಿರ್ಣಯ ಕೈಗೊಂಡು ಇಂದು ಪಶ್ಚಿಮ ಬಂಗಾಳ ಮತ್ತು ಭಾರತಕ್ಕೆ ಮಾತ್ರವಲ್ಲ, ಇಡೀ ಮೂರನೇ ಜಗತ್ತಿಗೆ ಹೆಮ್ಮೆಯ ಸಂಗತಿ ಎಂದಿದೆ.

ಕಮ್ಮಿ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಅಭಿವೃದ್ಧಿ ಮತ್ತು ಉದ್ಯೋಗಾವಕಾಶ ನಿರ್ಮಾಣದ ಬಗ್ಗೆ ಸಂಶೋಧನೆ ಆರಂಭಿಸಿದ ಪ್ರೊ. ಸೆನ್ ನಂತರ ಸಾಮಾಜಿಕ ಕಲ್ಯಾಣ ಕ್ಷೇತ್ರವನ್ನು ಸಂಶೋಧನೆಗೆ ಆರಿಸಿಕೊಂಡರು. ಅಂತಿಮವಾಗಿ ಅವರು ಮೂರನೇ ಜಗತ್ತಿನ ದೇಶಗಳಲ್ಲಿ ಜನಸಾಮಾನ್ಯರ ಸಮಸ್ಯೆಗಳನ್ನು ಎತ್ತಿಕೊಂಡರು. ಅಸಮಾನ ವಿತರಣೆ, ಹಸಿವು, ಶಿಕ್ಷಣ ಹಾಗೂ ಆರೋಗ್ಯ ಸೌಲಭ್ಯಗಳ ಅಭಾವ, ಇದರಲ್ಲಿ ಒಂದು ಕಲ್ಯಾಣ ಪ್ರಭುತ್ವ ವಹಿಸಬೇಕಾದ ಒಂದು ಸಕಾರಾತ್ಮಕ ಪಾತ್ರದ ಬಗ್ಗೆ ಅವರು ಒತ್ತು ನೀಡಿದರು. ಮಾರುಕಟ್ಟೆ ಶಕ್ತಿಗಳ ಮೇಲೆ ವಿಪರೀತ ಅವಲಂಬನೆಗೆ ತದ್ವಿರುದ್ಧವಾದ ಒತ್ತು ಇದಾಗಿತ್ತು. ಆದ್ದರಿಂದ ಈ ವರ್ಷದ ಅರ್ಥಶಾಸ್ತ್ರದ ನೊಬೆಲ್ ಪಾರಿತೋಷಕವನ್ನು ಡಾ. ಸೆನ್‌ರವರಿಗೆ ನೀಡಿ ಈ ದಿಕ್ಕಿನಲ್ಲಿ ಅವರ ಕೆಲಸವನ್ನು ಗುರುತಿಸಿದಂತಾಗಿದೆ. ಈ ಮೂಲಕ ಅರ್ಥಶಾಸ್ತ್ರದಲ್ಲೂ ಒತ್ತನ್ನು ಬದಲಿಸುವ ಅಗತ್ಯವನ್ನು ಗುರುತಿಸಿದಂತಾಗಿದೆ ಎಂದು ಪಶ್ಚಿಮ ಬಂಗಾಳ ವಿಧಾನಸಭೆ ನಿರ್ಣಯ ಹೇಳಿದೆ.

ಏಶ್ಯಾಟಿಕ್ ಸೊಸೈಟಿ ಡಾ. ಸೆನ್‌ರವರನ್ನು ತನ್ನ ಗೌರವ ಫೆಲೋ ಆಗಿ ಚುನಾಯಿಸಿದೆ.

(ಕೃಪೆ: ಗಣಶಕ್ತಿ ಆನ್‌ಲೈನ್)

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India (Marxist), Karnataka State Committee. Editor: G.N. NAGARAJ